ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 1 ಭಾನುವಾರ 2024

₹4

ಸಂಪುಟ: 45 | ಸಂಚಿಕೆ: 224 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಒಳ ಮೀಸಲಾತಿ ಅನುಷ್ಠಾನದಿಂದ ಮೀಸಲಾತಿ ಪ್ರಮಾಣದಲ್ಲಿ ವ್ಯತ್ಯಾಸವಾಗದು

ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನದಾಸ್ ಸ್ಪಷ್ಟನೆ



ಮೈಸೂರು ವಿಶ್ವವಿದ್ಯಾನಿಲಯದ ವಿಜ್ಞಾನ ಭವನದಲ್ಲಿ ಶನಿವಾರ ನಡೆದ ಜಿಲ್ಲಾಮಟ್ಟದ ಸಂವಿಧಾನ ಓದು ಅಧ್ಯಯನ ಶಿಬಿರದಲ್ಲಿ ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನದಾಸ್ ಮಾತನಾಡಿದರು.

ಮೈಸೂರು, ನ.30(ಎಂಟಿವೈ)– ಬಹುವೇದಿಕೆಯ ಒಳಮೀಸಲಾತಿ ಅನುಷ್ಠಾನದಿಂದ ಮೀಸಲಾತಿ ಪ್ರಮಾಣದಲ್ಲಿ ಯಾವುದೇ ವ್ಯತ್ಯಾಸವಾಗುವುದಿಲ್ಲ ಎಂದು ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್. ನಾಗಮೋಹನದಾಸ್ ಸ್ಪಷ್ಟಪಡಿಸಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ವಿಜ್ಞಾನ ಭವನದಲ್ಲಿ ನಡೆದ 'ಜಿಲ್ಲಾಮಟ್ಟದ ಸಂವಿಧಾನ ಓದು ಅಧ್ಯಯನ ಶಿಬಿರ' ಉದ್ಘಾಟಿಸಿ ಮಾತನಾಡಿದ ಅವರು, ಒಳಮೀಸಲಾತಿ ಅನುಷ್ಠಾನ ಮಾಡಿದರೆ ಮೀಸಲಾತಿ ಪ್ರಮಾಣ ಹೆಚ್ಚಾಗುತ್ತದೆ ಎಂದು ಕೆಲವರು ಅಂದುಕೊಂಡಿದ್ದಾರೆ. ಆದರೆ, ಒಳಮೀಸಲಾತಿಯಿಂದ ಮೀಸಲಾತಿ ಪ್ರಮಾಣದಲ್ಲಿ ಹೆಚ್ಚಳವೂ ಹಾಗೂ ಕೊರತೆಯೂ ಆಗುವುದಿಲ್ಲ. ಒಳಮೀಸಲಾತಿಯಿಂದ ಸೌಲಭ್ಯವನ್ನು ಸಮುದಾಯ ಕಟ್ಟಕಡೆಯ ಜನರಿಗೂ ತಲುಪಿಸಬಹುದಾಗಿದೆ. ಆದರೆ, ಮೀಸಲಾತಿಯ ಹೆಚ್ಚು ಪ್ರಯೋಜನ ಪಡೆಯುತ್ತಿರುವ ಬಲಾಢ್ಯರು ಸ್ವಾಭಾವಿಕವಾಗಿ ಒಳ ಮೀಸಲಾತಿ ವಿರೋಧಿಸುತ್ತಿದ್ದಾರೆ. ಒಳಮೀಸಲಾತಿ ಜಾರಿಯಿಂದ ಎಲ್ಲರಿಗೂ ಅನುಕೂಲವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ದೇಶದಲ್ಲಿ ಶೇ.98ರಷ್ಟು ಉದ್ಯೋಗ ಖಾಸಗಿ ಕ್ಷೇತ್ರದಲ್ಲಿ ಸೃಷ್ಟಿಯಾಗುತ್ತದೆ. ಖಾಸಗಿಯಲ್ಲಿ ಯಾವುದೇ ಮೀಸಲಾತಿ ಇಲ್ಲ. ಉಳಿದ ಶೇ.2ರಷ್ಟು ಹುದ್ದೆಗಳು ಸರ್ಕಾರಿ ವ್ಯವಸ್ಥೆಯಲ್ಲಿ ಸೃಷ್ಟಿಯಾಗುತ್ತವೆ. ಅದರಲ್ಲಿ ಶೇ.1 ಸಾಮಾನ್ಯ ವರ್ಗಕ್ಕೆ ಉಳಿದ ಶೇ.1 ಭಾಗ ಮೀಸಲಾತಿ ವ್ಯಾಪ್ತಿಯಲ್ಲಿ ಇದೆ. ಹೊರಗುತ್ತಿಗೆ, ಹೂಡಿಕೆ ಹಿಂತೆಗೆಯುವುದು, ಹುದ್ದೆಗಳನ್ನು ಭರ್ತಿಮಾಡದೇ ಖಾಲಿ ಇರಿಸುವ ಮೂಲಕ ಮೀಸಲಾತಿ ಜಾರಿ ಮರೀಚಿಕೆಯಾಗಿದೆ. ಎಲ್ಲದಕ್ಕೂ ಮೀಸಲಾತಿ ಉತ್ತರವಲ್ಲ. ಹಾಗೇಯೇ ಅದನ್ನು ನಿರ್ಲಕ್ಷಿಸುವುದು ಸಾಧ್ಯವಿಲ್ಲ. ಉದ್ಯೋಗ ಮತ್ತು ಶಿಕ್ಷಣದ ಅವಕಾಶವನ್ನು ಎಲ್ಲೆಡೆ ಸೃಷ್ಟಿಸುವುದು ನಮ್ಮ ಆದ್ಯತೆಯಾಗಬೇಕು. ಎಲ್ಲ ಜಾತಿ, ಧರ್ಮದಲ್ಲಿ ಪ್ರತಿಭಾನ್ವಿತ ಮಕ್ಕಳಿದ್ದು, ಅವರನ್ನು ಗುರುತಿಸಿ ಮೇಲೆತ್ತುವ ಕೆಲಸ ಆಗತ್ಯ ಮತ್ತು ಅನಿವಾರ್ಯ ಎಂದರು.

ಸಂವಿಧಾನ ಬದಲಾದರೆ ದೇಶದಲ್ಲಿ ಅರಾಜಕತೆ ಸೃಷ್ಟಿಯಾಗಿ ಕೋಮುವಾದ-ಸರ್ವಾಧಿಕಾರ ಕೇಕೆ ಹಾಕಲಿದೆ. ಬುದ್ಧನ ಧಮ್ಮ ಮಾರ್ಗ, ಬಸವಣ್ಣ ಸಮಾನತೆ ಮಾರ್ಗ, ಗಾಂಧೀಜಿಯ ಅಹಿಂಸಾ ಮಾರ್ಗ, ಡಾ. ಬಿ.ಆರ್. ಅಂಬೇಡ್ಕರ್ ಸಾಮಾಜಿಕ ನ್ಯಾಯದ ಸಿದ್ಧಾಂತದಿಂದ ನಮ್ಮ ಸಂವಿಧಾನ ರೂಪುಗೊಂಡಿದೆ. ಇದರಿಂದ ಪಾಳೇಗಾರಿಕೆ ಪದ್ಧತಿ, ರಾಜ ಆಡಳಿತವನ್ನು ಕೊನೆಗಾಣಿಸಿ ನಿಜವಾದ ಭಾರತವನ್ನು ನಿರ್ಮಾಣ ಮಾಡಿದೆ. ಸಂವಿಧಾನದಿಂದ ಏನು ಬದಲಾವಣೆ ಆಗಿದೆ ಎಂದು ಕೆಲವರು ಕೇಳುತ್ತಾರೆ. ಸ್ವಾತಂತ್ರ್ಯ ಬಂದ ಸಂದರ್ಭದಲ್ಲಿ ಶೇ.30ರಷ್ಟು ಮಾತ್ರ ಶಿಕ್ಷಿತರಿದ್ದರು. ಈಗ ಶೇ.80ರಷ್ಟು ವಿದ್ಯಾವಂತರಿದ್ದಾರೆ. ಶೇ.70ರಷ್ಟು ಜನ ಬಡತನ ರೇಖೆಗಿಂತ ಕಡಿಮೆ ಇದ್ದರು. ಇಂದು ಶೇ.30ರಷ್ಟು ಜನ ಬಡತನ ರೇಖೆಗಿಂತ ಕಡಿಮೆ ಇದ್ದಾರೆ. ಗ್ರಾಮೀಣ ಪ್ರದೇಶಕ್ಕೆ ವಸತಿ, ರಸ್ತೆ, ಕುಡಿಯುವ ನೀರು ಸೇರಿದಂತೆ ಮೂಲಸೌಲಭ್ಯ ಒದಗಿಸಿ ಜನ ಜೀವನವನ್ನು ಒಂದು ಮಟ್ಟಿಗಾದರೂ ಉತ್ತಮಗೊಳಿಸಿದೆ ಎಂದರು. ಕಾರ್ಯಕ್ರಮದಲ್ಲಿ ಪ್ರಗತಿಪರ ಚಿಂತಕರಾದ ಪ್ರೊ.ಉಗ್ರನರಸಿಂಹೇಗೌಡ, ಸುಶೀಲ ಬಸವಲಿಂಗಯ್ಯ, ವಿಶ್ರಾಂತ ಕುಲಪತಿ ಪ್ರೊ.ಕೆ.ವೆಂಕಟರಾಮಯ್ಯ, ವಕೀಲ ಪಿ.ಪಿ.ಬಾಬುರಾಜ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮನೋವಿಜ್ಞಾನ, ಸಾಹಿತ್ಯ ಎರಡೂ ಮನುಷ್ಯನ ಮನಸ್ಸಿಗೆ ಸಂಬಂಧಿಸಿವೆ

ವಿಶ್ರಾಂತ ಕುಲಪತಿ ಪ್ರೊ. ವಿ.ಶ್ರೀಕಾಂತರೆಡ್ಡಿ ಅಭಿಮತ



ಮೈಸೂರಿನ ಮುಕ್ತ ವಿವಿಯ ಕಾವೇರಿ ಸಭಾಂಗಣದಲ್ಲಿ ಶನಿವಾರ ನಡೆದ ವಿಚಾರ ಸಂಕಿರಣದ ಸಮಾರೋಪ ಸಮಾರಂಭದಲ್ಲಿ ವಿಶ್ರಾಂತ ಕುಲಪತಿ ಪ್ರೊ.ವಿ.ಶ್ರೀಕಾಂತರೆಡ್ಡಿ ಮಾತನಾಡಿದರು.

ಮೈಸೂರು, ನ.30(ಪಿಎಂ)– ಅಧ್ಯಯನ ಪ್ರಕಾರಗಳು ಬೇರೆಯಾದರೂ ಮನೋವಿಜ್ಞಾನ ಮತ್ತು ಸಾಹಿತ್ಯ ಎರಡೂ ಮನುಷ್ಯನ ಮನಸ್ಸಿಗೆ ಸಂಬಂಧಿಸಿದ್ದು, ಷೇಕ್ಸ್‌ಪಿಯರ್ ಸಾಹಿತ್ಯ ಸೇರಿದಂತೆ ಹಲವರ ಸಾಹಿತ್ಯವು ಮಾನವನ ಮನಸ್ಸಿನಲ್ಲಿ ಸಂಭವಿಸುವ ವಿವಿಧ ಅಂಶಗಳ ಮೇಲೆ ಬೆಳಕು ಚೆಲ್ಲುತ್ತವೆ ಎಂದು ತಿರುಪತಿಯ ಶ್ರೀ ವೆಂಕಟೇಶ್ವರ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ವಿ. ಶ್ರೀಕಾಂತರೆಡ್ಡಿ ಅಭಿಪ್ರಾಯಪಟ್ಟರು.

ಮೈಸೂರಿನ ಮುಕ್ತ ವಿವಿಯ ಕಾವೇರಿ ಸಭಾಂಗಣದಲ್ಲಿ ವಿವಿಯ ಮನೋವಿಜ್ಞಾನ ಅಧ್ಯಯನ ವಿಭಾಗ ಹಾಗೂ ಇಂಗ್ಲಿಷ್ ಅಧ್ಯಯನ ವಿಭಾಗದ ಜಂಟಿ ಆಶ್ರಯದಲ್ಲಿ 'ಪ್ರಿಸಮ್ಸ್ ಆಫ್ ಸೈಕಾಲಜಿ ಇನ್ ದಿ ಲಿಟರರಿ ರಿಯಲಂ (ಸಾಹಿತ್ಯ ಕ್ಷೇತ್ರದಲ್ಲಿ ಮನೋವಿಜ್ಞಾನ)' ಕುರಿತು ಹಮ್ಮಿಕೊಂಡಿದ್ದ ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣದ ಸಮಾರೋಪ ಸಮಾರಂಭದಲ್ಲಿ ಶನಿವಾರ ಅವರು ಮಾತನಾಡಿದರು.

ಷೇಕ್ಸ್‌ಪಿಯರ್ ಸಾಹಿತ್ಯ ಮಾತ್ರವಲ್ಲದೆ, ರಷ್ಯಾ ಕಾದಂಬರಿಗಳು, ಟಾಲ್‌ಸ್ಟಾಯ್ ಕಾದಂಬರಿಗಳು ಸೇರಿದಂತೆ ಸಾಕಷ್ಟು ಸಾಹಿತ್ಯ ಪ್ರಕಾರಗಳು ಮಾನವ ಮನಸ್ಸಿನಲ್ಲಿ ಸಂಭವಿಸುವ ವಿವಿಧ ಅಂಶಗಳ ಬಗ್ಗೆ ಬೆಳಕು ಚೆಲ್ಲುತ್ತವೆ. ಸಾಹಿತ್ಯವು ಮಾನವನ ಮನಸ್ಸಿನಿಂದ ವ್ಯಕ್ತವಾಗುವ ಚಟುವಟಿಕೆಗಳನ್ನು ಪ್ರತಿಬಿಂಬಿಸಿದರೆ, ಮನೋವಿಜ್ಞಾನವು ಮನುಷ್ಯನ ಮನಸ್ಸಿಗೆ ಸಂಬಂಧಿಸಿದಂತೆಯೇ ಅಧ್ಯಯನ ಮಾಡುತ್ತದೆ. ಮನೋವಿಜ್ಞಾನವು ವಿಜ್ಞಾನ ಪ್ರಕಾರದಲ್ಲಿ ಮಾನವನ ಮನಸ್ಸನ್ನು ಅವಲೋಕಿಸುತ್ತದೆ. ಸಾಹಿತ್ಯ ಕಲಾ ಪ್ರಕಾರದಲ್ಲಿ ಹಾಗೂ ಮನೋವಿಜ್ಞಾನವು ವಿಜ್ಞಾನ ಪ್ರಕಾರದಲ್ಲಿ ಮಾನವ ಮನಸ್ಸಿನ ಮೇಲೆಯೇ ಬೆಳಕು ಚೆಲ್ಲುತ್ತವೆ ಎಂದು ವಿವರಿಸಿದರು.

ಬೇರೆ ಬೇರೆ ವಿಧಾನಗಳಲ್ಲಿ ಮನೋವಿಜ್ಞಾನ ಮತ್ತು ಸಾಹಿತ್ಯ ಎರಡೂ ಮನುಷ್ಯನ ಮನಸ್ಸನ್ನು ಕೇಂದ್ರೀಕರಿಸಿ ಅಧ್ಯಯನ ನಡೆಸಲಿವೆ. ಮನುಷ್ಯನ ನಡವಳಿಕೆ ವಿವರಿಸಲು ಸಾಹಿತ್ಯವು ಮನೋವಿಜ್ಞಾನದ ಕೈಯಲ್ಲಿರುವ ಸಾಧನ ಎನ್ನಬಹುದು. ಅರಿಸ್ಟಾಟಲ್ ಸೇರಿದಂತೆ ಮಹಾನ್ ತತ್ವಜ್ಞಾನಿಗಳು ವ್ಯಾಖ್ಯಾನಿಸಿದಂತೆ ಮನೋವಿಜ್ಞಾನವು ಮಾನವನ ಮನಸ್ಸನ್ನು ಅಧ್ಯಯನ ಮಾಡುತ್ತದೆ. ಮನೋವಿಜ್ಞಾನ ಮತ್ತು ಸಾಹಿತ್ಯ ಎರಡೂ ಪರಸ್ಪರ ಅವಲಂಬಿತವಾಗಿವೆ ಎಂದರು.

ಮನೋವಿಜ್ಞಾನವು ಸಾಹಿತ್ಯಕ್ಕೆ ಬೆಂಬಲವಾಗಿ ನಿಲ್ಲುತ್ತದೆ. ಮಾನವನ ನಡವಳಿಕೆಗಳನ್ನು ವಿವರಿಸಲು ಸಾಹಿತ್ಯವು ಮನೋವಿಜ್ಞಾನದ ಕೈಯಲ್ಲಿರುವ ಒಂದು ಸಾಧನ. ಸಾಹಿತ್ಯವನ್ನು ಕಲಾ ವಿಷಯವಾಗಿ ಹಾಗೂ ಮನೋವಿಜ್ಞಾನವನ್ನು ವಿಜ್ಞಾನವಾಗಿ ಪರಿಗಣಿಸಲಾಗಿದೆ. ವೈದ್ಯರು, ಆಪ್ತ ಸಮಾಲೋಚಕರಿಗೆ ಕೆಲ ವಿದ್ಯಮಾನಗಳನ್ನು ವಿವರಿಸಲು ಕೆಲ ದತ್ತಾಂಸ ಅಗತ್ಯವಾಗುತ್ತದೆ. ಈ ಪ್ರಕ್ರಿಯೆಯಿಂದಾಗಿ ಮನೋವಿಜ್ಞಾನವು ವಿಜ್ಞಾನ ಕ್ಷೇತ್ರಕ್ಕೆ ಸೇರ್ಪಡೆಗೊಂಡಿದೆ ಎಂದು ಹೇಳಿದರು.

ಸಾಹಿತ್ಯವು ವಿದ್ಯಮಾನಗಳ ಬಗ್ಗೆ ಅಭಿವ್ಯಕ್ತಿಪಡಿಸುತ್ತದೆ. ಆದರೆ ಮನೋವಿಜ್ಞಾನವು ಸಂಕೀರ್ಣವಾದ ವಿಷಯಗಳನ್ನು ಅವಲೋಕಿಸಲು ಸಾಕಷ್ಟು ಸಮಯ ಅಪೇಕ್ಷಿಸುತ್ತದೆ. ಮನೋವಿಜ್ಞಾನವು ಅರೆಪ್ರಜ್ಞೆ ಮತ್ತು ಸುಪ್ತಪ್ರಜ್ಞೆಯ ಅಂಶಗಳ ಬಗ್ಗೆ ಅವಲೋಕಿಸುತ್ತದೆ. ಆದರೆ ಸಾಹಿತ್ಯವು ಮಾನವನ ಭಾವನಾತ್ಮಕ ಅಭಿವ್ಯಕ್ತಿಯ ಮಾರ್ಗವಾಗಿದೆ ಎಂದು ತಿಳಿಸಿದರು. ಮುಕ್ತ ವಿವಿ ಕುಲಸಚಿವ ಪ್ರೊ.ಕೆ.ಬಿ.ಪ್ರವೀಣ, ಇಂಗ್ಲಿಷ್ ಅಧ್ಯಯನ ವಿಭಾಗದ ಮುಖ್ಯಸ್ಥ ಡಾ.ಎಸ್.ಶ್ರೀಕಾಂತ್, ಮನೋವಿಜ್ಞಾನ ಅಧ್ಯಯನ ವಿಭಾಗದ ಮುಖ್ಯಸ್ಥ ಡಾ.ಪಿ. ಮಂಜುನಾಥ್ ಮತ್ತಿತರರು ಹಾಜರಿದ್ದರು.

ಡಿ.4ಕ್ಕೆ ಜಿಲ್ಲಾ ಮಟ್ಟದ ಯುವಜನೋತ್ಸವ: ನಾಲ್ಕು ವೇದಿಕೆಗಳಲ್ಲಿ ವಿವಿಧ ಸ್ಪರ್ಧೆ



ಮೈಸೂರಿನ ಚಾಮುಂಡಿವಿಹಾರ ಕ್ರೀಡಾಂಗಣದ ಸಭಾಂಗಣದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು,ನ.30(ಎಂಟಿವೈ)–ಮೈಸೂರಿನ ನಜರ್‌ಬಾದ್‌ನಲ್ಲಿರುವ ಚಾಮುಂಡಿವಿಹಾರ ಕ್ರೀಡಾಂಗಣದ ಆವರಣದಲ್ಲಿ ಡಿ.4ರಂದು 'ಜಿಲ್ಲಾ ಮಟ್ಟದ ಯುವಜನೋತ್ಸವ–2024' ಕಾರ್ಯಕ್ರಮ ಆಯೋಜಿಸಿದ್ದು, ವಿವಿಧ ಸ್ಪರ್ಧೆಗಳು ಜರುಗಲಿವೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್ ತಿಳಿಸಿದ್ದಾರೆ.

ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯುವಜನರಲ್ಲಿ ಶಾಸ್ತ್ರೀಯ ಕಲೆ, ಜಾನಪದ, ಸಂಗೀತ ಹಾಗೂ ಸಂಸ್ಕೃತಿ ಬಗ್ಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಜಿಲ್ಲಾಡಳಿತ, ಜಿ.ಪಂ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ನೆಹರು ಯುವ ಕೇಂದ್ರ, ಮೈಸೂರು ವಿಶ್ವವಿದ್ಯಾನಿಲಯದ ಎನ್‌ಎಸ್‌ಎಸ್ ಘಟಕ, ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ ನೆರವಿನೊಂದಿಗೆ ಡಿ.4ರಂದು ಬೆಳಗ್ಗೆ 9ರಿಂದ ಜಿಲ್ಲಾ ಯುವಜನೋತ್ಸವ ಕಾರ್ಯಕ್ರಮ ನಡೆಸಲಾಗುತ್ತಿದ್ದು, ನಾಲ್ಕು ವೇದಿಕೆಯಲ್ಲಿ 11 ಬಗೆಯ ವಿವಿಧ ಸ್ಪರ್ಧೆಗಳು ಜರುಗಲಿವೆ ಎಂದರು.

ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಈಗಾಗಲೇ ಜಿಲ್ಲೆಯ 84 ಕಾಲೇಜು, 27 ಶಾಲೆಗಳಿಗೆ ಮಾಹಿತಿ ನೀಡಿ, ವಿವಿಧ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳಲಿಚ್ಛಿಸುವ 15ರಿಂದ 29 ವರ್ಷ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಕಳುಹಿಸಿಕೊಡುವಂತೆ ಮನವಿ ಮಾಡಲಾಗಿದೆ. ಈ ಉತ್ಸವದಲ್ಲಿ ವೈಯಕ್ತಿಕ ಹಾಗೂ ಗುಂಪು ಸ್ಪರ್ಧೆಗಳು ಸೇರಿದಂತೆ 11 ಬಗೆಯ ಸ್ಪರ್ಧೆಗಳು ನಡೆಯಲಿವೆ. ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳು ಮಾತ್ರವಲ್ಲದೆ ಜಿಲ್ಲೆಯ ಯುವಕ–ಯುವತಿಯರು ಪಾಲ್ಗೊಳ್ಳಲಿದ್ದಾರೆ. ಜಿಲ್ಲಾ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ನೋಂದಣಿಯಾಗಿರುವ ಯುವಕ–ಯುವತಿ ಸಂಘಗಳು ಹಾಗೂ ಮಂಡಳಿಗಳ ಪದಾಧಿಕಾರಿಗಳು ಭಾಗವಹಿಸಬಹುದು ಎಂದು ತಿಳಿಸಿದರು.

ವಿವಿಧ ಸ್ಪರ್ಧಾ ವಿಭಾಗ: ಕಾರ್ಯಕ್ರಮದಲ್ಲಿ ವಿಷಯಾಧಾರಿತ ಸ್ಪರ್ಧೆ–ವಿಜ್ಞಾನ ಮೇಳ ಆಯೋಜಿಸಲಾಗಿದೆ. ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ನಾವೀನ್ಯತೆ ವಿಷಯ ಕುರಿತು ವಿಜ್ಞಾನ ಮೇಳ ನಡೆಸಲಾಗುತ್ತಿದ್ದು, ಚಾಲ್ತಿಯಲ್ಲಿರುವ ವಿಜ್ಞಾನದ ಮಾಡೆಲ್‌ಗಳ ಪ್ರದರ್ಶನಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಇದಲ್ಲದೆ, ಜಾನಪದ ನೃತ್ಯ (ಗುಂಪು), ಜಾನಪದ ಗೀತೆ (ಗುಂಪು), ಜಾನಪದ ನೃತ್ಯ (ವೈಯಕ್ತಿಕ), ಜಾನಪದ ಗೀತೆ (ವೈಯಕ್ತಿಕ), ಜೀವನ ಕೌಶಲ ಸ್ಪರ್ಧೆ–ಕವಿತೆ ಬರೆಯುವುದು (ವೈಯಕ್ತಿಕ) ಕಥೆ ಬರೆಯುವುದು, ಚಿತ್ರಕಲೆ (ವೈಯಕ್ತಿಕ), ಭಾಷಣಾ (ವೈಯಕ್ತಿಕ), ಛಾಯಾಗ್ರಹಣ ಕಾರ್ಯಾಗಾರ, ಸ್ಪರ್ಧೆ ಆಯೋಜಿಸಲಾಗಿದೆ ಎಂದರು.

ಕಾರ್ಯಕ್ರಮದ ಅಂಗವಾಗಿ ಇದೇ ಮೊದಲ ಬಾರಿಗೆ 'ಯುವ ಕೃತಿ' ಅಡಿಯಲ್ಲಿ ಗುಡಿ ಕೈಗಾರಿಕೆ ಕಲಾ ಪ್ರಕಾರ, ನೇಕಾರಿಕೆ, ಜವಳಿ, ಕೃಷಿ ಉತ್ಪನ್ನಗಳ ಪ್ರದರ್ಶನ ಏರ್ಪಡಿಸಲಾಗಿದೆ. ಈ ವಿಭಾಗದಲ್ಲಿ ಯಾವುದೇ ಸ್ಪರ್ಧೆ ಇರುವುದಿಲ್ಲ. ಈ ಕಲಾ ಪ್ರಕಾರಗಳನ್ನು ಉತ್ತೇಜಿಸುವ ಸಲುವಾಗಿ ಪ್ರದರ್ಶನ ಏರ್ಪಡಿಸಲಾಗಿದೆ ಎಂದರು.

ಜಿಲ್ಲಾಮಟ್ಟದ ಯುವಜನೋತ್ಸವದಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆದವರನ್ನು 2024–25ನೇ ಸಾಲಿನ ರಾಜ್ಯಮಟ್ಟದ ಯುವಜನೋತ್ಸವ ಕಾರ್ಯಕ್ರಮಕ್ಕೆ ಆಯ್ಕೆ ಮಾಡಲಾಗುತ್ತದೆ. ಮೈಸೂರಲ್ಲಿಯೇ ರಾಜ್ಯ ಮಟ್ಟದ ಯುವಜನೋತ್ಸವವನ್ನು ಆಯೋಜಿಸಲು ಪ್ರಯತ್ನಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳ ಮೂಲಕ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಲಾಗಿದೆ. ಜಿಲ್ಲಾಮಟ್ಟದ ಯುವಜನೋತ್ಸವ ಕಾರ್ಯಕ್ರಮದಲ್ಲಿ ಸ್ಪರ್ಧಿಗಳಿಗೆ ಪ್ರಥಮ, ದ್ವಿತೀಯ, ತೃತೀಯ ಬಹುಮಾನವನ್ನಾಗಿ ಪ್ರಶಸ್ತಿ ಪತ್ರ ಮತ್ತು ಫಲಕಗಳನ್ನು ನೀಡಲಾಗುತ್ತದೆ. ಕೆಲವು ಸ್ಪರ್ಧೆಗಳಿಗೆ ಮಾತ್ರ ನೆಹರು ಯುವ ಕೇಂದ್ರದ ವತಿಯಿಂದ ನಗದು ಬಹುಮಾನ ನೀಡಲಾಗುತ್ತದೆ ಎಂದು ತಿಳಿಸಿದರು.

ಯುವಜನೋತ್ಸವ ಕಾರ್ಯಕ್ರಮಕ್ಕೆ ನೋಂದಣಿಯಾಗಲು ಆನ್‌ಲೈನ್, ಆಫ್‌ಲೈನ್‌ನಲ್ಲಿ ಸೌಲಭ್ಯ ಕಲ್ಪಿಸಲಾಗಿದೆ. ಆನ್‌ಲೈನ್‌ನಲ್ಲಿ ಗೂಗಲ್ ಫಾರ್ಮ್ ಭರ್ತಿ ಮಾಡುವ ಮೂಲಕ ನೋಂದಣಿ ಮಾಡಿಕೊಳ್ಳಬಹುದು. ಆಫ್‌ಲೈನ್ ನೋಂದಣಿ ಮಾಡಿಕೊಳ್ಳುವವರು ಸ್ಥಳದಲ್ಲೇ ನೋಂದಾಯಿಸಿಕೊಳ್ಳಬಹುದು. ಮಾಹಿತಿಗೆ ದೂ. ಸಂಖ್ಯೆ 0821–2564179 ಸಂಪರ್ಕಿಸುವಂತೆ ಕೋರಿದರು. ಸುದ್ದಿಗೋಷ್ಠಿಯಲ್ಲಿ ನೆಹರು ಯುವ ಕೇಂದ್ರದ ಅಧಿಕಾರಿ ಅಭಿಷೇಕ ಚವರೆ, ಎನ್‌ಎಸ್‌ಎಸ್ ಕಾರ್ಯಕ್ರಮ ಸಂಯೋಜಕ ಡಾ.ಎಂ.ಬಿ.ಸುರೇಶ್ ಇದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

01.12.2024 ಭಾನುವಾರ, ಮಳೆ ನಕ್ಷತ್ರ: ಅನೂರಾಧ, 19.11.2024 ರಿಂದ 01.12.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಕೃಷ್ಣ ಪಕ್ಷ, ತಿಥಿ: ಅಮಾವಾಸ್ಯೆ, ನಕ್ಷತ್ರ: ಅನೂರಾಧ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 6.30 ರಿಂದ.

■ **ಮೈಸೂರು ಕೆಥೋಲಿಕ್ ಸಂಘ:** 20ನೇ ಡಯಾಸೆಷನ್ ಕ್ರಿಸ್ತ ಜಯಂತಿ ಗಾಯನ ಸ್ಪರ್ಧೆ, ಬೆಳಗ್ಗೆ 7.30ಕ್ಕೆ ದಿವ್ಯ ಬಲಿಪೂಜೆ, ಬೆಳಗ್ಗೆ 8.30ಕ್ಕೆ ಉಪಸ್ಥಿತರು: ವಿಶ್ರಾಂತ ಮಹಾ ಧರ್ಮಾಧ್ಯಕ್ಷ ಡಾ.ಬರ್ನಾಡ್ ಮೊರಾಸ್, ಫಾದರ್ ಸ್ಟ್ಯಾನಿ ಅಲ್ಮೇಡ, ಫಾದರ್ ಲೂರ್ದ್ ಪ್ರಸಾದ್, ಸಂಜೆ 7ಕ್ಕೆ ಸಮಾರೋಪ ಸಮಾರಂಭ, ಅಧ್ಯಕ್ಷತೆ: ಡಾ. ಥಾಮಸ್ ಆಂಟನಿ ವಾಳಪಳ್ಳಿ, ಸ್ಥಳ: ಸಂತ ಫಿಲೋಮಿನಾ ಕಾಲೇಜಿನ ಒಳಾಂಗಣ ಕ್ರೀಡಾಂಗಣ.

■ **ಜಗದ್ಗುರು ಶ್ರೀ ವೀರ ಸಿಂಹಾಸನ ಮಹಾಸಂಸ್ಥಾನ ಮಠ (ಶ್ರೀ ಸುತ್ತೂರು ಕ್ಷೇತ್ರ, ಮೈಸೂರು ಜಿಲ್ಲೆ):** ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಕರ್ತೃ ಗದ್ದುಗೆ, ಶ್ರೀ ಮಹದೇಶ್ವರ ಸನ್ನಿಧಿ, ಶ್ರೀ ವೀರಭದ್ರೇಶ್ವರ ಮತ್ತು ಶ್ರೀ ಸೋಮೇಶ್ವರ ದೇವಸ್ಥಾನಗಳು, ಕಾರ್ತಿಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮ, ಸ್ಥಳ: ಮಠದ ಆವರಣ, ಬೆಳಗ್ಗೆಯಿಂದ.

■ **ಶ್ರೀ ಗುರು ಪುಟ್ಟರಾಜ ಸಂಗೀತ ಸಭಾ:** ಪದ್ಮಭೂಷಣ ಡಾ.ಪಂಡಿತ್ ಪುಟ್ಟರಾಜ ಗವಾಯಿಗಳ 14ನೇ ಪುಣ್ಯ ಸ್ಮರಣೆ ಅಂಗವಾಗಿ ಭೈರವದ ಭೈರವಿ ಸಂಗೀತೋತ್ಸವ ಹಾಗೂ ಪುಟ್ಟಶ್ರೀ ಸಮ್ಮಾನ, ಉದ್ಘಾಟನೆ: ಶಾಸಕ ಶ್ರೀವತ್ಸ, ಮುಖ್ಯ ಅತಿಥಿಗಳು: ಕನ್ನಡ–ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಡಾ.ಎಂ.ಸಿ.ಮನೋಹರ, ಪ್ರಕಾಶ್ ಬಾಳಿಕಾಯಿ, ಅಧ್ಯಕ್ಷತೆ: ಪಾಲಿಕೆ ಮಾಜಿ ಸದಸ್ಯ ಮಾ.ವಿ. ರಾಮಪ್ರಸಾದ್, ಸ್ಥಳ: ಗಾನಭಾರತಿ ರಮಾಗೋವಿಂದ ಕಲಾವೇದಿಕೆ, ಕುವೆಂಪುನಗರ, ಬೆಳಗ್ಗೆ 9 ರಿಂದ.

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ :** ಬೆಳಗ್ಗೆ 9.30 ರಿಂದ ಮುತ್ತುಸ್ವಾಮಿ ದೀಕ್ಷಿತರ ದಿನಾಚರಣೆ ಪ್ರಯುಕ್ತ ದೀಕ್ಷಿತರ ಕೃತಿಗಳ ಗಾಯನ, ಬೆಳಗ್ಗೆ 11 ರಿಂದ ವಿದ್ವಾನ್ ಎನ್.ಆರ್. ಪ್ರಶಾಂತ್ ಅವರಿಂದ ಸಂಗೀತ ಕಛೇರಿ, ವಿದ್ವಾನ್ ಜನಾರ್ಧನ್ ಶ್ರೀನಾಥ್–ಪಿಟೀಲು, ವಿದ್ವಾನ್ ಹೆಚ್.ಎಲ್. ಶಿವಶಂಕರಸ್ವಾಮಿ–ಮೃದಂಗ, ವಿದ್ವಾನ್ ರಘುನಂದನ್ ರಾವ್–ಘಟಂ, ಸ್ಥಳ: ಶ್ರೀ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪ, ವಿ.ವಿ. ಮೊಹಲ್ಲಾ.

■ **ಶ್ರೀ ವ್ಯಾಸತೀರ್ಥ ವಿದ್ಯಾಪೀಠ :** ವಿದ್ಯಾರ್ಥಿ ಪರಿಷದ್, ವಿಶ್ವಪಾವನ ಯುವ ವಿಚಾರಗೋಷ್ಠಿ, ಮುಖ್ಯ ಅತಿಥಿಗಳು : ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾಜಿ ಕುಲಪತಿ ಕೆ.ಇ. ದೇವನಾಥನ್, ಪೂರ್ಣಪ್ರಜ್ಞ ವಿದ್ಯಾಪೀಠದ ಮಾಜಿ ಪ್ರಾಂಶುಪಾಲ ವಿದ್ವಾನ್ ಹರಿದಾಸ ಭಟ್, ಶ್ರೀ ವ್ಯಾಸತೀರ್ಥ ವಿದ್ಯಾಪೀಠದ ಗೌರವ ಕಾರ್ಯದರ್ಶಿ ಡಾ. ಡಿ.ಪಿ. ಮಧುಸೂದನಾಚಾರ್ಯ, ಸ್ಥಳ: ಶ್ರೀ ವಿದ್ಯಾತೀರ್ಥ ವಿದ್ಯಾಪೀಠ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10ಕ್ಕೆ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.

■ **ಭಾರತೀಯ ಸ್ಟೇಟ್ ಬ್ಯಾಂಕ್ :** ಬೃಹತ್ ಗೃಹ ಮತ್ತು ಕಾರು ಸಾಲಗಳ ಉತ್ಸವ, ಸ್ಥಳ: ಮಹಾರಾಜ ಕಾಲೇಜು ಮೈದಾನ, ಬೆಳಗ್ಗೆ 10 ರಿಂದ.

■ **ಬಸವ ಸಮಿತಿ :** ಶರಣ ಸಂಗಮ–300, ಕೃಷಿಕ ಡಿ.ಎಂ. ಪ್ರಶಾಂತ್ ಅವರಿಂದ ನಿತ್ಯ ಬದುಕಿಗೆ ಶರಣರ ತತ್ವ ಆದರ್ಶಗಳು ಕುರಿತು ಉಪನ್ಯಾಸ, ಅಧ್ಯಕ್ಷತೆ : ಬಸವ ಸಮಿತಿ ಅಧ್ಯಕ್ಷ ಹೆಚ್.ವಿ. ಬಸವರಾಜು, ಸ್ಥಳ: ಬಸವ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ.

■ **ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆ :** ಅಲ್ಯೂಮ್ನಿ ಸಭೆ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉಪಸ್ಥಿತರು : ಡಾ. ಧರ್ಮಪ್ರಸಾದ್, ಅಧ್ಯಕ್ಷತೆ : ಜೆಎಸ್‌ಎಸ್ ಮಹಾವಿದ್ಯಾಪೀಠ ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್. ಮಹೇಶ್, ಸ್ಥಳ: ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣ, ಜೆಎಸ್‌ಎಸ್ ಆಸ್ಪತ್ರೆ, ಬೆಳಗ್ಗೆ 10.30ಕ್ಕೆ.

■ **ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ, ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ :** ಬೆಳಗ್ಗೆ 9ಕ್ಕೆ ವಿಶ್ವ ಏಡ್ಸ್ ದಿನದ ಅಂಗವಾಗಿ ಜಾಥಾ, ಜಾಥಾ ಉದ್ಘಾಟನೆ : ಹಿರಿಯ ಸಿವಿಲ್ ನ್ಯಾಯಾಧೀಶ ಬಿ.ಜಿ. ದಿನೇಶ್, ಬೆಳಗ್ಗೆ 10.30ಕ್ಕೆ ಸಭಾ ಕಾರ್ಯಕ್ರಮ, ಉದ್ಘಾಟನೆ : ಜಿಲ್ಲಾಧಿಕಾರಿ ಲಕ್ಷ್ಮೀಕಾಂತರೆಡ್ಡಿ, ಅಧ್ಯಕ್ಷತೆ : ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಶ್ರೀಮತಿ ಕೆ.ಎಂ. ಗಾಯತ್ರಿ, ಮುಖ್ಯ ಅತಿಥಿಗಳು : ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಆಶಾದ್ ಉರ್ ರೆಹಮಾನ್ ಷರೀಫ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ವಿಭಾಗೀಯ ನಿರ್ದೇಶಕ ಡಾ. ಕೆ.ಹೆಚ್. ಪ್ರಸಾದ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಪಿ.ಸಿ. ಕುಮಾರಸ್ವಾಮಿ, ಎಂಎಂಸಿ ಮತ್ತು ಸಂಶೋಧನಾ ಕೇಂದ್ರದ ಡೀನ್ ಮತ್ತು ನಿರ್ದೇಶಕರಾದ ಡಾ. ಕೆ.ಆರ್. ದಾಕ್ಷಾಯಿಣಿ, ಸ್ಥಳ: ವೈದ್ಯರ ಭವನ, ನಜರ್‌ಬಾದ್.

■ **ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ, ಕನ್ನಡ ಸಾಹಿತ್ಯ ಕಲಾಕೂಟ, ಹೆಚ್.ವಿ. ರಾಜೀವ್ ಸ್ನೇಹ ಬಳಗ :** ಡಾ. ಮಹೇಶ್ ದಳಪತಿ ರಚಿಸಿರುವ ಅಭಿನವ ಅರಸು, ಸಿದ್ದರಾಮಯ್ಯನವರ ಬದುಕು ಮತ್ತು ರಾಜಕಾರಣ ಕೃತಿಯ ಅವಲೋಕನ ಕಾರ್ಯಕ್ರಮ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ವಿಷಯ ಮಂಡನೆ : ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಡಾ. ಪದ್ಮಾಶೇಖರ್, ಪ್ರೊ. ಡಿ.ಆನಂದ, ಮುಖ್ಯ ಅತಿಥಿಗಳು : ವಿಧಾನಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ, ಡಾ. ಡಿ. ತಿಮ್ಮಯ್ಯ, ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ. ಬಿ.ಜೆ. ವಿಜಯಕುಮಾರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಅಧ್ಯಕ್ಷತೆ : ಚಿಂತಕ ಪ್ರೊ. ಕೆ.ವೈ. ನಾರಾಯಣಸ್ವಾಮಿ, ಸ್ಥಳ: ರಾಣಿ ಬಹದ್ದೂರ್ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.

■ **ಓಕಿನವಾ ಶೋರಿನ್ ರಿಯೂ ಕರಾಟೆ ಅಸೋಸಿಯೇಷನ್:** 31ನೇ ರಾಷ್ಟ್ರ ಮಟ್ಟದ ಕರಾಟೆ ಚಾಂಪಿಯನ್ ಶಿಪ್, ಉದ್ಘಾಟನೆ: ಶಾಸಕ ಜಿ.ಟಿ.ದೇವೇಗೌಡ, ಮುಖ್ಯ ಅತಿಥಿಗಳು: ಮಾಜಿ ಮುಡಾ ಅಧ್ಯಕ್ಷ ಕೆ.ಆರ್. ಮೋಹನ್‌ಕುಮಾರ್, ಎಡ್ವರ್ಡ್ ವಿಲಿಯಮ್ ಸಲ್ಡಾನಾ, ಸ್ಥಳ: ಕೇರಳ ಸಮಾಜಮ್ ಸಾಂಸ್ಕೃತಿಕ ಕೇಂದ್ರ, ಬೆಳಗ್ಗೆ 11ಕ್ಕೆ.

■ **ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿ, ಮೈಸೂರು ಜಿಲ್ಲಾ ಶಿಕ್ಷಕರ ಘಟಕ :** ಶಿಕ್ಷಕರ ಘಟಕಕ್ಕೆ ಗಾಂಧಿ ಶಾಂತಿ ಪುರಸ್ಕಾರ ಸಮಾರಂಭ, ಉಪಸ್ಥಿತರು : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಡಿಸಿಸಿ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್, ಶಿಕ್ಷಕರ ಘಟಕದ ರಾಜ್ಯಾಧ್ಯಕ್ಷ ಬಸವರಾಜು ಗುರಿಕಾರ್, ಸ್ಥಳ: ಕಾಂಗ್ರೆಸ್ ಭವನ, ಬೆಳಗ್ಗೆ 11ಕ್ಕೆ.

■ **ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ :** ಜಿಲ್ಲಾ ಕಾಂಗ್ರೆಸ್ ಪದಾಧಿಕಾರಿಗಳ ಕಾರ್ಯಕಾರಿಣಿ ಹಾಗೂ ಸಿದ್ದರಾಮಯ್ಯ ಸ್ವಾಭಿಮಾನಿ ಸಮಾವೇಶದ ಸಿದ್ಧತಾ ಸಭೆ, ಉಪಸ್ಥಿತರು : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಡಿಸಿಸಿ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್, ಶಾಸಕ ತನ್ವೀರ್ ಸೇಠ್, ವಿ.ಎಸ್. ಉಗ್ರಪ್ಪ, ಸ್ಥಳ: ಕಾಂಗ್ರೆಸ್ ಭವನ, ಬೆಳಗ್ಗೆ 11.30ಕ್ಕೆ.

■ **ಮೈಸೂರಿನ ಲಷ್ಕರ್ ಮೊಹಲ್ಲಾ, ವೀರನಗೆರೆ ಶ್ರೀ ಶ್ರೀ ವಿಶ್ವಕರ್ಮ ಸೀತಾರಾಮ ಮಂದಿರ ಮತ್ತು ಶ್ರೀ ಮನೆಮಂಚಮ್ಮ ದೇವಸ್ಥಾನ :** ಶ್ರೀ ವೀರನಗೆರೆ ಮನೆ ಮಂಚಮ್ಮ ದೇವಿ ವಾರ್ಷಿಕೋತ್ಸವ, ಸಾನ್ನಿಧ್ಯ: ಶ್ರೀ ವಿಭೂಷಿತ ಶ್ರೀ ಶಿವ ಸುಜ್ಞಾನತೀರ್ಥ ಸ್ವಾಮೀಜಿ, ಮುಖ್ಯ ಅತಿಥಿಗಳು: ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಮಾಜಿ ಉಪ ಮೇಯರ್ ಸಂದೇಶ್ ಸ್ವಾಮಿ, ಶಿಲ್ಪಿ ಅರುಣ್ ಯೋಗಿರಾಜ್, ಸ್ಥಳ: ವೀರನಗೆರೆ ಶ್ರೀ ಶ್ರೀ ವಿಶ್ವಕರ್ಮ ಸೀತಾರಾಮ ಮಂದಿರ ಮತ್ತು ಶ್ರೀ ಮನೆಮಂಚಮ್ಮ ದೇವಸ್ಥಾನ, ಮಧ್ಯಾಹ್ನ 1.05ಕ್ಕೆ.

■ **ಎನ್.ವಿ.ಎಸ್. ಕ್ರಿಯೇಷನ್ಸ್ :** ರಾಜ್ಯ ಮಟ್ಟದ ಸಾಂಸ್ಕೃತಿಕ ಸ್ಪರ್ಧಾ ಕಾರ್ಯಕ್ರಮ, ಉದ್ಘಾಟನೆ : ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಮುಖ್ಯ ಅತಿಥಿಗಳು : ರಾಗ ಕ್ರಿಯೇಟರ್ಸ್ ಸಂಸ್ಥಾಪಕ ಆನಂದ್ ಶೆಟ್ಟಿ, ಅತಿಥಿಗಳು : ಎಂ.ಪಿ. ವಿನಯ್ ಕುಮಾರ್, ಡಾ. ರೇಖಾ ಅರುಣ್, ಡಾ. ರೇಖಾಮನಶಾಂತಿ, ಡಾ. ರಘುರಾಂ ವಾಜಪೇಯಿ, ಸ್ಥಳ: ಜಗನ್ಮೋಹನ ಅರಮನೆ, ಸಂಜೆ 4 ರಿಂದ.

■ **ಮೈಸೂರಿನ ಅಭಿರುಚಿ ಬಳಗ, ಎನ್.ವ್ಹಿ. ರಮೇಶ್ ಕಲಾ ಬಳಗ, ಆಸಕ್ತಿ ಪ್ರಕಾಶನ ಹಾಗೂ ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್, ಮೈಸೂರು ವಿಭಾಗ :** ಅಭಿರುಚಿ ಸುವರ್ಣ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಸಂಜೆ 4ಕ್ಕೆ.

■ **ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘ, ಪಿಂಚಣಿದಾರರ ಸಂಘ :** ಲೇಖಕ ಕೆ.ರಘುಶೆಟ್ಟಿ ರಚಿತ 'ಪುರಾಣಗಳು ಪಾತ್ರಗಳು ಮತ್ತು ವರ್ತಮಾನದ ಚಿತ್ರಗಳು' ಪುಸ್ತಕ ಬಿಡುಗಡೆ, ವಾರ್ಷಿಕೋತ್ಸವ ಹಾಗೂ 70 ವರ್ಷ ತುಂಬಿದ ಪಿಂಚಣಿದಾರರರಿಗೆ ಸನ್ಮಾನ ಸಮಾರಂಭ, ಮುಖ್ಯ ಅತಿಥಿಗಳು : ಲೇಖಕ ಡಾ.ವಿ.ರಂಗನಾಥ್, ಎಸ್‌ಬಿಐ ನಿವೃತ್ತ ಉಪಪ್ರಧಾನ ವ್ಯವಸ್ಥಾಪಕ ಕೆ.ರಘುಶೆಟ್ಟಿ, ಎಸ್‌ಬಿಐ ಆಡಳಿತ ಕಚೇರಿ (ಮೈಸೂರು) ಮಾನವ ಸಂಪನ್ಮೂಲ ವಿಭಾಗದ ಮುಖ್ಯ ವ್ಯವಸ್ಥಾಪಕ ಪ್ರವೀಣ್ ವಿ.ಗೊರೋಬಾಲ್, ಪಿಂಚಣಿದಾರರ ಸಂಘದ ಅಧ್ಯಕ್ಷ ಎಸ್.ಆನಂದಮೂರ್ತಿ, ಸ್ಥಳ: ರೋಟರಿ (ಪಶ್ಚಿಮ) ಸಭಾಂಗಣ, ಸರಸ್ವತಿಪುರಂ, ಸಂಜೆ 5ಕ್ಕೆ.

■ **ವಿಶ್ವ ಮಾನವ ಒಕ್ಕಲಿಗರ ಕ್ಷೇಮಾಭಿವೃದ್ಧಿ ಸಂಘ :** ಪ್ರತಿಭಾ ಪುರಸ್ಕಾರ, ಹಿರಿಯ ಸದಸ್ಯರಿಗೆ ಸನ್ಮಾನ ಸಮಾರಂಭ, ಉದ್ಘಾಟನೆ : ಶಾಸಕ ಟಿ.ಎಸ್. ಶ್ರೀವತ್ಸ, ಮುಖ್ಯ ಅತಿಥಿಗಳು : ಶಾಸಕ ಕೆ. ಹರೀಶ್‌ಗೌಡ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಕೆ.ಎಸ್. ಕೃಷ್ಣ, ಸ್ಥಳ: ಡಾ. ಪುಟ್ಟರಾಜ ಗವಾಯಿಗಳ ಕ್ರೀಡಾಂಗಣದ ಯೋಗ ಮಂದಿರ, ಜೆ.ಪಿ.ನಗರ, ಸಂಜೆ 5.30ಕ್ಕೆ.

■ **ಅಭಿನವ ಶ್ರೀ ವೀರಭದ್ರೇಶ್ವರ ನೃತ್ಯ ತಂಡ :** ಅಮಾವಾಸ್ಯೆ ಪ್ರಯುಕ್ತ ಶ್ರೀ ಭದ್ರಕಾಳಿ ಸಮೇತ ಶ್ರೀ ವೀರಭದ್ರೇಶ್ವರಸ್ವಾಮಿ ಹಾಗೂ ಶ್ರೀ ಮಲೆ ಮಹದೇಶ್ವರಸ್ವಾಮಿಗೆ ರುದ್ರಾಭಿಷೇಕ, ನಂದಿ ಧ್ವಜದ ಉದ್ಘಾಟನೆ ಮಹೋತ್ಸವದ ಪಲ್ಲಕ್ಕಿ ಉತ್ಸವ, ಸಾನ್ನಿಧ್ಯ : ಶ್ರೀ ಶ್ರೀಕಂಠಸ್ವಾಮೀಜಿ, ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಶ್ರೀ ವಿಜಯಾನಂದ ಸ್ವಾಮೀಜಿ, ಸ್ಥಳ:ಕಿರಾಳು ಮಹೇಶ್ ಮನೆ ಗೌರಿಶಂಕರನಗರ, ಸಂಜೆ 5.30ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಯುಕ್ತೇಶಾನಂದ ಅವರಿಂದ ಶ್ರೀಮಾತೆ ಶಾರದಾದೇವಿ ಕುರಿತು ಉಪನ್ಯಾಸ, ಸ್ಥಳ: ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಹೆಚ್.ಡಿ. ಕೋಟೆ ಕ್ಲಬ್ :** ಮೈಸೂರಿನ ರಂಗಾತರಂಗ ಕಲಾವಿದರಿಂದ 'ಗೆಜ್ಜಲಟ್ಟಿ' ನಾಟಕ ಪ್ರದರ್ಶನ, ನಿರ್ದೇಶನ : ರಂಗಾಯಣ ಎಸ್. ರಾಮು, ರಚನೆ : ಹೊರೆಯಾಲ ದೊರೆಸ್ವಾಮಿ, ಸ್ಥಳ: ಕಲಾಮಂದಿರದ ಕಿರು ರಂಗಮಂದಿರ, ಸಂಜೆ 6ಕ್ಕೆ.


■ **ನರಸಿಂಹರಾಜ ಮೊಹಲ್ಲಾ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ :** ಕನ್ನಡ ರಾಜ್ಯೋತ್ಸವದ ಅಂಗವಾಗಿ ವೃಂದ ತರಂಗ ತಂಡದವರಿಂದ ಸುಗಮ ಸಂಗೀತ ಕಾರ್ಯಕ್ರಮ, ಸ್ಥಳ: ಶ್ರೀ ಪ್ರಸನ್ನ ಮಹಾಗಣಪತಿ ದೇವಸ್ಥಾನ, ಶಿವಾಜಿ ರಸ್ತೆ, ಎನ್.ಆರ್. ಮೊಹಲ್ಲಾ, ಸಂಜೆ 6.30ಕ್ಕೆ.

■ **ರಂಗಾಯಣ :** ರಂಗಾಯಣದ ಭಾರತೀಯ ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ ಅಗ್ನಿ ಮತ್ತು ಮಳೆ ನಾಟಕ ಪ್ರದರ್ಶನ, ರಚನೆ : ಗಿರೀಶ್ ಕಾರ್ನಾಡ್, ನಿರ್ದೇಶನ : ಸಾಲಿಯಾನ ಉಮೇಶ್ ನಾರಾಯಣ, ರಂಗ ವಿನ್ಯಾಸ : ಹೆಚ್.ಕೆ. ದ್ವಾರಕಾನಾಥ್, ಸಂಗೀತ : ದಿಗ್ವಿಜಯ ಹೆಗ್ಗೋಡು, ಸ್ಥಳ: ವನರಂಗ, ಸಂಜೆ 6.30ಕ್ಕೆ.

■ **ನಟನ ರಂಗಶಾಲೆ :** ವಾರಾಂತ್ಯ ರಂಗ ಪ್ರದರ್ಶನ, ರಂಗಭೂಮಿ ಡಿಪ್ಲೊಮಾ ವಿದ್ಯಾರ್ಥಿಗಳಿಂದ ಸಂಸಾ ವಿರಚಿತ ವಿಗಡ ವಿಕ್ರಮರಾಯ ಮತ್ತು ಮಂತ್ರಶಕ್ತಿ ನಾಟಕಗಳ ಸಂಕಲಿತ ರೂಪ 'ಶ್ರೀ ಮನ್ಮಹೀಶೂರ ರತ್ನ ಸಿಂಹಾಸನ' ನಾಟಕ ಪ್ರದರ್ಶನ, ವಿನ್ಯಾಸ ಮತ್ತು ನಿರ್ದೇಶನ : ಯುವ ರಂಗ ನಿರ್ದೇಶಕ ಮೇಘ ಸಮೀರ, ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

■ **ಶ್ರೀ ವೀರಭದ್ರೇಶ್ವರಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್ :** ಕಾರ್ತಿಕ ಮಾಸದ ವಿಶೇಷ ಪೂಜಾ ಮಹೋತ್ಸವ, ಪ್ರತಿನಿತ್ಯ ಬೆಳಗ್ಗೆ ರುದ್ರಾಭಿಷೇಕ, ಸಂಜೆ 7ಕ್ಕೆ ಪ್ರಾಕಾರೋತ್ಸವ, ಸ್ಥಳ: ದೇವಸ್ಥಾನದ ಆವರಣ, ಡಿ.ಬನುಮಯ್ಯ ರಸ್ತೆ, ಕೆ.ಆರ್. ಮೊಹಲ್ಲಾ.

ಮೈಸೂರು ಆಕಾಶವಾಣಿ




ಬೆಳಗ್ಗೆ: 6.10 ಚಿಂತನ–ಡಾ.ಮಾನಸ ಕೀಳಂಬಿ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾ ಯಾನ–ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ : ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ರೋಹಿಣಿ ಸುಧಾಮ್, ವ್ಯಾಖ್ಯಾನ–ಡಾ.ಪ್ರದೀಪ್‌ಕುಮಾರ್ ಹೆಬ್ರಿ, 6.50 ರೈತರಿಗೆ ಸಲಹೆ, 7.15 ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ವಿಕಾಸ ಅಕಾಡೆಮಿ, ಕಲಬುರ್ಗಿ, 8.30 ಕನ್ನಡ ಚಿತ್ರಗೀತೆಗಳು, 9.05 ನಮ್ಮ ಆರೋಗ್ಯ–ಆಯುಷ್ ಯಶೋಗಾಥೆ ಸರಣಿಯಲ್ಲಿ 'ವಾಕ್ ಸ್ತಂಭನ' ಮತ್ತು 'ಶ್ರವಣ ದೋಷದಿಂದ ಉಂಟಾಗಿರುವ ವಾಕ್ ಮತ್ತು ಭಾಷಾ ತೊಂದರೆ' ಕುರಿತು ಕಾರ್ಯಕ್ರಮ, ಭಾಗವಹಿಸುತ್ತಾರೆ : ಚಂದನಾ. ಎಸ್, ಸೂರಜ್ ಅರಸ್. ಬಿ.ಆರ್, ಕೃಷ್ಣ. ಎನ್ ಮತ್ತು ಡಾ. ಚಂದ್ರಮೋಹನ್. ಬಿ.ಕೆ, ನಡೆಸಿಕೊಡುತ್ತಾರೆ : ಬೇದ್ರೆ ಮಂಜುನಾಥ್, ಪ್ರಾಯೋಜಕರು –ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ, ಮೈಸೂರು, 9.35 ಕನ್ನಡ ಚಿತ್ರಗೀತೆಗಳು, 10.00 ಕೇಳಿ ಗಿಳಿಗಳೇ : ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ ನೇರ ಫೋನ್ ಇನ್ ಕಾರ್ಯಕ್ರಮ, 10.30 KRISH -TRISH and Balty boy -Bharath Hai Hum, 10.45 ಮಕ್ಕಳ ಮಂಟಪ : ನಾದಾಮೃತ ಸಂಗೀತ ವಿದ್ಯಾಲಯ ಚಾಮರಾಜನಗರ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 11.15 ಮಿಶ್ರಮಾಧುರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ–ಹರೀಶ್ ಆಚಾರ್ಯ. ಜಿ.ಸಿ., 12.45 ಜನಪದ ಸಂಗೀತ–ಮಳಗರಸಮ್ಮ ಮತ್ತು ಸಂಗಡಿಗರಿಂದ ಬಿಳಿಗಿರಿ ರಂಗಸ್ವಾಮಿ ಹಾಡು, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳಲ್ಲಿ ಒಂದಾದ ಯುವಶಕ್ತಿಗೆ ಪ್ರೋತ್ಸಾಹ ಈ ವಿಷಯ ಕುರಿತು ಮಾಹಿತಿ ನೀಡುತ್ತಾರೆ ಪತ್ರಕರ್ತೆ ದಿವ್ಯ ಹೆಗಡೆ ಕಬ್ಬಿನಗದ್ದೆ, 1.20 ಸಕ್ಕರೆ ನಾಡಿನ ಅಕ್ಕರೆಯ ಲೇಖಕರು, ಲೇಖನ ಹಾಗೂ ಪ್ರಸ್ತುತಿ: ಶಭಾನ ಮತ್ತು ಕೀರ್ತಿ. ಎಸ್. ಬೈಂದೂರು, ಪರಿಕಲ್ಪನೆ: ಅಬ್ದುಲ್ ರಶೀದ್, 2.40 ಕನ್ನಡ ಚಲನಚಿತ್ರ ಧ್ವನಿವಾಹಿನಿ–ರೋಜಾಮ, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಯಕ್ಷಗಾನ–ತಾಳಮದ್ದಲೆ, ಪ್ರಸಂಗ–ಶ್ರೀ ಸುದರ್ಶನ ವಿಜಯ, ಪ್ರಸ್ತುತಿ–ಕಾಸರಗೋಡು ಕಾಟುಕುಕ್ಕೆಯ ಶ್ರೀ ಸುಬ್ರಹ್ಮಣ್ಯೇಶ್ವರ ಯಕ್ಷಗಾನ ಕಲಾಸಂಘದ ಸದಸ್ಯರು, 4.45 ಚಿತ್ರಗೀತೆಗಳು, 6.51 ಕೃಷಿರಂಗ: ತೋರಣ ಹೂರಣ – ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್. ಕೇಶವಮೂರ್ತಿ, ಆರ್.ಲೋಕೇಶ್ವರಿ, ಡಾ.ಮೈಸೂರು ಉಮೇಶ್, ಕೃಷಿಲೋಕ, ಕೃಷಿ ದರ್ಪಣ–ವಾರದ ಕೃಷಿರಂಗ, ಕಿಸಾನ್‌ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ: ಆರ್.ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ, 8.00 'ಹಾದಿಯಲ್ಲಿ ಕಂಡ ಮುಖ' ಬಾನುಲಿ ಸರಣಿ ಭಾರತಮಾತೆ ಹಾಗೂ ಕನ್ನಡ ಮಾತೆ ಭುವನೇಶ್ವರಿ ಪಾತ್ರಧಾರಿ ರಾಜೀವ್ ನಗರದ ಲಲಿತಾ ಮೊದಲಿಯಾರ್ ಅವರೊಂದಿಗೆ ಸಂವಾದ. ಪ್ರಸ್ತುತಿ : ಅಬ್ದುಲ್ ರಶೀದ್, 9.15 ರಂಗಗೀತೆಗಳು–ಮಹಾಕವಿ ಕಾಳಿದಾಸ ನಾಟಕದ ಹಾಡುಗಳು, 9.30 ಸವಿನೆನಪು–ಹಳೆಯ ಕನ್ನಡ ಚಿತ್ರಗೀತೆಗಳು, 10.00–ರವಿವಾರದ ಅಖಿಲ ಭಾರತ ಸಂಗೀತ ಸಭಾ, ರೇವತಿ ಸದಾಶಿವಂ–ವೀಣಾವಾದನ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಡಿಸೆಂಬರ್ 1 ಭಾನುವಾರ 2024
ಸಂಪುಟ: 45 | ಸಂಚಿಕೆ: 224 | ಪುಟಗಳು: 12
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695 ಸುದ್ದಿ
ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4



ಮುಡಾ ಸಭೆಯಲ್ಲಿ 'ಮೈಸೂರು ಮಿತ್ರ' ವರದಿ ಸದ್ದು

ಲೂಟಿಯಾಗಿರುವ ಸಾವಿರಾರು ಕೋಟಿ ರೂ. ಆಸ್ತಿ ಸಂಬಂಧ ದೂರು ನೀಡದ ಬಗ್ಗೆ

ಮುಡಾ ಸಭೆಯಲ್ಲಿ ಗಂಭೀರ ಚರ್ಚೆ

- ಶಾಸಕರಾದ ಟಿ.ಎಸ್.ಶ್ರೀವತ್ಸ, ತನ್ವೀರ್‌ಸೇಠ್, ಎ.ಹೆಚ್.ವಿಶ್ವನಾಥ್‌ರಿಂದ ಅಧಿಕಾರಿಗಳ ವಿರುದ್ಧ ಆಕ್ರೋಶ
- ಕಾನೂನು ಅಭಿಪ್ರಾಯ ಪಡೆದು ಮುಂದಿನ ಕ್ರಮಕ್ಕೆ ಅಧಿಕಾರಿಗಳ ಸಮಜಾಯಿಷಿ

ಮೈಸೂರು, ನ.30 (ಆರ್‌ಕೆ)– 'ಲೂಟಿಯಾಗಿರುವ ತನ್ನ ಸಾವಿರಾರು ಕೋಟಿ ರೂ. ಆಸ್ತಿ ಸಂಬಂಧ ಮುಡಾ ಇಲ್ಲಿಯವರೆಗೂ ಪೊಲೀಸರಿಗೆ ದೂರು ನೀಡಿಲ್ಲ; ಸಾವಿರಾರು ಕೋಟಿ ಬೆಲೆಬಾಳುವ ಸಾವಿರಾರು ನಿವೇಶನ ಕಂಡಕಂಡವರ ಪಾಲಾಗಿರುವ ಮುಡಾ ವಿಚಾರವೇ ಪ್ರಸ್ತಾಪವಾಗಲಿಲ್ಲವೇಕೆ?' ಎಂಬ ಶನಿವಾರದ 'ಮೈಸೂರು ಮಿತ್ರ' ಪತ್ರಿಕೆಯ ಮುಖಪುಟದ ವರದಿ ಇಂದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಸಾಮಾನ್ಯ ಸಭೆಯಲ್ಲಿ ಸದ್ದು ಮಾಡಿದೆ.

ಇಂದು ಬೆಳಗ್ಗೆ 11 ಗಂಟೆ ವೇಳೆ ಮುಡಾ ಕಚೇರಿ ಸಭಾಂಗಣದಲ್ಲಿ ಜಿಲ್ಲಾಧಿಕಾರಿಯೂ ಆದ ಮುಡಾ ಅಧ್ಯಕ್ಷ ಜಿ.ಲಕ್ಷ್ಮೀಕಾಂತರೆಡ್ಡಿ ಅವರ ಅಧ್ಯಕ್ಷತೆಯಲ್ಲಿ ಪ್ರಾಧಿಕಾರದ ಸಾಮಾನ್ಯ ಸಭೆ ಆರಂಭವಾಗುತ್ತಿದ್ದಂತೆಯೇ 'ಮೈಸೂರು ಮಿತ್ರ' ಪತ್ರಿಕೆಯ ಮುಖಪುಟದಲ್ಲಿ ಪ್ರಕಟವಾಗಿರುವ ಸಾವಿರಾರು ಕೋಟಿ ರೂ. ಮೌಲ್ಯದ ಆಸ್ತಿ ಪರಭಾರೆ ಕುರಿತಂತೆ ದೂರು ನೀಡದ ಬಗ್ಗೆ ವಿಧಾನ ಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಅವರು ಪ್ರಸ್ತಾಪ ಮಾಡಿದರು.

ಕಳೆದ 2020ರಿಂದೀಚೆಗೆ ಶೇ. 50:50ರ ಅನುಪಾತ, ಪ್ರೋತ್ಸಾಹದಾಯಕ ಯೋಜನೆ ಹಾಗೂ ಬದಲಿ ಹೆಸರಲ್ಲಿ ಸಾವಿರಾರು ನಿವೇಶನಗಳನ್ನು ಕಾನೂನುಬಾಹಿರವಾಗಿ ಪ್ರಾಧಿಕಾರದ ಸಭೆಯಲ್ಲಿ ಅನುಮೋದನೆ ಪಡೆಯದೇ ಕಂಡಕಂಡವರಿಗೆ ಮಂಜೂರು ಮಾಡಿರುವ ಸಾವಿರಾರು ಕೋಟಿ ರೂ. ಹಗರಣದ ಸಂಬಂಧ 'ಮೈಸೂರು ಮಿತ್ರ' ಸೇರಿದಂತೆ ಮಾಧ್ಯಮಗಳಲ್ಲಿ ಸುದ್ದಿಯಾಗಿದ್ದು, ಈ ಬಗ್ಗೆ ಆರ್‌ಟಿಐ ಕಾರ್ಯಕರ್ತರು ನೀಡಿದ ದೂರಿನನ್ವಯ ರಾಜ್ಯ ಉಚ್ಚ ನ್ಯಾಯಾಲಯ ಹಾಗೂ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿ ವಿಚಾರಣೆ ನಡೆದು 6ನೇ ಪುಟಕ್ಕೆ



ಮುಡಾ ಕಚೇರಿ ಸಭಾಂಗಣದಲ್ಲಿ ಜಿಲ್ಲಾಧಿಕಾರಿಯೂ ಆದ ಮುಡಾ ಅಧ್ಯಕ್ಷ ಜಿ.ಲಕ್ಷ್ಮೀಕಾಂತರೆಡ್ಡಿ ಅವರ ಅಧ್ಯಕ್ಷತೆಯಲ್ಲಿ ಪ್ರಾಧಿಕಾರದ ಸಾಮಾನ್ಯ ಸಭೆ ನಡೆಯಿತು.

ಶೇ.50:50ರ ಅನುಪಾತದಲ್ಲಿ ನಿಯಮಬಾಹಿರವಾಗಿ ಮುಡಾ ನಿವೇಶನ ಹಂಚಿಕೆ ಮಾಡುತ್ತಿರುವ ಕುರಿತು ಈ ಹಿಂದಿನ ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಅವರು ಸರ್ಕಾರಕ್ಕೆ ನೀಡಿದ ದೂರು, ಸರ್ಕಾರದಿಂದ ರಚಿತವಾಗಿದ್ದ ತಾಂತ್ರಿಕ ಸಮಿತಿಯ ವರದಿ ಸಂಬಂಧ ನಾನು ಹಿಂದಿನ ಮುಡಾ ಸಭೆಯಲ್ಲೇ ಪ್ರಸ್ತಾಪಿಸಿದ್ದೆ. ತಪ್ಪಿತಸ್ಥರ ವಿರುದ್ಧ ದೂರು ನೀಡಿ ಕ್ರಮ ವಹಿಸಬೇಕೆಂದು ಒತ್ತಾಯಿಸಿದ್ದೆ. ಅದರಂತೆ ಇಂದೂ ಸಹ ನಾನು ನಿವೇಶನ ಹಂಚಿಕೆ ಹಗರಣ ಕುರಿತಂತೆ ಸಭೆಯಲ್ಲಿ ಮಾತನಾಡಿದ್ದೇನೆ. ಸಭೆಯಲ್ಲಿ ಸುಮಾರು 300 ಹೊಸ ಖಾಸಗಿ ಬಡಾವಣೆಗಳಿಗೆ ಅನುಮೋದನೆ ನೀಡಲಾಗಿದೆ. ನ್ಯಾಯಮೂರ್ತಿ ದೇಸಾಯಿ ಆಯೋಗದ ವರದಿ ಆಧಾರದ ಮೇಲೆ ಶೇ. 50:50ರ ನಿವೇಶನ ಹಂಚಿಕೆ ಕುರಿತಂತೆ ಕಾನೂನಿನ ಸಲಹೆ ಪಡೆದು ಕ್ರಮ ವಹಿಸಲಾಗುವುದೆಂದು ಅಧ್ಯಕ್ಷರು ತಿಳಿಸಿದ್ದಾರೆ. –ಟಿ.ಎಸ್.ಶ್ರೀವತ್ಸ, ಶಾಸಕ

ಮುಡಾದಲ್ಲಿ ಶೇ 50:50ರ ಅನುಪಾತದ ಎಷ್ಟು ನಿವೇಶನಗಳನ್ನು ಹಂಚಲಾಗಿದೆ ಎಂಬ ಲೆಕ್ಕ ಇನ್ನೂ ಸಿಕ್ಕಿಲ್ಲ. ಈಗ ಮಂಜೂರು ಮಾಡಿರುವ ನಿವೇಶನಗಳ ಪೈಕಿ ಯಾವುದು ಸಕ್ರಮ, ಯಾವುದು ಅಕ್ರಮ ಎಂದು ಬೇರ್ಪಡಿಸುವುದು ಕಷ್ಟವಾಗಿದೆ. ನಾನು ಕಳೆದ ಸಭೆಯಲ್ಲಿ 4 ಸಾವಿರ ಸೈಟ್ ಬಗ್ಗೆ ಮಾಹಿತಿ ಕಲೆ ಹಾಕಿದ್ದೆ. ಈಗ ಆ ಸಂಖ್ಯೆಯು ಇನ್ನೂ ಹೆಚ್ಚಿಗೆ ಆಗಿದೆ. ಮುಂದಿನ ಪ್ರಾಧಿಕಾರದ ಸಭೆಯಲ್ಲಿ ಈ ಕುರಿತಂತೆ ಪ್ರತ್ಯೇಕವಾಗಿ ಸುದೀರ್ಘವಾದ ಚರ್ಚೆ ಮಾಡಲು ತೀರ್ಮಾನಿಸಲಾಗಿದೆ. ಹಗರಣವಾಗಿದೆ ಎನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ. ಅದನ್ನು ಮುಚ್ಚಿಡಲು ಸಾಧ್ಯವಾಗುವುದಿಲ್ಲ. ತಪ್ಪು ಮಾಡಿದವರು ಶಿಕ್ಷೆ ಅನುಭವಿಸಲೇ ಬೇಕು. –ಕೆ.ಹರೀಶ್‌ಗೌಡ, ಶಾಸಕ

ಖಾಸಗಿ ಬಡಾವಣೆ ಪ್ಲಾನ್ ಅಪ್ರೂವಲ್ ಸೇರಿ 344 ವಿಷಯಗಳಿಗೆ ಮುಡಾ ಸಮ್ಮತಿ

ಮೈಸೂರು, ನ.30(ಆರ್‌ಕೆ)–ಹೊಸದಾಗಿ ಖಾಸಗಿ ಬಡಾವಣೆ ರಚಿಸಲು ಪ್ಲಾನ್ ಅಪ್ರೂವಲ್, ನಿವೇಶನ ಬಿಡುಗಡೆಗೆ ಅನುಮತಿ ಸೇರಿದಂತೆ ಒಟ್ಟು 344 ವಿಷಯಗಳಿಗೆ ಮುಡಾ ಸಭೆಯು ಸಮ್ಮತಿ ನೀಡಿದೆ. ಜಿಲ್ಲಾಧಿಕಾರಿಯೂ ಆದ ಮುಡಾ ಅಧ್ಯಕ್ಷ ಜಿ. ಲಕ್ಷ್ಮೀಕಾಂತ ರೆಡ್ಡಿ ಅಧ್ಯಕ್ಷತೆಯಲ್ಲಿ ಇಂದು ನಡೆದ ಪ್ರಾಧಿಕಾರದ ಸಾಮಾನ್ಯ ಸಭೆಯಲ್ಲಿ ನಾಲ್ಕೈದು ವಿಷಯಗಳನ್ನು ಹೊರತುಪಡಿಸಿ ಮಂಡಿಸಲಾದ ಎಲ್ಲಾ ವಿಷಯಗಳ ಬಗ್ಗೆ ಸುದೀರ್ಘ ಚರ್ಚೆ ನಡೆಸಿ ಅನುಮೋದನೆ ನೀಡಲಾಯಿತು.

ಸುಮಾರು 300 ಹೊಸ ಖಾಸಗಿ ಬಡಾವಣೆಗಳ ನಕ್ಷೆಗೆ ಅನುಮೋದನೆ, ಅಭಿವೃದ್ಧಿಗೊಂಡಿರುವ ಖಾಸಗಿ ಬಡಾವಣೆಗಳ ಸಿಡಿ ಪಟ್ಟಿ ಬಿಡುಗಡೆ, ಮುಡಾ ವ್ಯಾಪ್ತಿಯ ಬಡಾವಣೆ, ಮುಡಾ ವ್ಯಾಪ್ತಿಯ ಬಡಾವಣೆಗಳನ್ನು ಆಯಾ ವ್ಯಾಪ್ತಿಯ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರ ಸೇರಿದಂತೆ ಒಟ್ಟು 344 ವಿಷಯಗಳನ್ನು ಮುಡಾ ಸಭೆಯಲ್ಲಿ ಇತ್ಯರ್ಥಗೊಳಿಸಲಾಯಿತು. ಸೇನೆಯಲ್ಲಿ ಸೇವೆ ಸಲ್ಲಿಸಿ ವೀರ ಮರಣ ಹೊಂದಿದ ಐವರು ಯೋಧರ ಕುಟುಂಬಗಳಿಗೆ ಮುಡಾ ನಿವೇಶನ ಮಂಜೂರು, ಹಸ್ತಾಂತರಗೊಂಡ ಬಡಾವಣೆಗಳಿಗೆ ಮುಂದೆ ಖಾತೆ–ಕಂದಾಯ ಸ್ಥಗಿತ, ಹಸ್ತಾಂತರಿಸುವವರೆಗೆ ಮಾತ್ರ ಮುಡಾ 6ನೇ ಪುಟಕ್ಕೆ

ಪುಲ್ವಾಮಾ ಹುತಾತ್ಮ ಯೋಧನ ವಿಧವಾ ಪತ್ನಿಗೆ ಕಡೆಗೂ ನಿವೇಶನ ನೀಡಲು ಮುಡಾ ನಿರ್ಧಾರ

'ಮಿತ್ರ' ವರದಿಯ ಫಲಶೃತಿ

ಮೈಸೂರು, ನ.30 (ಆರ್‌ಕೆ)–ಪುಲ್ವಾಮಾ ದಾಳಿಯಲ್ಲಿ ವೀರ ಮರಣ ಹೊಂದಿದ ಯೋಧ ಹೆಚ್.ಗುರು ಅವರ ವಿಧವಾ ಪತ್ನಿ ಕಲಾವತಿ ಅವರಿಗೆ ನಿವೇಶನ ನೀಡಲು ಕಡೆಗೂ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ನಿರ್ಣಯ ಕೈಗೊಂಡಿದೆ.

ಜಿಲ್ಲಾಧಿಕಾರಿಯಾದ ಮುಡಾ ಅಧ್ಯಕ್ಷ ಜಿ.ಲಕ್ಷ್ಮೀಕಾಂತ ರೆಡ್ಡಿ ಅವರ ಅಧ್ಯಕ್ಷತೆಯಲ್ಲಿ ಇಂದು ನಡೆದ ಪ್ರಾಧಿಕಾರದ ಸಾಮಾನ್ಯ ಸಭೆಯಲ್ಲಿ ಹುತಾತ್ಮ ಯೋಧನ ಪತ್ನಿ ನಿವೇಶನ ಕೋರಿ ಸಲ್ಲಿಸಿದ್ದ ಅರ್ಜಿ ಸಂಬಂಧ ವಿಷಯ ಚರ್ಚೆಗೆ ಬಂತು. ಈ ಸಂಬಂಧ ಮುಡಾ ಆಯುಕ್ತ ಎ.ಎನ್.ರಘುನಂದನ್ ಅವರು ಸೇನೆಯಲ್ಲಿ ಸೇವೆ ಸಲ್ಲಿಸಿ, ವೀರ ಮರಣ ಹೊಂದಿದವರ ಕುಟುಂಬಕ್ಕೆ ಭೂಮಿ, ನಿವೇಶನ ನೀಡುವ ವ್ಯವಸ್ಥೆ ಇದೆ. ಅಲ್ಲದೆ, ಪುಲ್ವಾಮಾ ಹುತಾತ್ಮ ಯೋಧ




ಯೋಧ ಹೆಚ್.ಗುರು ಮತ್ತು ಕಲಾವತಿ

ಗುರು ಅವರ ಪತ್ನಿ ಕಲಾವತಿ ಅವರು 2021ರ ಅ.11ರಂದು ನಿವೇಶನ ಕೋರಿ ಅರ್ಜಿ ಸಲ್ಲಿಸಿದ್ದರು. ಈ ಸಂಬಂಧ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಕೇಂದ್ರದ ನಿರ್ದೇಶಕರು ನಿವೇಶನ ನೀಡುವಂತೆ ಮುಡಾಗೆ ಪತ್ರ ಬರೆದಿದ್ದಾರೆ. ಅಲ್ಲದೆ 2003ರ ಸೆಪ್ಟೆಂಬರ್ 19ರ ಸರ್ಕಾರಿ ಆದೇಶದ ಪ್ರತಿಯನ್ನೂ ಅರ್ಜಿ ಜೊತೆಗೆ ಲಗತ್ತಿಸಲಾಗಿದೆ. ನಂತರ ಕಲಾವತಿ ಅವರು 2022ರ ಜೂನ್ 6 ಮತ್ತು ಜೂನ್ 29ರಂದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಪತ್ರ ಬರೆದು ನಿವೇಶನ ಕೊಡುವಂತೆ ಮನವಿ ಮಾಡಿಕೊಂಡಿದ್ದಾರೆ ಎಂದು ವಿವರಿಸಿದರು.

ಆದರೆ 2022ರ ಜುಲೈ 13ರಂದು ಅರ್ಜಿದಾರರಿಗೆ ಹಿಂಬರಹ ನೀಡಿ ಹೆಚ್.ಗುರು ಅವರು ವೀರ ಮರಣ ಹೊಂದಿರುವ ಸಂಬಂಧ ಪಿಂಚಣಿ 6ನೇ ಪುಟಕ್ಕೆ

HSRP ಪ್ಲೇಟ್ ಅಳವಡಿಕೆ ಡಿ.31ರವರೆಗೆ ಗಡುವು ವಿಸ್ತರಣೆ

ಬೆಂಗಳೂರು, ನ.30– ಹೈ ಸೆಕ್ಯುರಿಟಿ ರಿಜಿಸ್ಟ್ರೇಶನ್ ಪ್ಲೇಟ್ (ಎಚ್‌ಎಸ್‌ಆರ್‌ಪಿ) ನೋಂದಣಿಯ ಕೊನೆಯ ದಿನಾಂಕವನ್ನು ಈ ವರ್ಷ ಡಿ.31ರವರೆಗೆ ವಿಸ್ತರಿಸಲು ಕರ್ನಾಟಕ ರಾಜ್ಯ ಸರ್ಕಾರ ನಿರ್ಧರಿಸಿದೆ. ಸದ್ಯದ ಗಡುವು ನ.30ರಂದು ಮುಕ್ತಾಯಗೊಳ್ಳುತ್ತದೆ. ಗಮನಾರ್ಹ ಸಂಖ್ಯೆಯ ವಾಹನಗಳು ಇನ್ನೂ ತಮ್ಮ ವಾಹನಗಳಿಗೆ ಎಚ್‌ಎಸ್‌ಆರ್‌ಪಿ ಪ್ಲೇಟ್‌ಗಳನ್ನು ಅಳವಡಿಸಿಲ್ಲ ಎಂದು ಉಲ್ಲೇಖಿಸಿ ಸಾರಿಗೆ ಆಯುಕ್ತರ ಕಚೇರಿಯು ಸಾರಿಗೆ ಸಚಿವರು ಮತ್ತು ಕಾರ್ಯದರ್ಶಿಗೆ ಮನವಿ ಮಾಡಿದ ಹಿನ್ನೆಲೆಯಲ್ಲಿ 5ನೇ ಬಾರಿಗೆ ಗಡುವು ವಿಸ್ತರಿಸಲಾಗಿದೆ. ಎಚ್‌ಎಸ್‌ಆರ್‌ಪಿ ಅಳವಡಿಸದಿದ್ದರೆ ವಿಧಿಸಬೇಕಾದ ದಂಡ ಮತ್ತು ಸಂಭವನೀಯ ವಿಸ್ತರಣೆಯ ಕುರಿತು ನ್ಯಾಯಾಲಯದ ತೀರ್ಪು ಡಿ.4ರಂದು ಪ್ರಕಟವಾಗುವ ನಿರೀಕ್ಷೆಯಿದೆ. ನಿರ್ದಿಷ್ಟ ವರ್ಗದಲ್ಲಿನ ದೋಷದಿಂದಾಗಿ ಜನರು ಪೋರ್ಟಲ್ ಮೂಲಕ ಎಚ್‌ಎಸ್‌ಆರ್‌ಪಿಗೆ ಅರ್ಜಿ ಸಲ್ಲಿಸಲು ಸಾಧ್ಯವಾಗುತ್ತಿಲ್ಲ ಎಂಬ ದೂರುಗಳು ರಾಜ್ಯಾದ್ಯಂತ ಕೇಳಿ ಬರುತ್ತಿವೆ. ನಾವು ಈ ವರ್ಷದ ಡಿ.31ರವರೆಗೆ ಗಡುವನ್ನು ವಿಸ್ತರಿಸಲು ಯೋಜಿಸುತ್ತಿದ್ದೇವೆ. ಸಹಜವಾಗಿ ಇದು ಡಿಸೆಂಬರ್ 4 ರಂದು ಕಾಯುತ್ತಿರುವ ನ್ಯಾಯಾಲಯದ ತೀರ್ಪಿನ ಮೇಲೆ ಅವಲಂಬಿತವಾಗಿರುತ್ತದೆ ಎಂದು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ತಿಳಿಸಿದ್ದಾರೆ.

ಮುಖ್ಯಮಂತ್ರಿ ಆಯ್ಕೆ ಮುಗಿಯದಿದ್ದರೂ ಡಿ.5ರಂದು ಮಹಾರಾಷ್ಟ್ರದ ನೂತನ ಮುಖ್ಯಮಂತ್ರಿ ಪ್ರಮಾಣ ವಚನ ದಿನಾಂಕ ನಿಗದಿ

ಮುಂಬೈ, ನ.30– ಮಹಾರಾಷ್ಟ್ರದಲ್ಲಿ ಮಹಾಯುತಿ ಮಿತ್ರಕೂಟದಲ್ಲಿ ಅತಿ ಹೆಚ್ಚು ಸ್ಥಾನಗಳನ್ನು ಗೆದ್ದಿರುವ ಬಿಜೆಪಿಗೆ ಸಿಎಂ ಸ್ಥಾನ ಸಿಗುವುದು ಬಹುತೇಕ ಖಚಿತವಾಗಿದೆ. ಆದರೆ, ಸಿಎಂ ಅಭ್ಯರ್ಥಿ ಯಾರಾಗಲಿದ್ದಾರೆ ಎಂಬುದು ಇನ್ನೂ ಘೋಷಣೆಯಾಗಿಲ್ಲ. ಈ ನಡುವೆ ಡಿ.5 ರಂದು ಮುಂಬೈನ ಆಜಾದ್ ಮೈದಾನದಲ್ಲಿ ಮಹಾಯುತಿ ಸರ್ಕಾರದ ಪ್ರಮಾಣ ವಚನ ಸ್ವೀಕಾರ ಸಮಾರಂಭ ನಡೆಯಲಿದೆ ಎಂದು ಭಾರತೀಯ ಜನತಾ ಪಾರ್ಟಿ (ಬಿಜೆಪಿ) ಮಹಾರಾಷ್ಟ್ರ ಅಧ್ಯಕ್ಷ ಚಂದ್ರಶೇಖರ ಬವಾಂಕುಲೆ ಘೋಷಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಕೂಡ ಈ ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ. ಮುಖ್ಯಮಂತ್ರಿ ಗಾದಿಗಾಗಿ ಮಹಾಯುತಿಯ ಮೂರು ಘಟಕಗಳಾದ ಬಿಜೆಪಿ, ಎನ್‌ಸಿಪಿ ಮತ್ತು ಶಿವಸೇನೆ ನಡುವಿನ ಜಗಳದ ನಡುವೆಯೇ ಪ್ರಮಾಣವಚನ ಸ್ವೀಕಾರದ ದಿನಾಂಕ ಘೋಷಣೆಯಾಗಿರುವುದು ಮತ್ತಷ್ಟು ಕುತೂಹಲ ಮೂಡಿಸಿದೆ. ಮಹಾರಾಷ್ಟ್ರದಲ್ಲಿ ಮುಂದಿನ ಸಂಪುಟದಲ್ಲಿ ಖಾತೆ ಹಂಚಿಕೆ ಕುರಿತು ಮೈತ್ರಿಕೂಟವು ಅಂತಿಮ ಒಪ್ಪಂದಕ್ಕೆ ಬಂದಿಲ್ಲ. ಪ್ರಮಾಣ ವಚನ ಸ್ವೀಕಾರ ಸಮಾರಂಭದ ದಿನಾಂಕ ಮತ್ತು ಸ್ಥಳವನ್ನು ನಿರ್ಧರಿಸಲಾಗಿದೆ. ಆದರೆ ಮುಂದಿನ ಮುಖ್ಯಮಂತ್ರಿಯ ಹೆಸರನ್ನು ಇನ್ನೂ ಘೋಷಿಸಲಾಗಿಲ್ಲ. ಆದರೆ, ಬಿಜೆಪಿ ನಾಯಕ ದೇವೇಂದ್ರ ಫಡ್ನವಿಸ್ ಇನ್ನೂ ಮುಖ್ಯಮಂತ್ರಿ ರೇಸ್‌ನಲ್ಲಿ ಮುಂಚೂಣಿಯಲ್ಲಿದ್ದಾರೆ.

ಆಜಾದ್ ಮೈದಾನದಲ್ಲಿ ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಬಿಜೆಪಿಯ ಶಾಸಕರು, ಸಂಸದರು, ವಿವಿಧ ಸೆಲ್ ಅಧ್ಯಕ್ಷರು ಮತ್ತು ಮಂಡಲ ಅಧ್ಯಕ್ಷರು ಉಪಸ್ಥಿತರಿರಲಿದ್ದಾರೆ. 6,000–7,000 ಪಕ್ಷದ ಕಾರ್ಯಕರ್ತರು ಮತ್ತು ಏಕನಾಥ್ ಶಿಂಧೆ ಅವರ ಶಿವಸೇನೆಯ ಪದಾಧಿಕಾರಿಗಳು ಕೂಡ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಅಜಿತ್ ಪವಾರ್ ಅವರ ಎನ್‌ಸಿಪಿಯ 4,000 ಕಾರ್ಯಕರ್ತರು ಅಲ್ಲಿಗೆ ಆಗಮಿಸುವ ನಿರೀಕ್ಷೆಯಿದೆ. ಆಜಾದ್ ಮೈದಾನದ ಸಾಮರ್ಥ್ಯ 50 ಸಾವಿರ ಜನರು. ಸುಮಾರು 25,000 ಮಂದಿಗೆ ಆಸನ ವ್ಯವಸ್ಥೆ ಮಾಡಲಾಗುವುದು ಎಂದು ಮೂಲಗಳು ತಿಳಿಸಿವೆ.

ಯತ್ನಾಳ್ ವಿರುದ್ಧ ಮೈಸೂರಿನಲ್ಲಿ ವಿಜಯೇಂದ್ರ ಬಣದ ಶಕ್ತಿ ಪ್ರದರ್ಶನ

- ಯತ್ನಾಳ್ ಉಚ್ಚಾಟನೆಗಾಗಿ ದಾವಣಗೆರೆಯಲ್ಲಿ ಬೃಹತ್ ಸಮಾವೇಶ
- ಮಾಜಿ ಸಚಿವ ರೇಣುಕಾಚಾರ್ಯ ಘೋಷಣೆ



ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಶನಿವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾಜಿ ಸಚಿವ ರೇಣುಕಾಚಾರ್ಯ ಮಾತನಾಡಿದರು.

ಮೈಸೂರು, ನ.30(ಬಿಎಲ್‌ಯು)– ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಿರುದ್ಧ ಬಹಿರಂಗ ಸಮರ ಸಾರಿರುವ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ವಿರುದ್ಧ ಸಿಡಿದೆದ್ದಿರುವ ಮಾಜಿ ಶಾಸಕ ರೇಣುಕಾಚಾರ್ಯ ಅಂಡ್ ಟೀಂ ಮೈಸೂರಿನಲ್ಲಿ ಇಂದು ಶಕ್ತಿ ಪ್ರದರ್ಶನ ನಡೆಸಿ ಯತ್ನಾಳ್ ವಿರುದ್ಧ ಗುಟುರು ಹಾಕಿತು. ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಯತ್ನಾಳ್ ಅಂಡ್ ಟೀಂ ವಿರುದ್ಧ ಆಕ್ರೋಶ ಹೊರಹಾಕಿತು.

ಈ ವೇಳೆ ಮಾತನಾಡಿದ ರೇಣುಕಾಚಾರ್ಯ, ಇಂದು ನಾವು 38 ಮಂದಿ ಜೊತೆಯಾಗಿ ಇಲ್ಲಿಗೆ ಬಂದಿದ್ದೇವೆ ಎಂದು ಎಲ್ಲಾ ನಾಯಕರನ್ನು ಪರಿಚಯ ಮಾಡಿಕೊಟ್ಟರು. ಬಸನಗೌಡ ಪಾಟೀಲ್ ಯತ್ನಾಳ್‌ರನ್ನು ಮಿಸ್ಟರ್ ಇಲಿ ಎಂದು ಕರೆದ ರೇಣುಕಾಚಾರ್ಯ, ನನಗೆ ಬಿಜೆಪಿ ರಾಷ್ಟ್ರೀಯ ನಾಯಕರ ಬೆಂಬಲವಿದೆ ಎಂದು ಹೇಳುತ್ತೀರಾ. ನಿಮಗೆ ತಾಕತ್ತು ಇದ್ದರೆ ನಿಮ್ಮನ್ನು ಬೆಂಬಲಿಸುತ್ತಿರುವ ಬಿಜೆಪಿ ನಾಯಕರ ಹೆಸರು ಬಹಿರಂಗ ಮಾಡಿ ಎಂದು ಸವಾಲು ಹಾಕಿದರು.

ಬಸನಗೌಡ ಪಾಟೀಲ್ ಯತ್ನಾಳ್ ಹರಕಲು ಬಾಯಿಯಿಂದ ನಾವೆಲ್ಲಾ ಮಾಜಿ ಶಾಸಕರಾದೆವು. ಪ್ರತಿದಿನ ಯಡಿಯೂರಪ್ಪ ಅವರನ್ನು ಟೀಕಿಸುತ್ತಿದ್ದ ಕಾರಣ ಜನರಿಗೆ ಬೇಜಾರಾಗಿ ಬಿಜೆಪಿಯನ್ನು ಅಧಿಕಾರದಿಂದ ದೂರ ಇಟ್ಟರು. ಸಂಡೂರು ಹಾಗೂ ಶಿಗ್ಗಾವಿ ಉಪ ಚುನಾವಣೆಯಲ್ಲಿ ಬಿಜೆಪಿ ಸೋಲಲು ಇದೇ ಯತ್ನಾಳ್ 6ನೇ ಪುಟಕ್ಕೆ

ಪಕ್ಷದಲ್ಲಿರುವ ಶತ್ರು ಸಂಹಾರಕ್ಕಾಗಿ ವಿಜಯೇಂದ್ರ ಬಣದ ನಾಯಕರಿಂದ ಚಾಮುಂಡೇಶ್ವರಿ ಮೊರೆ

ಮೈಸೂರು, ನ.30(ಬಿಎಲ್‌ಯು)– ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಕುಟುಂಬಕ್ಕೆ ನಿಷ್ಠರಾಗಿರುವ ಬಿಜೆಪಿ ನಾಯಕರು ತಮ್ಮ ಪಕ್ಷದಲ್ಲಿರುವ ಶತ್ರು ಸಂಹಾರಕ್ಕಾಗಿ ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಇಂದು ನಾಡದೇವತೆ ತಾಯಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿದರು. ಈ ವೇಳೆ ಮಾತನಾಡಿದ ಮಾಜಿ ಸಚಿವ ಬಿ.ಸಿ.ಪಾಟೀಲ್, ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರಿಗೆ ತೊಂದರೆ ನೀಡುತ್ತಿರುವ ಶತ್ರುಗಳ ಸಂಹಾರಕ್ಕಾಗಿ ಪೂಜೆ ಮಾಡಿಸಿದ್ದು, ಚಾಮುಂಡೇಶ್ವರಿ ದೇವಿ ದಯೆಯಿಂದ ನಿಶ್ಚಿತವಾಗಿ ಶತ್ರುಗಳ ಸಂಹಾರವಾಗುತ್ತದೆ ಎಂದು ಹೇಳಿದರು.

ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಬೆಂಬಲಿಗರಿಲ್ಲದ ಒಬ್ಬ ನಾಯಕ. ಕಾಂಗ್ರೆಸ್ ಟೀಕಿಸಿದರೆ ಪ್ರಚಾರ ಸಿಗುವುದಿಲ್ಲವೆಂದು ಯಡಿಯೂರಪ್ಪ ಹಾಗೂ ವಿಜಯೇಂದ್ರ ಅವರನ್ನು ಪ್ರತಿದಿನ ಬೈಯುತ್ತಾರೆ. ಹೀಗೆ ಟೀಕೆ ಮಾಡುವುದರಿಂದ ನಾಯಕನಾಗುತ್ತೇನೆಂದು ತಿಳಿದಿದ್ದಾರೆ ಎಂದು 6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಮಹಿಳೆಯೊಬ್ಬರು ಟ್ರಾಫಿಕ್ ಸಿಗ್ನಲ್ ಜಂಪ್ ಮಾಡಿದ್ದನ್ನು ಪೊಲೀಸ್ ಗಮನಿಸಿದ.

ಪೊಲೀಸ್ : ಮೇಡಂ ಸ್ಟಾಪ್, ಸ್ಟಾಪ್...

ಮಹಿಳೆ : ಹೋಗ್ಲಿ ಬಿಡಿ ಸಾರ್... ನಾನು ಟೀಚರ್...

ಪೊಲೀಸ್ : ನಾನು ಈ ದಿನಕ್ಕೆ ಕಾಯ್ತಾ ಇದ್ದೆ. 'ಇನ್ಮುಂದೆ ನಾನು ಟ್ರಾಫಿಕ್ ಸಿಗ್ನಲ್ ಜಂಪ್ ಮಾಡಲ್ಲ' ಅಂತ 100 ಬಾರಿ ಬರೆದು ತೋರಿಸಿ.

ಮೈಸೂರು ಮಿತ್ರ

ಭಾನುವಾರ, 1 ಡಿಸೆಂಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಬದುಕು ಎಂಬುದು ಹತ್ತಿಯಿದ್ದಂತೆ ಅದನ್ನು ಸಂತೋಷವೆಂಬ ಗಾಳಿಯಲ್ಲಿ ಊದಿ ಆದರೆ ಅದನ್ನು ದುಃಖವೆಂಬ ನೀರಿನಲ್ಲಿ ಅದ್ದಬೇಡಿ.–ಕುವೆಂಪು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಹುಲಿಯ ಬಣ್ಣವನ್ನು ಮೆಚ್ಚಿ, ನರಿ ತನ್ನ ಕೂದಲನ್ನು ಭಸ್ಮ ಮಾಡಿಕೊಂಡಂತೆ.

ನಿಮ್ಮ ಪತ್ರಗಳು

ಖಾಸಗಿ ಆಸ್ಪತ್ರೆಗಳಲ್ಲೂ ರಿಯಾಯಿತಿ ದರದಲ್ಲಿ ಚಿಕಿತ್ಸೆ ದೊರೆಯಲಿ

ಮಾನ್ಯರೆ,

ತೀವ್ರ ಹೃದಯಾಘಾತಕ್ಕೆ ಒಳಗಾದವರಿಗೆ ಪುನೀತ್ ರಾಜಕುಮಾರ್, ಹೃದಯ ಜ್ಯೋತಿ ಯೋಜನೆಯಡಿ ದುಬಾರಿ ಮೊತ್ತದ ಚುಚ್ಚುಮದ್ದನ್ನು ಅರೋಗ್ಯ ಇಲಾಖೆ ಉಚಿತವಾಗಿ ಒದಗಿಸುತ್ತಿರುವುದರಿಂದ ಒಂದೇ ತಿಂಗಳಲ್ಲಿ 248 ಮಂದಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಇದುವರೆಗೂ 3738 ಮಂದಿಗೆ ಆಂಜಿಯೋಪ್ಲಾಸ್ಟಿ ಚಿಕಿತ್ಸೆ ನೀಡಲಾಗಿದೆ. ಒಂದು ಚುಚ್ಚುಮದ್ದಿಗೆ 30 ಸಾವಿರ ಬೆಲೆಯ ಟೆನೆಕ್ಸ್ ಪ್ಲಸ್ ಔಷಧಿಯನ್ನು ಉಚಿತವಾಗಿ ಸರ್ಕಾರಿ ಆಸ್ಪತ್ರೆಗಳಿಗೆ ಸರಬರಾಜು ಮಾಡಲಾಗುತ್ತಿದೆ ಎಂದು 28.11.24 ರ ಪತ್ರಿಕೆಗಳಲ್ಲಿ ವರದಿಯಾಗಿದೆ. ನಿಜಕ್ಕೂ ಇದು ಒಂದು ಉತ್ತಮ ಯೋಜನೆ. ಹಾಗೆ ನೋಡಿದರೆ ಇದು ಗ್ಯಾರಂಟಿ ಯೋಜನೆಯಲ್ಲಿ ಸೇರಬೇಕಿತ್ತು.

ಇನ್ನು ಖಾಸಗಿ ಆಸ್ಪತ್ರೆಯ ವಿಷಯಕ್ಕೆ ಬಂದರೆ ಇಲ್ಲಿ ಚಿಕಿತ್ಸೆ ತುಂಬಾ ದುಬಾರಿಯಾಗಿದ್ದು, ಇನ್ಸೂರೆನ್ಸ್ ಇದ್ದವರಿಗೆ ಇನ್ಸೂರೆನ್ಸ್ ಇದೆ ಎಂದು ಖಾಸಗಿ ಆಸ್ಪತ್ರೆಗಳು ದುಬಾರಿ ಬಿಲ್ ಮಾಡಿ ಇನ್ಸೂರೆನ್ಸ್ ಕಂಪೆನಿಗಳನ್ನು ವಂಚಿಸುತ್ತಿವೆ. ಈ ವಂಚನೆಯಲ್ಲಿ ಆಸ್ಪತ್ರೆ ಸಿಬ್ಬಂದಿ, ಇನ್ಸೂರೆನ್ಸ್ ಏಜೆಂಟರು, ಇನ್ಸೂರೆನ್ಸ್ ಕಂಪೆನಿ ಸಿಬ್ಬಂದಿ ಶಾಮೀಲಾಗಿ ವಂಚಿಸುತ್ತಿದ್ದಾರೆ. ಈ ಬಗ್ಗೆ ಐಆರ್‌ಡಿಎ ಗಮನ ಹರಿಸಬೇಕು. ಐಆರ್‌ಡಿಎಗೆ ದೂರು ನೀಡಲು ಜಿಲ್ಲಾ ಕೇಂದ್ರದಲ್ಲಿ ವ್ಯವಸ್ಥೆ ಮಾಡಬೇಕು. ಇನ್ನು ಇನ್ಸೂರೆನ್ಸ್ ಇಲ್ಲದವರು, ಬಿಪಿಎಲ್ ಇಲ್ಲದ, ಮಧ್ಯಮ ವರ್ಗದವರಿಗೆ ಚಿಕಿತ್ಸೆಯ ವೆಚ್ಚ ತುಂಬಾ ದುಬಾರಿಯಾಗಿ ಜನರು ಹೈರಾಣಾಗುತ್ತಿದ್ದಾರೆ.

ಆದ್ದರಿಂದ ಸರ್ಕಾರ ಈ ಬಗ್ಗೆ ಕೂಡ ಗಮನಹರಿಸಿ ಇಂತಹ ಖಾಯಿಲೆಗಳ ಚಿಕಿತ್ಸೆ ಹಾಗೂ ಔಷಧಿಗಳು ರಿಯಾಯಿತಿ ದರದಲ್ಲಿ ದೊರೆಯುವಂತೆ ಸೂಕ್ತ ಕ್ರಮ ಕೈಗೊಳ್ಳಬೇಕು. ಆಸ್ಪತ್ರೆ, ನರ್ಸಿಂಗ್ ಹೋಮ್‌ಗಳ ಫಾರ್ಮಸಿಯಲ್ಲಿ ಭಾರಿ ದುಬಾರಿ ಬೆಲೆಯ ಔಷಧಿಗಳನ್ನು ವೈದ್ಯರು ಬರೆಯುತ್ತಾರೆ. ಆಸ್ಪತ್ರೆ ವೆಚ್ಚಕ್ಕಿಂತಲೂ ಈ ದುಬಾರಿ ಬೆಲೆಯ ಔಷಧಿಗಳ ವೆಚ್ಚವೇ ಅಧಿಕವಾಗಿರುತ್ತದೆ. ಈ ದಂಧೆಗೆ ಕಡಿವಾಣ ಅಗತ್ಯವಿದೆ. ಹೊಸ ಹೊಸ ದುಬಾರಿ ಬೆಲೆಯ ಹೊರಗೆಲ್ಲೂ ಸಿಗದ ಈ ಔಷಧಿಗಳನ್ನು ಅಲ್ಲಿಯೇ ಕೊಳ್ಳಬೇಕಿದೆ. ಅಡ್ಮಿಶನ್ ಆದ ಕೂಡಲೇ ಲಕ್ಷ ಲಕ್ಷ ಕಟ್ಟುವಂತೆ ಪೀಡಿಸುವ ಆಸ್ಪತ್ರೆಗಳನ್ನು ಸರಿದಾರಿಗೆ ತರಲು ಸರ್ಕಾರ ದೃಢ ನಿರ್ಧಾರ ಕೈಗೊಳ್ಳಬೇಕು. 90ರ ದಶಕದಲ್ಲಿ ಆರೋಗ್ಯ ಇಲಾಖೆ ಎರಡು ಸಾವಿರ ಇಸವಿಯ ವೇಳೆಗೆ ಎಲ್ಲರಿಗೂ ಆರೋಗ್ಯ ಎಂದು ಘೋಷಣೆ ಮಾಡಿತ್ತು. ಆದರೆ ಅದು ಇಂದಿಗೂ ಮರೀಚಿಕೆಯಾಗಿಯೇ ಉಳಿದಿದೆ.

–ಮುಳ್ಳೂರು ಪ್ರಕಾಶ್, ನಿವೃತ್ತ ಫಾರ್ಮಸಿ ಅಧಿಕಾರಿ, ಮೈಸೂರು.

ಬ್ಯಾಲೆಟ್ ಪೇಪರ್ ವ್ಯವಸ್ಥೆ ರದ್ದುಪಡಿಸಿರುವ ಸುಪ್ರೀಂಕೋರ್ಟ್ ನಡೆ ಸ್ವಾಗತಾರ್ಹ

ಮಾನ್ಯರೆ,

ಮತದಾನ ಮಾಡಲು ಎಲೆಕ್ಟ್ರಾನಿಕ್ ವೋಟಿಂಗ್ ಮೇಶೀನನ್ನು ರದ್ದುಪಡಿಸಿ (ಇವಿಎಂ), ಹಿಂದಿನ ಬ್ಯಾಲೆಟ್ ಪೇಪರ್ ವ್ಯವಸ್ಥೆಯನ್ನು ಜಾರಿ ಮಾಡುವಂತೆ ಕೋರಿ ಅರ್ಜಿದಾರರೊಬ್ಬರು ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂಕೋರ್ಟ್ ಮೊನ್ನೆ ವಜಾ ಮಾಡಿರುವುದು ಸ್ವಾಗತಾರ್ಹ. ಕೆಲವು ಕಾಂಗ್ರೆಸ್ ಮುಖಂಡರು ಸೇರಿದಂತೆ, ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ಇವಿಎಂಗಳ ಬಗ್ಗೆ ಅನುಮಾನಗಳನ್ನು ವ್ಯಕ್ತಪಡಿಸಿದ್ದಾರೆ. ಚುನಾವಣೆಯಲ್ಲಿ ಕಾಂಗ್ರೆಸ್ ಪರಾಜಯ ಹೊಂದಿದ ರಾಜ್ಯಗಳಲ್ಲಿ ಈ ಅನುಮಾನ ವ್ಯಕ್ತವಾಗಿದೆ. ಆದರೆ ಗೆದ್ದ ಕ್ಷೇತ್ರಗಳಲ್ಲಿ ಅನುಮಾನ ವ್ಯಕ್ತಪಡಿಸುವುದಿಲ್ಲವೇಕೆ? ಹಿಂದಿನ ಬ್ಯಾಲೆಟ್ ಪೇಪರ್ ವ್ಯವಸ್ಥೆಯಲ್ಲಿನ ಕಹಿ ಘಟನೆಗಳು ಸಾರ್ವಜನಿಕರಿಗೆ ತಿಳಿದಿದೆ. ಇವಿಎಂನಲ್ಲಿ ಪಾರದರ್ಶಕತೆಯನ್ನು ಕಾಪಾಡಲು ಸಾಧ್ಯವಿದೆ. ಇವಿ ಪ್ಯಾಡ್ ಅನ್ನೂ ಎಣಿಕೆ ಮಾಡುವುದರಿಂದ ಅನುಮಾನಕ್ಕೆ ಆಸ್ಪದವೇ ಇರುವುದಿಲ್ಲ. ನಾನು ಸರ್ಕಾರಿ ಸೇವೆಯಲ್ಲಿದ್ದಾಗ ಚುನಾವಣಾ ಎಣಿಕೆ ಕೆಲಸ ಮಾಡಿರುವುದರಿಂದ ಹೇಳುತ್ತಿದ್ದೇನೆ. ಇವಿಎಂನಿಂದ ಮಾನವ ಶಕ್ತಿಯನ್ನು ಸಹ ಕಡಿಮೆ ಮಾಡಬಹುದು. ಇದರಿಂದಾಗಿ ಸಮಯ ಮತ್ತು ಹಣ ಎರಡು ಉಳಿತಾಯ ಮಾಡಿದಂತಾಗುತ್ತದೆ. ಫಲಿತಾಂಶವನ್ನು ಕೆಲವೇ ಗಂಟೆಗಳಲ್ಲಿ ತಿಳಿಯಬಹುದು. ಭಾರತ ಸುಮಾರು 25 ವರ್ಷಗಳಿಂದಲೂ ಇವಿಎಂ ವ್ಯವಸ್ಥೆಯನ್ನು ಜಾರಿ ಮಾಡಿದೆ. ಇದನ್ನು ಮತದಾರರು ಸಹ ಒಪ್ಪಿಕೊಂಡಿದ್ದಾರೆ. ಆದರೆ ಕಾಂಗ್ರೆಸ್ ಪಕ್ಷದ ಕೆಲವರಿಗೆ, ಈಗೇಕೆ ಅನುಮಾನ ಬಂತು ತಿಳಿಯದು?

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಕ್ರಿಯಾಶೀಲ ವ್ಯಕ್ತಿತ್ವದ ನರಸಿಂಹ ಐಯ್ಯಂಗಾರ್

ಮಾನ್ಯರೆ,

ಮೈಸೂರಿನ ಹಿರಿಯ ವಕೀಲರಾದ ಆರ್.ಜಿ.ನರಸಿಂಹ ಐಯ್ಯಂಗಾರ್ (74) ನಿಧನ ಹೊಂದಿದ್ದಾರೆ. ನಗರದ ಎರಡನೇ ಮೇಯರ್ ಆಗಿದ್ದ (1985–86) ಶ್ರೀಯುತರು ನಗರದ ಅಭಿವೃದ್ಧಿಗಾಗಿ ಸಾಕಷ್ಟು ಶ್ರಮಿಸಿದ್ದರು. ಅವರ ಅಧಿಕಾರಾವಧಿಯಲ್ಲಿ ನಗರದ ಕಲಾಮಂದಿರದಲ್ಲಿ ಪ್ರಥಮ ವಿಶ್ವ ಕನ್ನಡ ಸಮ್ಮೇಳನ ಜರುಗಿತ್ತು. ಕಾರ್ಮಿಕ ಕಾನೂನಿನಲ್ಲಿ ವಿಶೇಷ ಪರಿಣತಿ ಹೊಂದಿದ್ದ ನರಸಿಂಹ ಐಯ್ಯಂಗಾರ್ ಹಲವಾರು ಸಂಘ ಸಂಸ್ಥೆಗಳ ಜೊತೆಗೆ ನಿಕಟ ಸಂಪರ್ಕ ಹೊಂದಿದ್ದರು. ನಗರದ ಕಾಸ್ಮಾಪಾಲಿಟನ್ ಕ್ಲಬ್‌ನ ಅಧ್ಯಕ್ಷರಾಗಿ ಎರಡು ಅವಧಿಗೆ ಚುನಾಯಿತರಾಗಿದ್ದರು. ಮೂಲತಃ ಜನತಾ ಪಕ್ಷದ ಮೂಲಕ ರಾಜಕೀಯ ಪ್ರವೇಶಿಸಿದ ನರಸಿಂಹ ಐಯ್ಯಂಗಾರ್, ನಂತರ ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಸೇರಿದ್ದರು. ಕಡೆಯವರೆಗೂ ಕ್ರಿಯಾಶೀಲರಾಗಿಯೇ ಇದ್ದ ನರಸಿಂಹ ಐಯ್ಯಂಗಾರ್ ಇನ್ನು ಕೇವಲ ನೆನಪು ಮಾತ್ರ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು.

ಪಾಸ್‌ಪೋರ್ಟ್‌ಗೆ ಕಾಲಮಿತಿ ನಿಗದಿಪಡಿಸಲಿ

ಮಾನ್ಯರೆ,

ನನ್ನ ಹಳೆಯ ಪಾಸ್‌ಪೋರ್ಟ್‌ನ ಕಾಲಾವಧಿ ಮುಗಿದುಹೋಗಿದ್ದು ನಿಗಧಿತ ಶುಲ್ಕ ಕಟ್ಟಿ, ಬೇರೆ ಪಾಸ್‌ಪೋರ್ಟ್‌ಗೆ ಕೇಳಿದ್ದೆ. ದಿನಾಂಕ 7.11.24 ರಲ್ಲಿ ಮೈಸೂರು ಪಾಸ್ ಪೋರ್ಟ್ ಆಫೀಸ್‌ಗೆ ಹೋಗಿ ನಿಗದಿತ ಅರ್ಜಿ ಕೊಟ್ಟೆ. ದಿನಾಂಕ 17.11.24 ರಲ್ಲಿ ಕುವೆಂಪುನಗರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ವೆರಿಫಿಕೇಶನ್ ಆಯಿತು. ಇಂದು 30.11.24 ಆದರೂ ಹೊಸ ಪಾಸ್‌ಪೋರ್ಟ್ ಬಂದಿಲ್ಲ. ಪಾಸ್‌ಪೋರ್ಟ್‌ಗೆ ಇಷ್ಟು ತಡವಾಗುತ್ತಿರುವುದು ಸಂತೋಷದ ವಿಷಯವಲ್ಲ. ನಮ್ಮ ಸಂಸದರು ಇಂತಹ ವಿಷಯಗಳ ಕಡೆ ಗಮನಹರಿಸಲಿ ಮತ್ತು ಇಂತಹ ಕೆಲಸಗಳಿಗೆ ಕಾಲಮಿತಿ ನಿಗದಿಪಡಿಸಲಿ.

–ಅಕ್ಕಿಹೆಬ್ಬಾಳು ವೆಂಕಟೇಶ್, ಮೈಸೂರು



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಚಿಂತನೆ

ಜೀವನದ ಅವಶ್ಯಕತೆಗಳು ಬದಲಾಗುತ್ತಿವೆಯೇ...?

> "ನಮ್ಮ ಜೀವನದ ಅವಶ್ಯಕತೆಗಳು ಬದಲಾಗುತ್ತಿದೆ ಎಂದು ಭಾವಿಸಬೇಕಾಗುತ್ತದೆ. ಇಂದು ಖುಷಿ ನೀಡಿದ್ದು ನಾಳೆಗೆ ಅದೇ ಖುಷಿ ನೀಡುತ್ತಿಲ್ಲ ಎಂದಾದಾಗ ನಮ್ಮ ಮನೋಭಾವ ಬದಲಾಗುತ್ತಿದೆ ಎಂದೇ ಹೇಳಬೇಕು. ಎಂದಿಗೂ ಅಷ್ಟೇ, ಹೊರಗಿನ ಆಡಂಬರ ನೋಡಲಷ್ಟೇ ಚೆನ್ನ. ಕೊನೆಗೆ ನಮ್ಮದೇ ಆದ ಮೂಲ ವಸ್ತುಗಳೇ ಸರಿ ಎನಿಸುವಂತಾಗುತ್ತದೆ.

ನಮ್ಮ ಜೀವನದ ಅವಶ್ಯಕತೆಗಳು ಆಗಿಂದಾಗ್ಗೆ ಬದಲಾಗುತ್ತಿರುತ್ತವೆ. ಒಂದು ಕಾಲದಲ್ಲಿ ಖುಷಿ ನೀಡುತ್ತಿದ್ದ ವಸ್ತುಗಳು, ಆಹಾರಗಳು ನಂತರ ಆ ರೀತಿಯ ಖುಷಿ ನೀಡುವುದಿಲ್ಲ. ದೊಡ್ಡ ಮನೆ ಖುಷಿ ಎನಿಸಿದ್ದು, ದಿನಕಳೆದಂತೆ ಹಾಗೆನಿಸುವುದಿಲ್ಲ. ಯಾವುದಾದರೂ ಹೋಟೆಲ್‌ನ ತಿಂಡಿ, ಊಟ ಮೊದಲ ದಿನದಂತೆ ಖುಷಿ ನೀಡುವುದಿಲ್ಲ.

ನಮಗೆ ಅಲ್ಲಲ್ಲಿ ಸೆಕೆಂಡ್‌ಹ್ಯಾಂಡ್ ಕಾರುಗಳ ಮಾರಾಟದ ಅಂಗಡಿಗಳು ಕಾಣಸಿಗುತ್ತವೆ. ಒಳ್ಳೆಯ, ಒಂದೆರಡು ವರ್ಷಗಳ ಹಿಂದೆ ಕೊಂಡಿದ್ದ ಕಾರುಗಳೂ ಅಲ್ಲಿ ಮಾರಾಟಕ್ಕೆ ಸಿಗುತ್ತವೆ. ಮೂಲ ಬೆಲೆಯ ಸುಮಾರು ಮುಕ್ಕಾಲು ಭಾಗಕ್ಕೆ ಅವು ದೊರಕುತ್ತವೆ. ಮೊದಲು ಅಲ್ಲಲ್ಲಿ ಕಾಣುತ್ತಿದ್ದ ಇಂತಹ ಹಳೆಯ(?) ಕಾರು, ಬೈಕುಗಳ ಮಾರಾಟದ ಅಂಗಡಿಗಳು ಇಂದು ಎಲ್ಲಾ ಮುಖ್ಯ ರಸ್ತೆಗಳಲ್ಲಿ ಕಂಡುಬರುತ್ತವೆ. ಕೇವಲ ಒಂದು ಅಥವಾ ಎರಡು ವರ್ಷಗಳ ಹಿಂದೆ ಬಹಳ ಆಸೆಪಟ್ಟು ಕೊಂಡುಕೊಂಡಿದ್ದ ಇವುಗಳನ್ನು ಅದರ ಮಾಲೀಕರು ಏಕೆ ಮಾರುತ್ತಾರೆ? ಅವು ಹಳೆಯದಂತೂ ಅಲ್ಲ.

ಕೆಲವು ಕಾರುಗಳಂತೂ ಹತ್ತಿಪ್ಪತ್ತು ಸಾವಿರ ಕಿಲೋಮೀಟರೂ ಓಡಿರುವುದಿಲ್ಲ. (ಇತ್ತೀಚೆಗೆ ಬರುತ್ತಿರುವ ಕಾರುಗಳು ಎರಡು ಲಕ್ಷ ಕಿಲೋಮೀಟರುಗಳಿಗೂ ಹೆಚ್ಚು ದೂರ ಓಡಬಲ್ಲವು) ಹಾಗಿದ್ದರೂ ಅವನ್ನು ಏಕೆ ಮಾರಾಟಕ್ಕೆ ಇಡುತ್ತಾರೆ? ಮೂಲ ಬೆಲೆ ಹದಿನೈದಿಪ್ಪತ್ತು ಲಕ್ಷವಾಗಿರುವುದನ್ನು ಹತ್ತು, ಹದಿನೈದು ಲಕ್ಷಕ್ಕೆ ಅಥವಾ ಅದಕ್ಕಿಂತ ಕೊಂಚ ಕಡಿಮೆ ಬೆಲೆಗೆ ಮಾರಾಟಕ್ಕೆ ಇಡಲಾಗುತ್ತದೆ. ಹಾಗೆ ಮಾರಾಟಕ್ಕೆ ಇಟ್ಟ ವಾಹನ ಒಂದೆರಡು ತಿಂಗಳಲ್ಲಿ ಮಾರಾಟವಾಗದಿದ್ದರೆ ಮತ್ತಷ್ಟು ಕಡಿಮೆಗೆ ಮಾರಲು ಅದರ ಮಾಲೀಕರು ನಿರ್ಧರಿಸುತ್ತಾರೆ. ವಾಹನವನ್ನು ಆ ಬೆಲೆಗೆ ಕೊಳ್ಳುವವರಿಗೆ ಇದೇಕೆ ಹೀಗೆ ಮಾರುತ್ತಾರೆ? ವಾಹನ ಎಲ್ಲೋ ಅಪಘಾತಕ್ಕೆ ಈಡಾಗಿತ್ತು ಎಂದು ಕಾಣುತ್ತದೆ, ಅದಕ್ಕೇ ಮಾರುತ್ತಿದ್ದಾರೆ ಎಂದು ಅನುಮಾನಿಸುವವರೂ ಇರುತ್ತಾರೆ. ಅದರ ಬಗ್ಗೆ ಪರಿಶೀಲಿಸಿಕೊಳ್ಳಲು ಇಂದು ಹಲವು ಮಾರ್ಗಗಳಿವೆ. ಅದರಂತೆ ಪರಿಶೀಲಿಸಿದಾಗ ಅವು ಅಪಘಾತಕ್ಕೆ ಈಡಾದ ವಾಹನವಲ್ಲ ಎಂಬುದು ಕಂಡುಬರುತ್ತದೆ. ಹಾಗಾದರೆ ಕಡಿಮೆ ಬೆಲೆಗೆ ಮಾರಾಟ ಮಾಡಲು ಕಾರಣವೇನು? ಕೆಲವರು ಮಾತ್ರ ಹೊಸ ಕಾರು, ಹೊಸ ಮಾಡೆಲ್ ಎಂದು ಬೇರೆ ಕಾರು ಖರೀದಿಸಲು ಯೋಚಿಸಬಹುದು. ಆದರೂ ಮೂಲ ಕಾರಣ ಏನಿರಬಹುದು ಎಂದು ಪರಿಶೀಲಿಸಬೇಕೆನಿಸುತ್ತದೆ.

ಆ ಕಾರನ್ನು ಅವರು ಖರೀದಿಸಿದಾಗ ಅದು ಹೊಸ ಮಾಡೆಲ್ಲೇ ಆಗಿತ್ತು. ಈಗಲೂ ಅದು ಹೊಸದಾಗಿ ಮಾರುಕಟ್ಟೆಯಲ್ಲಿ ಮಾರಾಟವಾಗುತ್ತಿದೆ. ಆದರೂ ಅವರು ಮಾರುತ್ತಿದ್ದಾರೆ ಎಂದರೆ ಅವರಿಗೆ ಕಾರನ್ನು ಖರೀದಿಸಿದಾಗ ಸಿಕ್ಕ ಆನಂದ ಈಗ ಸಿಗುತ್ತಿಲ್ಲ ಎಂಬುದು ಒಂದು ಕಾರಣವಿರಬಹುದು. ಮೊದಲು ಅದರಲ್ಲಿ ಠೀವಿಯಿಂದ ಕುಳಿತು ಹೆಮ್ಮೆಯಿಂದ ಹೋಗುತ್ತಿದ್ದವರಿಗೆ ಈಗ ಅದು ಅಂತಹ ಸಂತೋಷ ನೀಡುತ್ತಿಲ್ಲ. ಮತ್ತೊಂದು ಹೊಸ ಕಾರು ಕೊಂಡರೂ ಮತ್ತೊಂದು ವರ್ಷದಲ್ಲಿ ಅದೂ ಬೇಸರ ತರಿಸುತ್ತದೆ. ಹಾಗೆ ಮಾರುತ್ತಾ ಹೋಗುವುದು ಮತ್ತೊಂದು ಸಂತೋಷ ಹುಡುಕುವುದಕ್ಕಾಗಿ ಎನ್ನುವಂತಾಗಿದೆ. ಆದರೆ ಇಂತಹ ಮನೋಭಾವ ಇರುವಾಗ ಅವರಿಗೆ ಯಾವುದೂ ಸಂತಸ ನೀಡುವುದಿಲ್ಲ.

ಕಾರಿನ ಬಗ್ಗೆ ಕೆಲವರ ವ್ಯಾಖ್ಯಾನ ಬೇರೆಯ ರೀತಿಯಾಗಿರುತ್ತದೆ. ನೀವು ಎಂತಹುದೇ ಐಷಾರಾಮಿ ಕಾರಿನಲ್ಲಿ ಹೋದರೂ ಪ್ರಯಾಣದ ಅವಧಿ ಏನೂ ಕಡಿಮೆಯಾಗುವುದಿಲ್ಲ. ದುಬಾರು ಕಾರುಗಳು ಹೆಚ್ಚು ಮೈಲೇಜ್ ನೀಡುವುದಿಲ್ಲ. ಕುಳಿತ ಕೆಲವು ಸಮಯ ಮಾತ್ರ ಖುಷಿ ನೀಡುವ ಆಸನಗಳು ನಂತರ ಅಂತಹ ಖುಷಿ ನೀಡುವುದಿಲ್ಲ. ಹಾಗಿದ್ದ ಮೇಲೆ ಇರುವ ಸಾಧಾರಣ ಕಾರೇ ಮೇಲಲ್ಲವೇ? ಎಂದು ಕೇಳುತ್ತಾರೆ. ಇಂತಹ ಮನೋಭಾವದವರೇ ಒಂದೇ ಕಾರನ್ನು ಹತ್ತಾರು ವರ್ಷಗಳಿಂದ ಉಪಯೋಗಿಸುತ್ತಿರುವುದನ್ನು ಕಾಣಬಹುದು. ಇದೂ ನಿಜವೇ. ಹೊಸದರಲ್ಲಿ ಮುದ ನೀಡುವ ಅವು ಕೆಲವೇ ದಿನಗಳಲ್ಲಿ ಅಂತಹ ಅನಿಸಿಕೆಗಳನ್ನು ಇಲ್ಲದಂತಾಗಿಸುತ್ತದೆ. ಇರಬಹುದು, ಕೆಲವರಿಗೆ ಹೆಚ್ಚು ಹಣದ ಸಂಪಾದನೆ ಇದ್ದಾಗ ಅವರು ಈಗಿರುವ ಕಾರಿಗಿಂತ ಲಕ್ಷುರಿ ಎನಿಸುವ ಮತ್ತೊಂದು ಕಾರು ಬಯಸಬಹುದು. ಆದರೆ ಎಲ್ಲರ ಮನೋಭಾವ ಹಾಗೂ ಆರ್ಥಿಕ ಪರಿಸ್ಥಿತಿ ಹಾಗಿರುವುದಿಲ್ಲ.

ಇದು ಕೇವಲ ವಾಹನಗಳಿಗೆ ಮಾತ್ರ ಅನ್ವಯಿಸುತ್ತದೆ ಎಂದಲ್ಲ. ನಾವು ವಾಸಿಸುವ ಮನೆಗೂ ಅನ್ವಯವಾಗುತ್ತದೆ. ಇಂದು ಹೊಸದಾಗಿ ಕಟ್ಟಿದ ಮನೆ ಕೆಲವೇ ವರ್ಷಗಳಲ್ಲಿ ಕೆಲವು ಬದಲಾವಣೆಗೆ ಒಳಪಡುತ್ತದೆ. ಕೆಲವರಂತೂ ಈಗಿರುವುದನ್ನು ಕೆಡವಿ ಹೊಸದಾಗಿಯೇ ಕಟ್ಟುತ್ತಾರೆ. ಅಂತಹ ಮನೆ ಕೆಡವಲು ಮತ್ತಷ್ಟು ಖರ್ಚು ಮಾಡಬೇಕಾಗುತ್ತದೆ ಎಂಬುದನ್ನೂ ಗಮನಿಸಬೇಕು. ಅದೇ ರೀತಿ ಹೋಟೆಲ್‌ಗಳಲ್ಲಿ ತಿನ್ನುವುದು. ಯಾವಾಗಲೋ ಒಮ್ಮೆ ಒಂದು ಹೋಟೆಲ್ಲಿಗೆ ಹೋದಾಗ ಅಲ್ಲಿನ ಊಟ ತಿಂಡಿ ನಮಗೆ ಬಹಳ ರುಚಿಕರವಾದದ್ದು ಎನಿಸುತ್ತದೆ. ಹಾಗೆಂದು ಸತತವಾಗಿ ಅದೇ ಹೋಟೆಲ್ಲಿಗೆ ಹೋಗಿ ಅದೇ ಊಟ–ತಿಂಡಿ ತಿನ್ನುವಾಗ ಇದು ಯಾಕೋ ಮೊದಲಿನಂತೆ ಖುಷಿ ನೀಡುತ್ತಿಲ್ಲ ಎನಿಸುತ್ತದೆ. ಬೇರೆ ಹೋಟೆಲ್ ಹುಡುಕಿಕೊಂಡು ಹೋದರೂ ಅದೇ ಕಥೆ. ಕೊನೆಗೆ ತಿಳಿಸಾರಾದರೂ ಪರವಾಗಿಲ್ಲ, ಮನೆಯ ಊಟವೇ ಚೆಂದ ಎನಿಸುವಂತೆ ಆಗುತ್ತದೆ. ಕೆಲವು ತಿಂಗಳ ಹಿಂದೆ ಒಬ್ಬರ ಮನೆಗೆ ಹೋದಾಗ ಅವರು ಕೇಟರಿಂಗ್ ಹೆಸರಿನಲ್ಲಿ ಮನೆಗೆ ಊಟ–ತಿಂಡಿ ತರಿಸಿಕೊಳ್ಳುತ್ತಿದ್ದರು. ಆರಂಭದ ಹಂತದಲ್ಲಿ ಅವರನ್ನು ಭೇಟಿಯಾದಾಗ ಊಟ–ತಿಂಡಿ ಬಹಳ ಚೆನ್ನಾಗಿದೆ ಎಂದಿದ್ದರು. ಒಂದೆರಡು ತಿಂಗಳ ನಂತರವೂ ಅವರೂ ಅದೇ ಕೇಟರಿಂಗ್‌ನಿಂದ ಊಟ ತಿಂಡಿ ತರಿಸುತ್ತಿದ್ದಾರೆ. ಈಗ ಕೇಳಿದರೆ ಯಾಕೋ ಚೆನ್ನಾಗಿಲ್ಲ. ದಿನದಿನವೂ ಅದೇ ತರಕಾರಿ, ಅದೇ ಟೇಸ್ಟ್, ಏಕೋ ಬೇಸರ ತರಿಸುತ್ತಿದೆ ಎನ್ನುತ್ತಾರೆ. ಅಡುಗೆ ತಿಂಡಿ ಮಾಡಿ ನೀಡುವವರು ತಮ್ಮ ವಿಧಾನದಲ್ಲಿ ಯಾವುದೇ ಬದಲಾವಣೆ ಮಾಡಿರುವುದಿಲ್ಲ. ಆದರೆ ಅದನ್ನೇ ತಿನ್ನುವವರಿಗೆ ಊಟತಿಂಡಿಯ ರುಚಿಯಲ್ಲಿ ಬದಲಾವಣೆ ಕಾಣುತ್ತದೆ, ಮೊದಲಿನಂತೆ ಇಷ್ಟವಾಗುವುದಿಲ್ಲ.

ಅಂದರೆ ನಮ್ಮ ಜೀವನದ ಅವಶ್ಯಕತೆಗಳು ಬದಲಾಗುತ್ತಿದೆ ಎಂದು ಭಾವಿಸಬೇಕಾಗುತ್ತದೆ. ಇಂದು ಖುಷಿ ನೀಡಿದ್ದು ನಾಳೆಗೆ ಅದೇ ಖುಷಿ ನೀಡುತ್ತಿಲ್ಲ ಎಂದಾದಾಗ ನಮ್ಮ ಮನೋಭಾವ ಬದಲಾಗುತ್ತಿದೆ ಎಂದೇ ಹೇಳಬೇಕು. ಎಂದಿಗೂ ಅಷ್ಟೇ, ಹೊರಗಿನ ಆಡಂಬರ ನೋಡಲಷ್ಟೇ ಚೆನ್ನ. ಕೊನೆಗೆ ನಮ್ಮದೇ ಆದ ಮೂಲ ವಸ್ತುಗಳೇ ಸರಿ ಎನಿಸುವಂತಾಗುತ್ತದೆ.

ಈಗ್ಗೆ ಹತ್ತು ವರ್ಷಗಳ ಹಿಂದೆ ಕುಡಿಯುವ ನೀರನ್ನು ಬಾಟಲಿನಲ್ಲಿ ಉಪಯೋಗಿಸುವುದು ಆರಂಭವಾಯಿತು. ಅದನ್ನು ಮಿನರಲ್ ವಾಟರ್ ಎಂದು ಕರೆದು, ಅದನ್ನು ಕುಡಿಯುವುದರಿಂದ ಆರೋಗ್ಯ ಸುಧಾರಿಸುತ್ತದೆ ಎಂದು ಹೇಳಲಾಗುತ್ತಿತ್ತು. ಆದರೆ ಇಂದು ಈ ಕುಡಿಯುವ ನೀರಿನ ಬಾಟಲ್ಲುಗಳು ಫುಟ್‌ಪಾತಿನಲ್ಲೂ ಸಿಗುತ್ತದೆ. ವಿಧಿ ಇಲ್ಲದೆ ಪ್ರಯಾಣ ಮಾಡುವಾಗ ಉಪಯೋಗಕ್ಕೆ ಎಂದು ಖರೀಸುತ್ತಾರೆಯೇ ವಿನಃ, ಅದನ್ನೇ ಕುಡಿಯಬೇಕು ಎಂಬ ಮನಸ್ಥಿತಿ ಈಗಿಲ್ಲ. ಈಗ ಶುದ್ಧವಾದ ಕುಡಿಯುವ ನೀರು ಸಿಗದಿರುವುದರಿಂದ ಮನೆಗಳಲ್ಲೂ ಕ್ಯಾನುಗಳು, ವಾಟರ್ ಪ್ಯೂರಿಫೈಯರ್‌ಗಳು ಕಂಡು ಬರುತ್ತವೆ. ಆದರೆ ಅವು ಈ ಹಿಂದೆ ಮನೆಗಳಲ್ಲಿ ಕುಡಿಯುತ್ತಿದ್ದ ನೀರಿನಂತಹ ತೃಪ್ತಿ ನೀಡುತ್ತಿಲ್ಲ. ಈಗ ಎಲ್ಲಾದರೂ ಶುದ್ಧವಾದ ಕುಡಿಯುವ ನೀರು ಸಿಕ್ಕಿದರೆ ಸಾಕು ಎಂದು ತಡಕಾಡುವಂತೆ ಆಗುತ್ತಿದೆ. ಅಂತಹ ಶುದ್ಧವಾದ ನೀರು ಹಾಗೂ ಬಾಟಲ್ ನೀರನ್ನು ಅಕ್ಕಪಕ್ಕದಲ್ಲಿ ಇರಿಸಿ, ನಿಮಗೆ ಯಾವುದು ಬೇಕು? ಎಂದು ಕೇಳಿದರೆ ನಮ್ಮ ಆಯ್ಕೆ ಶುದ್ಧವಾದ ನೀರೇ ಆಗಿರುತ್ತದೆ. ಬಾಟಲ್ ಬೇಡ ಎನಿಸುತ್ತದೆ. ಅಂದರೆ ಮನಸ್ಸು ಶುದ್ಧವಾದ ನೀರು ಬಯಸುತ್ತದೆಯೇ ವಿನಃ ಹಣ ಖರ್ಚು ಮಾಡಿ ಖರೀದಿಸುವ ನೀರು ಬೇಡ ಎನಿಸುತ್ತದೆ.

ಇತ್ತೀಚೆಗೆ ಸಾವಯವ ಆಹಾರ ಜನರನ್ನು ಸೆಳೆಯುತ್ತಿದೆ. ಕಾರಣ ಕೇಳಿದರೆ ಹೇಳುವುದು ಆರೋಗ್ಯ ಮುಖ್ಯ ಎಂದು. ಇದು ಗೊತ್ತಾಗಲು ನಮಗೆ ಇಷ್ಟ ಸಮಯ ಬೇಕಾಯಿತಲ್ಲಾ ಎನಿಸುತ್ತದೆ. (ಆದರೆ ಇಂದು ಸಾವಯವ ಎಂದು ಸಾಕಷ್ಟು ಮೋಸ ನಡೆಯುತ್ತಿರುವುದು ವರದಿಯಾಗುತ್ತಿದೆ. ಅದು ಹಣದ ಹಪಾಹಪಿತನ). ಹೊಸದಾದ ಸೊಪ್ಪು, ತರಕಾರಿ, ಹಣ್ಣುಗಳನ್ನು ಇಂದು ನಾವು ಬಯಸುತ್ತಿದ್ದೇವೆ. ಫ್ರಿಜ್‌ನಲ್ಲಿಟ್ಟು ನಾಲ್ಕಾರು ದಿನಗಳ ನಂತರ ಉಪಯೋಗಿಸಲು ಈಗ ಮನಸ್ಸು ಒಪ್ಪುತ್ತಿಲ್ಲ. ಹಸಿರಾದ ಸೊಪ್ಪು, ತರಕಾರಿ ಕಂಡಾಗ ಕೊಂಡುಕೊಳ್ಳಲು ಮನಸ್ಸಾಗುತ್ತದೆ. ಅಂದರೆ ಕ್ರಮೇಣ ಫ್ರಿಜ್‌ಗಳ ಬಳಕೆಯಲ್ಲಿ ವ್ಯತ್ಯಾಸವಾಗುತ್ತಿರುವುದನ್ನು ಕಾಣಬಹುದಾಗಿದೆ.

ಹಿರಿಯರೊಬ್ಬರು ಹೇಳುತ್ತಿದ್ದರು. ನಾವು ಚಿಕ್ಕವರಿದ್ದಾಗ ಆಟಕ್ಕೆ ಚೆಂಡು ಬೇಕಾದಾಗ ನಮ್ಮಲ್ಲಿ ಅದನ್ನು ಕೊಂಡುಕೊಳ್ಳಲು ಹಣವಿರುತ್ತಿರಲಿಲ್ಲ. ಆಗ ಹತ್ತಾರು ಜನರು ಕೂಡಿ ಹಣ ಹಾಕಿ ಚೆಂಡು ಖರೀದಿಸಿ, ಮನಸಾರೆ ಆಟವಾಡುತ್ತಿದ್ದೆವು. ಇಂದು ನಮ್ಮ ಮಕ್ಕಳು, ಮೊಮ್ಮಕ್ಕಳಿಗೆ ಅವರು ಕೇಳಿದಂತಹ ಚೆಂಡನ್ನು ಕೊಡಿಸಿದರೆ, ಆಟವಾಡಲು ಹತ್ತಾರು ಮಕ್ಕಳೇ ಸಿಗುತ್ತಿಲ್ಲ. ಒಂದು ಮಗು ತಾನೊಬ್ಬನೇ ಹೇಗೆ ಸಂತೋಷವಾಗಿ ಚೆಂಡಿನೊಡನೆ ಆಡಲು ಸಾಧ್ಯ? ಎನ್ನುತ್ತಾರೆ. ಮಕ್ಕಳನ್ನು ಎಲ್ಲಿಂದ ಕರೆತರುವುದು? ಮಕ್ಕಳು ಇಂದು ಆಟವಾಡುವುದು ಮೊಬೈಲ್‌ಗಳಲ್ಲಿ ಎಂಬಂತಾಗಿದೆ. ಅಂದರೆ ನಮ್ಮ ಇರುವಿಕೆಯಲ್ಲಿ ಬದಲಾವಣೆಯಾಗುತ್ತಿದೆ. ಇದನ್ನು ಕಂಡ ಹಿರಿಯರು ನಮ್ಮ ಕಾಲವೇ ಚೆನ್ನಾಗಿತ್ತು. ಸಂಜೆಯಾದರೆ ಹತ್ತಾರು ಮಕ್ಕಳು ಸೇರಿ ಮನಸೋ ಇಚ್ಛೆ ಆಟವಾಡುತ್ತಿದ್ದೆವು. ಇಂದಿನ ಮಕ್ಕಳಿಗೆ ಆ ಸೌಭಾಗ್ಯವಿಲ್ಲ ಎಂದು ನೊಂದುಕೊಳ್ಳುತ್ತಾರೆ.

ಮನೆಗಳಲ್ಲಿ, ದೊಡ್ಡ ಕಟ್ಟಡಗಳಲ್ಲಿ ಲಿಫ್ಟ್ ಬಂದಾಗ ಅದು ನಮಗೆ ಸೋಜಿಗವೆನಿಸುತ್ತಿತ್ತು. ಯಾವುದೇ ದೈಹಿಕ ಶ್ರಮವಿಲ್ಲದೆ ಹತ್ತಾರು ಮಹಡಿಗಳನ್ನು ಆರಾಮವಾಗಿ ಏರಬಹುದು ಹಾಗೂ ಇಳಿಯಬಹುದು ಎಂದು ಮನಸ್ಸು ಖುಷಿಪಟ್ಟಿತ್ತು. ಕೆಲವೇ ವರ್ಷಗಳಲ್ಲಿ ಮೆಟ್ಟಿಲು ಏರುವಾಗ ಆಗುತ್ತಿದ್ದ ದೈಹಿಕ ಶ್ರಮ ಇಲ್ಲವಾಗುತ್ತಾ ಈಗ ಹತ್ತುವುದು ಕಷ್ಟ, ಆದರೆ ಇಳಿಯುವುದು ಅಷ್ಟು ಕಷ್ಟವಲ್ಲ, ಹಾಗಾಗಿ ಕೆಲವು ಹಂತಗಳನ್ನಾದರೂ ಇಳಿಯೋಣ, ಲಿಫ್ಟ್ ಬೇಡ ಎಂದು ಅನೇಕರು ಭಾವಿಸುತ್ತಾರೆ. ಎರಡು ಮೂರು ಮಹಡಿಯಾದರೆ ಹತ್ತೇ ಹೋಗೋಣ ಎಂಬ ಮನೋಭಾವ ಇಂದು ಕಂಡುಬರುತ್ತಿದೆ.

ನಮ್ಮ ಮತ್ತೊಂದು ಆದ್ಯತೆ ನಾವು ಸೇವಿಸುವ ಗಾಳಿಗೆ ಸಂಬಂಧಿಸಿದ್ದು. ಮೊದಮೊದಲು ಫ್ಯಾನ್, ಏಸಿ ಬೇಕೆನಿಸುತ್ತಿತ್ತು. ಆರಂಭದಲ್ಲಿ ಅದು ಶ್ರೀಮಂತರ ಸೊತ್ತು ಎಂಬಂತಾಗಿತ್ತು ಕ್ರಮೇಣ ಮನೆಮನೆಗೆ ಫ್ಯಾನುಗಳು ಬಂದವು, ಹಾಗೆ ಬಹುತೇಕ ಕಡೆ ಏಸಿಯೂ ಬಂದಿದೆ. ಇಂದು ಫ್ಯಾನಿನ ಗಾಳಿ, ಏಸಿ ತಂಪು ಎನಿಸುತ್ತಿಲ್ಲ. ಎಲ್ಲಾದರೂ ಶುದ್ಧವಾದ ಗಾಳಿ ಸಿಕ್ಕರೆ ಸ್ವರ್ಗ ಸಿಕ್ಕಂತೆ ಎಂದು ಭಾವಿಸುವಂತೆ ಆಗಿದೆ.

ಹಾಗಾಗಿ ಅನೇಕರು ವಾರದ ರಜಾ ದಿನಗಳಲ್ಲಿ ಶುದ್ಧ ಗಾಳಿ ಸಿಗುವ ಕಾಡುಮೇಡು ಅಲೆಯುತ್ತಾರೆ. ಇಲ್ಲೂ ನಮ್ಮ ಆದ್ಯತೆ ಬದಲಾಗುತ್ತಿದೆ. ಹಾಗೆಯೇ ಸೂರ್ಯನ ಬೆಳಕನ್ನೂ ಇಂದು ಹುಡುಕಿಕೊಂಡು ಹೋಗುವಂತಾಗಿದೆ. ಎಳೆಯ ಬಿಸಿಲಿನಲ್ಲಿ ಕೂರುವುದು ಆರೋಗ್ಯಕ್ಕೆ ಒಳ್ಳೆಯದು ಎಂದು ವೈದ್ಯರೂ ಹೇಳುತ್ತಾರೆ. ಆದರೆ ಅಕ್ಕಪಕ್ಕದಲ್ಲಿ ಬೃಹದಾಕಾರದ ಮನೆಗಳು ಎದ್ದಿವೆ. ನಮಗೆ ಎಳೆಯ ಬಿಸಿಲೇ ಸಿಗುತ್ತಿಲ್ಲ ಎಂದು ಅನೇಕರು ಹೇಳುವುದಿದೆ. ಎಳೆಯ ಬಿಸಿಲನ್ನು ಅರಸುತ್ತಾ ಹೋಗುವಂತಾಗಿದೆ. ಇನ್ನು ಅನೇಕರಿಗೆ ಈಗ ಅಬ್ಬರದ ವಾದ್ಯ ಸಂಗೀತ ಇಷ್ಟವಾಗುತ್ತಿಲ್ಲ. ಎಲ್ಲಾದರೂ ಶುದ್ಧವಾದ ಶಾಸ್ತ್ರೀಯ ಸಂಗೀತ ಕೇಳೋಣ, ನೃತ್ಯ ನೋಡೋಣ ಎನಿಸುತ್ತದೆ. ಅದನ್ನು ಅರಸುತ್ತಾ ಹೋಗುವವರೂ ನಮಗೆ ಕಂಡುಬರುತ್ತಾರೆ.

ಇದನ್ನೆಲ್ಲಾ ನೋಡಿದಾಗ ನಾವು ನಮ್ಮ ನಡಿಗೆಯನ್ನು ಹಿಮ್ಮುಖಗೊಳಿಸುತ್ತಿದ್ದೇವೆಯೋ ಎನಿಸುತ್ತದೆ. ಹಳೆಯದು ಸರಿಯಲ್ಲ ಎನ್ನುತ್ತಿದ್ದ ಮನಸ್ಸುಗಳು ಇಂದು ಅದನ್ನೇ ಅರಸಿ ಹೋಗುವಂತಾಗಿದೆ. ಜೀವನ ನಮಗೆ ಇದನ್ನು ಕಲಿಸುತ್ತಿದೆ. ಮೂಲವೇ ಸರಿಯೇನೋ ಎನ್ನುವಂತಾಗುತ್ತಿದೆ.

ಕೂಚ್–ಬೆಹಾರ್ ಕ್ರಿಕೆಟ್ ಪಂದ್ಯಾವಳಿ

ಒಡಿಶಾ ವಿರುದ್ಧ ಕರ್ನಾಟಕಕ್ಕೆ ಭರ್ಜರಿ ಇನ್ನಿಂಗ್ಸ್ ಗೆಲುವು

- **2ನೇ ಇನ್ನಿಂಗ್ಸ್‌ನಲ್ಲಿ 107 ರನ್‌ಗೆ ಆಲೌಟ್ ಆದ ಒಡಿಶಾ**
- **ಕರ್ನಾಟಕಕ್ಕೆ ಇನ್ನಿಂಗ್ಸ್, 54 ರನ್ ಜಯ**



ಒಡಿಶಾ ವಿರುದ್ಧ ಭರ್ಜರಿ ಗೆಲುವು ದಾಖಲಿಸಿದ ಕರ್ನಾಟಕ ತಂಡದ ಆಟಗಾರರು ಪೆವಿಲಿಯನ್‌ನತ್ತ ಆಗಮಿಸುತ್ತಿರುವುದು.

ಸಂಕ್ಷಿಪ್ತ ಸ್ಕೋರ್ ವಿವರ

ಕರ್ನಾಟಕ ಮೊದಲ ಇನ್ನಿಂಗ್ಸ್: 95.5 ಓವರ್‌ನಲ್ಲಿ 308 ರನ್‌ಗೆ ಆಲೌಟ್.

ಗಗನ್‌ರಾವ್ ಎಸ್. 61ರನ್, ಶಿವಂಸಿಂಗ್ 49, ಮಣಿಕಂಠ ಶಿವಾನಂದ್ 49, ಧೀರಜ್‌ಗೌಡ 49, ಸಿದ್ಧಾರ್ಥ ಅಖಿಲ್ 33, ರೋಹಿತ್ ಆರ್.ವರಂಬಲ್ಲಿ 26 ರನ್.

ಒಡಿಶಾ ಪರ ಸಯ್ಯದ್ ತುಫಾಯ್ ಅಹ್ಮದ್ 21 ಓವರ್‌ನಲ್ಲಿ 66ರನ್ ನೀಡಿ 4 ವಿಕೆಟ್

ಒಡಿಶಾ ಮೊದಲ ಇನ್ನಿಂಗ್ಸ್: 62.5 ಓವರ್‌ನಲ್ಲಿ 147 ರನ್‌ಗೆ ಆಲೌಟ್.

ಸಂಬಿತ್ ಕೆ.ಬೆಜಾ 48 ರನ್, ವಿಕೆಟ್ ಕೀಪರ್ ಪಂಕಲ ಮೋಕ್ಷಿತ್ ಅಜೇಯ 29 ರನ್, ಆಯುಶ್ ಸುತಾರ್ 23. ಕರ್ನಾಟಕದ ಬೌಲರ್ ಪ್ರಣವ್ ಅಶ್ವಂತ್ 12 ಓವರ್‌ನಲ್ಲಿ 24 ರನ್ ನೀಡಿ 5 ವಿಕೆಟ್ ಕಬಳಿಸಿದರು. ಧೀರಜ್‌ಗೌಡ 19.5 ಓವರ್‌ನಲ್ಲಿ 40 ರನ್ ನೀಡಿ 3 ವಿಕೆಟ್, ಈಶ ಪುತ್ತಿಗೆ 13 ಓವರ್‌ನಲ್ಲಿ 32 ರನ್ ನೀಡಿ 2 ವಿಕೆಟ್ ತನ್ನದಾಗಿಸಿಕೊಂಡರು.

ಒಡಿಶಾ ಎರಡನೇ ಇನ್ನಿಂಗ್ಸ್: 54 ಓವರ್‌ನಲ್ಲಿ 107 ರನ್‌ಗೆ ಆಲೌಟ್

ಆಯುಷ್ ಸುತಾರ್–21, ಪ್ರಯಾನ್ ಪ್ರಂಥಿಕ್ ಸಮಲ್–26, ಕರ್ನಾಟಕದ ಬೌಲರ್ ಸಿದ್ಧಾರ್ಥ್ ಅಖಿಲ್ 12 ಓವರ್‌ನಲ್ಲಿ 27 ರನ್‌ಗೆ 5 ವಿಕೆಟ್, ಗೌರವ್ ಶಾನ್‌ಭಾಗ್ 11 ಓವರ್‌ನಲ್ಲಿ 19 ರನ್‌ಗೆ 2 ವಿಕೆಟ್.

ಮೈಸೂರು, ನ.30(ಎಂಟಿವೈ)– ಕೂಚ್–ಬೆಹಾರ್ ಕ್ರಿಕೆಟ್ ಪಂದ್ಯಾವಳಿಯ ಕರ್ನಾಟಕ–ಒಡಿಶಾ ನಡುವಿನ ಪಂದ್ಯದಲ್ಲಿ ಕರ್ನಾಟಕ ಒಡಿಶಾ ವಿರುದ್ಧ ಇನ್ನಿಂಗ್ಸ್ ಹಾಗೂ 54 ರನ್‌ಗಳ ಭರ್ಜರಿ ಗೆಲುವು ದಾಖಲಿಸಿದೆ.

ಮೈಸೂರಿನ ಮಾನಸ ಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಗುರುವಾರ ಆರಂಭವಾದ ಪಂದ್ಯ ಇನ್ನೂ ಒಂದು ದಿನ ಬಾಕಿ ಇರುವಂತೆಯೇ ಅಂತ್ಯಗೊಂಡಿದೆ. ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಕರ್ನಾಟಕ ಮೊದಲ ಇನ್ನಿಂಗ್ಸ್‌ನಲ್ಲಿ 95.5 ಓವರ್‌ನಲ್ಲಿ 308 ರನ್ ಗಳಿಸಿ ಆಲ್‌ಔಟ್ ಆಗಿತ್ತು. ಶುಕ್ರವಾರ ಇನ್ನಿಂಗ್ಸ್ ಆರಂಭಿಸಿದ ಒಡಿಶಾ ತಂಡ, ಮೊದಲ ಇನ್ನಿಂಗ್ಸ್‌ನಲ್ಲಿ 62.5 ಓವರ್‌ನಲ್ಲಿ 147 ರನ್‌ಗೆ ಆಲೌಟ್ ಆಗಿ ಫಾಲೋ ಆನ್‌ಗೆ ಒಳಗಾಗಿತ್ತು.

ಅಲ್ಲದೇ ಎರಡನೇ ಇನ್ನಿಂಗ್ಸ್‌ನಲ್ಲಿ ಬ್ಯಾಟಿಂಗ್ ಆರಂಭಿಸಿ ಎರಡನೇ ದಿನದ ಅಂತ್ಯಕ್ಕೆ ವಿಕೆಟ್ ನಷ್ಟವಿಲ್ಲದೇ 33 ರನ್ ಗಳಿಸಿತ್ತು. ಪಂದ್ಯದ 3ನೇ ದಿನವಾದ ಶನಿವಾರ ಇನ್ನಿಂಗ್ಸ್ ಮುಂದುವರೆಸಿದ ಒಡಿಶಾ, ಕರ್ನಾಟಕ ತಂಡದ ಬೌಲರ್‌ಗಳ ಮಾರಕ ದಾಳಿಗೆ ತತ್ತರಿಸಿತು. ಕರ್ನಾಟಕದ ಬೌಲರ್ ಸಿದ್ಧಾರ್ಥ ಅಖಿಲ್ 5 ವಿಕೆಟ್, ಗೌರವ್ ಶಾನುಭಾಗ್ 2 ವಿಕೆಟ್ ಕಬಳಿಸುವ ಮೂಲಕ ಒಡಿಶಾ ಆಟಗಾರರಿಗೆ ಸಿಂಹಸ್ವಪ್ನವಾಗಿ ಕಾಡಿದರು.

ಎರಡನೇ ದಿನದ ಆಟದಲ್ಲಿ ಒಡಿಶಾ 62 ರನ್ ಗಳಿಸುವಷ್ಟರಲ್ಲೇ ಆರಂಭಿಕ ಆಟಗಾರರಿಬ್ಬರನ್ನು ಕಳೆದುಕೊಂಡಿತು. ಬಳಿಕ ಬೌಲರ್‌ಗಳ ಕರಾರುವಾಕ್ ಬೌಲಿಂಗ್ ದಾಳಿ ಎದುರು ಒಡಿಶಾ ತಂಡದ ಆಟಗಾರರು ರನ್ ಗಳಿಸುವಲ್ಲಿ ಪರದಾಡಿದರಲ್ಲದೇ, ಬಾಲಂಗೋಚಿಗಳಂತೆ ವಿಕೆಟ್ ಒಪ್ಪಿಸಿ ಪೆವಿಲಿಯನ್ ಪರೇಡ್ ನಡೆಸಿದರು.

ಮಧ್ಯಾಹ್ನದ ಊಟದ ವಿರಾಮದ ವೇಳೆಗೆ 42 ಓವರ್‌ನಲ್ಲಿ 80 ರನ್‌ಗೆ 7 ವಿಕೆಟ್ ಕಳೆದುಕೊಂಡು ಸಂಕಷ್ಟದ ಪರಿಸ್ಥಿತಿಯಲ್ಲಿದ್ದ ಒಡಿಶಾ, ಪ್ರತಿರೋಧ ತೋರುವ ಪ್ರಯತ್ನವನ್ನೇ ಮಾಡಲಿಲ್ಲ. ಊಟದ ವಿರಾಮದ ಬಳಿಕ 27 ರನ್ ಗಳಿಸುವಷ್ಟರಲ್ಲೇ ಮೂರು ವಿಕೆಟ್ ಕಳೆದುಕೊಂಡು ಹೀನಾಯ ಸೋಲನುಭವಿಸಿತು.

ಒಡಿಶಾ ತಂಡ ಎರಡನೇ ಇನ್ನಿಂಗ್ಸ್‌ನಲ್ಲಿ 54 ಓವರ್‌ಗಳಲ್ಲಿ 107 ರನ್ ಗಳಿಸುವಷ್ಟರಲ್ಲೇ ತನ್ನ ಹೋರಾಟ ಅಂತ್ಯಗೊಳಿಸಿತು. ಆ ಮೂಲಕ ಕರ್ನಾಟಕ ತಂಡ ಇನ್ನಿಂಗ್ಸ್‌ನೊಂದಿಗೆ 54 ರನ್‌ಗಳ ಭರ್ಜರಿ ಗೆಲುವು ದಾಖಲಿಸಿ ಒಂದು ಬೋನಸ್ ಪಾಯಿಂಟ್‌ನೊಂದಿಗೆ ಪಂದ್ಯಾವಳಿಯಲ್ಲಿ ಏಳು ಅಂಕಗಳನ್ನು ತನ್ನದಾಗಿಸಿಕೊಂಡಿತು.

ತಾಂತ್ರಿಕ ಕೌಶಲಾಭಿವೃದ್ಧಿ ತರಬೇತಿಗೆ ಅರ್ಜಿ ಆಹ್ವಾನ

ಮೈಸೂರು,ನ.30–ಎಐಟಿಟಿ, ಎಸ್‌ಸಿಪಿ ಮತ್ತು ಟಿಎಸ್‌ಪಿ ಯೋಜನೆಯಡಿ ಕರ್ನಾಟಕ ರಾಜ್ಯದಲ್ಲಿ ವಾಸವಾಗಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅರ್ಹ ಯುವಕ ಯುವತಿಯರಿಂದ ಉದ್ಯೋಗ ಆಧಾರಿತ ಉಚಿತ ತಾಂತ್ರಿಕ ಕೌಶಲಾಭಿವೃದ್ಧಿ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಟೂಲ್ ಡಿಸೈನ್‌ನಲ್ಲಿ ಪೋಸ್ಟ್ ಡಿಪ್ಲೊಮಾ ತರಬೇತಿಗೆ ಡಿಪ್ಲೊಮಾ/ಬಿಇ (ಮೆಕ್ಯಾನಿಕಲ್ ಸ್ಕೀಮ್) ವಿದ್ಯಾರ್ಹತೆ, ಟೂಲ್ ರೂಮ್ ಮೆಷಿನಿಸ್ಟ್ ತರಬೇತಿಗೆ ಎಸ್‌ಎಸ್‌ಎಲ್‌ಸಿ, ಟೂಲ್ ಮತ್ತು ಡೈ ಮೇಕರ್ ತರಬೇತಿಗೆ ಎಸ್‌ಎಸ್‌ಎಲ್‌ಸಿ, ಐಟಿಐ, ಸಿಎನ್‌ಸಿ ಟೆಕ್ನಾಲಜಿ ಮತ್ತು ಸಿ.ಎಂ.ಎಂ ತರ ಬೇತಿಗೆ ಐಟಿಐ ಅಥವಾ ಡಿಪ್ಲೊಮಾ, ಸಿಎನ್‌ಸಿ ಪ್ರೋ ಗ್ರಾಮರ್–ವಿಎಂಸಿ ಮತ್ತು ಟರ್ನಿಂಗ್ ತರಬೇತಿಗೆ ಡಿಪ್ಲೊಮಾ ಅಥವಾ ಬಿ.ಇ, ಡಿಸೈನರ್ ಮೆಕ್ಯಾನಿಕಲ್ (ಕ್ಯಾಡ್–ಕ್ಯಾಮ್) ತರಬೇತಿಗೆ ಡಿಪ್ಲೊಮಾ ಅಥವಾ ಬಿಇ, ಎಲೆಕ್ಟ್ರಿಷಿಯನ್ ತರಬೇತಿಗೆ ಎಸ್‌ಎಸ್‌ಎಲ್‌ಸಿ, ಐಟಿಐ, ಕನ್ವೆಂಷನಲ್ ಮಷೀನ್ಸ್ ಮತ್ತು ಕ್ವಾಲಿಟಿ ಇನ್‌ಸ್ಪೆಕ್ಟರ್ ತರಬೇತಿಗೆ ಎಸ್‌ಎಸ್‌ಎಲ್‌ಸಿ ಅಥವಾ ಐಟಿಐ, ಸಿಎನ್‌ಸಿ ಮೆಷಿನ್ ಆಪರೇಟರ್ (ಟರ್ನಿಂಗ್/ಮಿಲ್ಲಿಂಗ್) ತರಬೇತಿಗೆ ಎಸ್‌ಎಸ್ ಎಲ್‌ಸಿ ಅಥವಾ ಐಟಿಐ, ಪ್ರೊಡಕ್ಟ್ ಡಿಸೈನ್ ಎಂಜಿನಿಯರ್ (ಕ್ಯಾಡ್–ಕ್ಯಾಮ್) ತರಬೇತಿಗೆ ಡಿಪ್ಲೊಮಾ ಅಥವಾ ಬಿಇ, ಕ್ವಾಲಿಟಿ ಇನ್ಸ್‌ಪೆಕ್ಟರ್ ತರಬೇತಿಗೆ ಐಟಿಐ ಅಥವಾ ಡಿಪ್ಲೊಮಾ ವಿದ್ಯಾರ್ಹತೆ ಹೊಂದಿರುವ 45 ವರ್ಷದೊಳಗಿನ ಅಭ್ಯರ್ಥಿಗಳು ಡಿ.20ರೊಳಗೆ ಅರ್ಜಿ ಸಲ್ಲಿಸಬಹುದು. ಮಾಹಿತಿಗೆ ದೂ.ಸಂ: 9945442654, 9945479700 ಅಥವಾ 9900864686 ಅನ್ನು ಸಂಪರ್ಕಿಸಬಹುದು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ದಿ.ಅನೂಪ್‌ಕುಮಾರ್‌ರ ಕೃತಿ ಬಿಡುಗಡೆ



ಮೈಸೂರಿನ ಅರಸು ಜಿಮ್ಖಾನ ಕ್ಲಬ್‌ನಲ್ಲಿ ಕಾವಾ ಕಲಾವಿದ ದಿ.ಅನೂಪ್ ಕುಮಾರ್ ಅರಸ್ ಅವರು ರಚಿಸಿರುವ 'ಅಧ್ಯಾಯ'– ಜೀವನದ ಒಂದು ಪುಟ ಕೃತಿಯನ್ನು ನಮನ್ ಫೌಂಡೇಷನ್ ಅಧ್ಯಕ್ಷೆ ಶೈಲಜಾ ಪ್ರಸಾದ್ ಬಿಡುಗಡೆ ಮಾಡಿದರು.

ಮೈಸೂರು, ನ.30(ಎಂಟಿವೈ)–ಮೈಸೂರಿನ ಗೋಕುಲಂನಲ್ಲಿರುವ ಅರಸು ಜಿಮ್ಖಾನ ಕ್ಲಬ್‌ನಲ್ಲಿ ಕಾವಾ ಕಲಾವಿದ ದಿ.ಅನೂಪ್ ಕುಮಾರ್ ಅರಸ್ ಅವರು ರಚಿಸಿರುವ 'ಅಧ್ಯಾಯ'–ಜೀವನದ ಒಂದು ಪುಟ ಕೃತಿಯನ್ನು ಬಿಡುಗಡೆ ಸಮಾರಂಭ ನಡೆಯಿತು. ಅರಸು ಜಿಮ್ಖಾನ ಕ್ಲಬ್‌ನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ಅಧ್ಯಾಯ' ಕೃತಿಯನ್ನು ನಮನ್ ಫೌಂಡೇಷನ್ ಅಧ್ಯಕ್ಷೆ ಶೈಲಜಾ ಪ್ರಸಾದ್ ಬಿಡುಗಡೆ ಮಾಡಿ ಮಾತನಾಡಿ, ಕಾವಾ ಕಲಾವಿದರಾಗಿದ್ದ ದಿವಂಗತ ಅನೂಪ್‌ಕುಮಾರ್ ಅರಸ್ ಅವರು ಅಂಗ ವೈಕಲ್ಯತೆಯನ್ನು ಹಿಮ್ಮೆಟ್ಟಿ ಸಾಧನೆ ಮಾಡಿ ದರು. ಧೃತಿಗೆಡದೆ ಆತ್ಮವಿಶ್ವಾಸ ಮತ್ತು ದೃಢತೆಯ ಪ್ರತೀಕವಾಗಿದ್ದಾರೆ. ಕಾವಾದಲ್ಲಿ ಪದವಿ ಪಡೆದಿದ್ದ ಅವರು ಪ್ರಾಚೀನ ಕಾಲದ ಹುಡುಕಾಟದಲ್ಲಿ ತೊಡಗಿ ಸಿಕೊಂಡು ಆಧ್ಯಾತ್ಮದತ್ತ ವಾಲಿದ್ದರು. ಕೋಡಿ ಮಠದ ಶ್ರೀಗಳೊಂದಿಗೆ ಸಂಪರ್ಕದಲ್ಲಿದ್ದರು. ಆತ್ಮಸಂವಾದ ಅವರಿಗೆ ಇಷ್ಟವಾಗಿತ್ತು ಎಂದು ತಿಳಿಸಿದರು. ಕೃತಿ ಕುರಿತು ಸಾಹಿತಿ ಗೋವಿಂದಸ್ವಾಮಿ ಗುಂಡಾ ಪುರ ಮಾತನಾಡಿ, ಅನೂಪ್ ಅವರಲ್ಲಿ ಆತ್ಮೀಯತೆ, ಸರಳತೆ ಇತ್ತು. ಕಷ್ಟ–ಸುಖ–ಚೆಲ್ಲಾಟವನ್ನು ಅನು ಭವಿಸಿ ಈ ಕೃತಿಯನ್ನು ಬರೆದಿದ್ದರು. ಇದೊಂದು ಶೃಂಗಾರ ಕಾವ್ಯದಂತಿದೆ ಎಂದು ಬಣ್ಣಿಸಿದರು.

ಚುಟುಕು ಸಾಹಿತ್ಯ ಪರಿಷತ್ ಸಂಸ್ಥಾಪಕ ಡಾ.ಎಂಜಿಆರ್ ಅರಸು ಮಾತನಾಡಿ, ರಾಜಕೀಯ, ಸಾಮಾಜಿಕ, ಶೈಕ್ಷಣಿಕ–ಹೀಗೆ ಎಲ್ಲಾ ಕ್ಷೇತ್ರಗಳಲ್ಲಿ ಅರಸು ಜನಾಂಗದ ಕೊಡುಗೆ ಅಪಾರ. ಅನೂಪ್ ಕುಮಾರ್ ಅರಸ್ ಅವರ ಈ ಕೃತಿಯ ಬಗ್ಗೆ ತಮ್ಮ ಚುಟುಕು ಸಾಹಿತ್ಯ ಪರಿಷತ್ ವತಿಯಿಂದ ಸಂವಾದ ಕಾರ್ಯಕ್ರಮ ಏರ್ಪಡಿಸುವುದಾಗಿ ಹೇಳಿದರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ವಿಶೇಷಚೇತನರಾಗಿದ್ದ ಅನೂಪ್ ಇತರರಿಗೆ ಮಾದರಿಯಾಗುವಂತೆ ಬದುಕಿದ್ದಾರೆ ಎಂದರು. ಕಾರ್ಯಕ್ರಮದಲ್ಲಿ ಅನೂಪ್‌ಕುಮಾರ್ ಅರಸ್ ಅವರ ತಂದೆ ಬಲದೇವರಾಜ ಅರಸ್, ತಾಯಿ ರತ್ನಪ್ರಭಾ ಅರಸ್, ಪತ್ನಿ ದೀಪ್ತಿ ರಾಜೇಶ್ವರಿ, ಪುತ್ರಿ ನವಳ ನಂದಿತಾ ಉಪಸ್ಥಿತರಿದ್ದರು. ಅನೂಪ್‌ಕುಮಾರ್ ಅರಸ್ ಕುರಿತು ಯಶಸ್ವಿನಿ, ನಮನ್ ಫೌಂಡೇಷನ್ ಕುರಿತು ಮಂಜು ನಾಥ ಹೆಗಡೆ ಪರಿಚಯಿಸಿದರು. ರಮೇಶ್ ತಾಯೂರು ಪ್ರಾರ್ಥಿಸಿದರು. ಸಹನಾ ಸ್ವಾಗತಿಸಿ, ನಿರೂಪಿಸಿದರು. ಅನುಪಮಾ ವಂದಿಸಿದರು. ಅನೂಪ್ ಅವರ ಆಪ್ತ ವಲಯದಲ್ಲಿದ್ದ ಗೀತಾ ರಫೀಕ್, ಎಸ್.ಆರ್. ಮಧುಸೂದನ್, ಭಾರ್ಗವಿ ಸೇರಿದಂತೆ ಇನ್ನಿತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಅನೂಪ್ ಕನಸು ನನಸು ಮಾಡಿದ ಕುಟುಂಬದವರು...

ಮೈಸೂರಿನ ಶ್ರೀ ಚಾಮರಾಜೇಂದ್ರ ದೃಶ್ಯಕಲಾ ಕಾಲೇಜು (ಕಾವಾ) ವಿದ್ಯಾರ್ಥಿ ಯಾಗಿದ್ದ ಅನೂಪ್‌ಕುಮಾರ್ ಅರಸು ಹಾಗೂ ದೀಪ್ತಿ ರಾಜೇಶ್ವರಿ ಅವರು ಪರಸ್ಪರ ಪ್ರೀತಿಸಿ, ವಿವಾಹವಾಗಿ ಬದುಕು ಕಟ್ಟಿಕೊಂಡಿದ್ದರು. ಚಿಕ್ಕಂದಿನಲ್ಲೇ ಪೋಲೀಯೋಪೀಡಿತರಾಗಿದ್ದ ಅನೂಪ್ ವಿಶೇಷಚೇತನರಾಗಿದ್ದರು. ಇದು ಗೊತ್ತಿದ್ದರೂ ದೀಪ್ತಿ ಅವರನ್ನು ವಿವಾಹವಾಗಿ ಆದರ್ಶಯ ಜೀವನ ಸಾಗಿಸುತ್ತಿದ್ದರು. ಅನೂಪ್ ಆಧ್ಯಾತ್ಮಿಕ ಕೇಂದ್ರ ವನ್ನು ನಡೆಸುತ್ತಿದ್ದರು. ತಾವು ಕಾವಾದಲ್ಲಿ ಇದ್ದಾಗ ನಡೆದ ಘಟನೆಗಳನ್ನು ದಾಖಲು ಮಾಡಿ, ಅಧ್ಯಾಯ–ಜೀವನದ ಒಂದು ಪುಟ ಕೃತಿ ರಚಿಸಿದ್ದರು. ಆದರೆ ಅದು ಬಿಡುಗಡೆಗೆ ಮುನ್ನವೇ ಕೋವಿಡ್ ಸಂದರ್ಭದಲ್ಲಿ ನಿಧನರಾದರು. ಹೀಗಾಗಿ ಅವರ ತಂದೆ–ತಾಯಿ, ಪತ್ನಿ–ಪುತ್ರಿ ಹಾಗೂ ಸ್ನೇಹಿತ ವಲಯ ಸೇರಿ, ಕೃತಿಯನ್ನು ಪ್ರಕಟಿಸಿ, ಬಿಡುಗಡೆ ಮಾಡುವ ಮೂಲಕ ಅನೂಪ್ ಕನಸನ್ನು ನನಸು ಮಾಡಿದರು.

ಇಂದು ವಿಶ್ವ ಏಡ್ಸ್ ದಿನ–2024: ಜಾಥಾ

ಮೈಸೂರು,ನ.30– ಮೈಸೂರು ಜಿಲ್ಲಾಡಳಿತ, ಮೈಸೂರು ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ, ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಸರ್ಕಾರಿ ಶುಷ್ರೂಷ ಮಹಾವಿದ್ಯಾಲಯ, ಎಂ.ಎಂ.ಸಿ ಮತ್ತು ಆರ್.ಐ ಮೈಸೂರು, ಲಯನ್ಸ್ ಬ್ಲಡ್ ಸೆಂಟರ್ ಜೀವಧಾರ, ಮೈಸೂರು, ಆಶಾಕಿರಣ ಆನಂದ ಜ್ಯೋತಿ ಪಾಸಿಟಿವ್ ನೆಟ್‌ವರ್ಕ್, ಆಶೋದಯ ಸಮಿತಿ, ಎಸ್.ವಿ.ವೈಎಂ ಗಾರ್ಡ್, ಸಿ.ಆರ್.ಡಿ.ಎಸ್ ಹಾಗೂ ಇತರೆ ಸ್ವಯಂ ಸೇವಾ ಸಂಸ್ಥೆಗಳ ಸಹಕಾರದೊಂದಿಗೆ ವಿಶ್ವ ಏಡ್ಸ್ ದಿನ–2024 ಅಂಗವಾಗಿ ಡಿ.1 ರಂದು ಬೆಳಗ್ಗೆ 9 ಗಂಟೆಗೆ ಶ್ರೀ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ಜಾಥಾ ಉದ್ಘಾಟನಾ ಕಾರ್ಯಕ್ರಮವನ್ನು ಹಾಗೂ ಬೆಳಗ್ಗೆ 10:30 ಗಂಟೆಗೆ ನಜರ್‌ಬಾದ್‌ನ ಎನ್.ಪಿ.ಸಿ ಆಸ್ಪತ್ರೆ ಅವರಣದ ವೈದ್ಯರ ಭವನದಲ್ಲಿ ಸಭಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದಿನೇಶ್ ಬಿ.ಜಿ ಜಾಥಾ ಕಾರ್ಯಕ್ರಮ ಉದ್ಘಾಟನೆ ಮಾಡಲಿದ್ದು, ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ ಸಭಾ ಕಾರ್ಯಕ್ರಮ ಉದ್ಘಾಟಿಸುವರು. ಜಿಪಂ ಸಿಇಓ ಗಾಯತ್ರಿ ಕೆ.ಎಂ ಅಧ್ಯಕ್ಷತೆ ವಹಿಸಲಿದ್ದು, ಪಾಲಿಕೆ ಆಯುಕ್ತ ಆಶಾದ್ ಉರ್‌ರೆಹಮಾನ್ ಶರೀಫ್, ಡಾ.ಕೆ.ಎಚ್.ಪ್ರಸಾದ್, ಡಾ.ಕುಮಾರ ಸ್ವಾಮಿ, ಕೆ.ಆರ್.ದಾಕ್ಷಾಯಿಣಿ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ಮೈಸೂರಲ್ಲಿ ನಾಲ್ಕನೇ ನಕ್ಷ ಹೋಂಡಾ ಶೋರೂಂ ಲೋಕಾರ್ಪಣೆ



ಉದ್ಯಮಿ ಎಂ.ಡಿ.ಹರೀಶ್‌ಕುಮಾರ್ ಹೆಗ್ಡೆ ಅವರ ಮಾಲೀಕತ್ವದಲ್ಲಿ ಮೈಸೂರಿನ ವಿಶ್ವೇಶ್ವರನಗರದ ಮಾನಂದವಾಡಿ ರಸ್ತೆಯಲ್ಲಿ ತೆರೆಯಲಾಗಿರುವ ಮೈಸೂರು ಜಿಲ್ಲೆಯ ನಾಲ್ಕನೇ ನಕ್ಷಾ ಹೋಂಡಾ ಶೋರೂಂ ಅನ್ನು ಬಿಜೆಪಿ ಶಾಸಕ ಟಿ.ಎಸ್.ಶ್ರೀವತ್ಸ ಲೋಕಾರ್ಪಣೆಗೊಳಿಸಿದರು. ಈ ವೇಳೆ ಹೆಗ್ಡೆ ಗ್ರೂಪ್ಸ್‌ನ ಎಂ.ಡಿ.ಹರೀಶ್‌ಕುಮಾರ್ ಹೆಗ್ಡೆ, ಪಾಲುದಾರರಾದ ಎಂ.ಎಚ್. ಅಭಿಷೇಕ್ ಹೆಗ್ಡೆ, ಅಭಿಜಿತ್ ಹೆಗ್ಡೆ, ಹಿರಿಯ ವಕೀಲರಾದ ಎಚ್.ಎನ್.ವೆಂಕಟೇಶ್, ಹೋಂಡಾ ಸಂಸ್ಥೆಯ ದಕ್ಷಿಣ ಕರ್ನಾಟಕದ ಮುಖ್ಯಸ್ಥರಾದ ಅನಂತು, ಬಿಜೆಪಿ ಮುಖಂಡ ಬಿ.ಪಿ.ಮಂಜುನಾಥ್ ಸೇರಿ ಹಲವರು ಉಪಸ್ಥಿತರಿದ್ದರು.

ತರಬೇತಿ

ಮೈಸೂರು, ನ.30(ಎಂಕೆ)–ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರ ಬೆಂಗಳೂರು, ಜಿಲ್ಲಾ ಕೈಗಾರಿಕಾ ಕೇಂದ್ರ, ಮೈಸೂರು ಸಂಯುಕ್ತಾಶ್ರಯದಲ್ಲಿ ರಾಜ್ಯದ ರಫ್ತು ವಲಯವನ್ನು ವಿಸ್ತರಿಸಿ, ರಫ್ತು ಪ್ರಮಾಣವನ್ನು ಹೆಚ್ಚಿಸುವ ಸಲುವಾಗಿ ಡಿ.2ರಿಂದ 7ವರೆಗೆ ಮೈಸೂರಿನ ಹೋಟೆಲ್ ಪ್ರೆಸಿಡೆಂಟ್ ನಲ್ಲಿ ಕೈಗಾರಿಕೋದ್ಯಮಿಗಳು ಹಾಗೂ ವಾಣಿಜ್ಯೋದ್ಯಮಿಗಳಿಗೆ 6 ದಿನಗಳ ರಫ್ತು ನಿರ್ವಹಣಾ ತರಬೇತಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಇಂದು ಪುಸ್ತಕ ಬಿಡುಗಡೆ

ಮೈಸೂರು, ನ,30– ಲೇಖಕ ಕೆ.ರಘುಶೆಟ್ಟಿ ರಚಿತ 'ಪುರಾಣಗಳು ಪಾತ್ರಗಳು ಮತ್ತು ವರ್ತಮಾನದ ಚಿತ್ರಗಳು' ಪುಸ್ತಕ ಡಿ.1ರಂದು ಸಂಜೆ 5 ಗಂಟೆಗೆ ಸರಸ್ವತಿಪುರಂ ರೋಟರಿ (ಪಶ್ಚಿಮ) ಸಭಾಂಗಣದಲ್ಲಿ ಬಿಡುಗಡೆಗೊಳ್ಳಲಿದೆ.

ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘ ಮತ್ತು ಪಿಂಚಣಿದಾರರ ಸಂಘದ ವತಿಯಿಂದ ಏರ್ಪಡಿಸಿರುವ ವಾರ್ಷಿಕೋತ್ಸವ ಹಾಗೂ 70 ವರ್ಷ ತುಂಬಿದ ಪಿಂಚಣಿದಾರರರಿಗೆ ಸನ್ಮಾನಿಸುವ ಸಮಾರಂಭದಲ್ಲಿ ಬಿಡುಗಡೆಗೊಳ್ಳಲಿದೆ. ಕಾರ್ಯಕ್ರಮದಲ್ಲಿ ಲೇಖಕ ಡಾ.ವಿ.ರಂಗನಾಥ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ಎಸ್‌ಬಿಐ ನಿವೃತ್ತ ಉಪಪ್ರಧಾನ ವ್ಯವಸ್ಥಾಪಕ ಕೆ.ರಘುಶೆಟ್ಟಿ, ಎಸ್‌ಬಿಐ ಆಡಳಿತ ಕಚೇರಿ(ಮೈಸೂರು) ಮಾನವ ಸಂಪನ್ಮೂಲ ವಿಭಾಗದ ಮುಖ್ಯ ವ್ಯವಸ್ಥಾಪಕ ಪ್ರವೀಣ್ ವಿ.ಗೊರೋಬಾಲ್ ಬಹುಮಾನ ವಿತರಣೆ ಮಾಡಲಿದ್ದಾರೆ. ಪಿಂಚಣಿದಾರರ ಸಂಘದ ಅಧ್ಯಕ್ಷ ಎಸ್.ಆನಂದಮೂರ್ತಿ ಸೇರಿದಂತೆ ಇತರೆ ಪದಾಧಿಕಾರಿಗಳು ಉಪಸ್ಥಿತರಿರುವವರು.

Sl. No	Vacant Position	Qualification	Experience
1	Purchase Manager	BE / MBA	8 Years in Relevant
2	Accounts & Finance Executive	CA inter/ICWA	5 Years in Relevant
3	Human Resource Assistant	MSW/ MBA Human Resource	2 Year in Relevant
4	Sales Coordinator	B. Com / M.Com	2 Years in Relevant
5	Planning Assistant	B. Com / BBM	2 Years in Relevant
6	Electrical Assistant	Diploma / ITI in Electrical	2 Years in Relevant
7	Mechanical Assistant	Diploma / ITI in Mechanical	2 Years in Relevant
8	Quality Controller	Diploma in Mechanical	2 Years in Relevant
9	Pasting Operator	Diploma Printing Technology	Equivalent Experience
10	Security Guards /Supervisor	SSLC / PUC	Equivalent Experience
11	Driver	PUC	Heavy vehicle license

ಕರ್ನಾಟಕ ಸರ್ಕಾರ
ಅರಣ್ಯ ಇಲಾಖೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ಮಂಡ್ಯ ಉಪವಿಭಾಗ, ಮಂಡ್ಯ
ಸುಭಾಷ್ ನಗರ, 6ನೇ ಅಡ್ಡರಸ್ತೆ, ಮಂಡ್ಯ–571401, 08232–220630
Fax:08232-224921 acfmandyaoffice@gmail.com/dcfmandya@gmail.com
ಸಂ:ಸಅಸಂ/ಎಂಡಿವೈ/ಟೆಂಡರ್/2024–25 ದಿ:29.11.2024

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ದ್ವಿಲಕೋಟೆ)–2ನೇ ಕರೆ

ಈ ಮೂಲಕ ಸಾರ್ವಜನಿಕರಿಗೆ ಮತ್ತು 2024–25ನೇ ಸಾಲಿನಲ್ಲಿ ನೊಂದಾವಣೆಯಾಗಿರುವ ಅರಣ್ಯ ಗುತ್ತಿಗೆದಾರರಿಗೆ ತಿಳಿಯಪಡಿಸುವುದೇನೆಂದರೆ 2024–25ನೇ ಸಾಲಿನಲ್ಲಿ ಈ ವಿಭಾಗದ ವಲಯಗಳಲ್ಲಿ ಮುಂಗಡ ಕಾಮಗಾರಿ ಮತ್ತು 812 ಅಳತೆಯ ಸಸಿಗಳನ್ನು ಬೆಳೆಸುವ ಕಾಮಗಾರಿಗಳನ್ನು ಕೈಗೊಳ್ಳಲು ಪಾರದರ್ಶಕ ನಿಯಮಗಳನುಸಾರ ಕರ್ನಾಟಕ ಸರ್ಕಾರದ ವೆಬ್ ಸೈಟ್ http://kppp.karnataka.gov.in ರಲ್ಲಿ ಈ ಕೆಳಗಿನ ಅನುಸೂಚಿಯಲ್ಲಿರುವ ಕಾಮಗಾರಿಗಳಿಗೆ ಇ–ಟೆಂಡರ್ ಅನ್ನು ಕರೆಯಲಾಗಿದೆ. ಹಾಗೆಯೇ ಟೆಂಡರ್‌ಗಳಲ್ಲಿ ಭಾಗವಹಿಸುವ ಮುನ್ನ ಇದೇ ಪ್ರಕಟಣೆಯಲ್ಲಿರುವ ಷರತ್ತುಗಳು ಅನ್ವಯವಾಗುತ್ತವೆ. ಟೆಂಡರ್ ವೇಳಾಪಟ್ಟಿ ಹಾಗೂ ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಮಂಡ್ಯ ಉಪ ವಿಭಾಗ, ಮಂಡ್ಯ

ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/476/2024–25



ದೇವರಾಜ ಮಾರ್ಕೆಟ್ ಯುವ ಬ್ರಿಗೇಡ್ ವತಿಯಿಂದ ನಡೆದಂತ ಹದಿನಾರನೇ ವರ್ಷದ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಮಕ್ಕಳಿಗೆ ಬ್ಯಾಗ್ ವಿತರಣೆ ಹಾಗೂ ವಿಕಲಚೇತನರಿಗೆ ಸೈಕಲ್ ವಿತರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಸಂದರ್ಭದಲ್ಲಿ ಕನ್ನಡ ಚಿತ್ರರಂಗದ ಹಿರಿಯ ಕಲಾವಿದರಾದಂತ ಶೋಭರಾಜ್ ರವರು ಯುವ ಉದ್ಯಮಿ ಪ್ರದೀಪ್ ಸಿಂಗ್, ಗಿರೀಶ್, ರಾಮರಾಜ, ಸುರೇಶ್ ಕುಮಾರ್, ನಾಗೇಶ್, ಮಾದೇವಣ್ಣ, ಝಾಕಿರ್ ಹಾಗೂ ಅಧ್ಯಕ್ಷರಾದಂತ ಬಿ. ಸಂದೀಪ್ ಮತ್ತು ಸ್ನೇಹಿತರು ಉಪಸ್ಥಿತರಿದ್ದರು.

—Promotional Feature

60 ಎಕರೆ ಪ್ರದೇಶದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸಲು ಸಿದ್ಧತೆ

ವೇದಿಕೆ ಸಮಿತಿ ಅಧ್ಯಕ್ಷರಾದ ಶಾಸಕ ನರೇಂದ್ರಸ್ವಾಮಿ ಸ್ಥಳ ಪರಿಶೀಲನೆ

ಮಂಡ್ಯ,ನ.30– 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು ಡಿಸೆಂಬರ್ 20, 21, 22ರಂದು ಮೂರು ದಿನಗಳ ಕಾಲ ಜಿಲ್ಲೆಯಲ್ಲಿ ನಡೆಯಲಿದ್ದು, ಸಮ್ಮೇಳನವನ್ನು ಸ್ಯಾಂಜೋ ಆಸ್ಪತ್ರೆ ಹಿಂಭಾಗದಲ್ಲಿರುವ 60 ಎಕರೆ ಪ್ರದೇಶದಲ್ಲಿ ನಡೆಸಲು ಸಜ್ಜುಗೊಳಿಸಲಾಗುತ್ತಿದೆ ಎಂದು ಶಾಸಕ ಹಾಗೂ ವೇದಿಕೆ ಸಮಿತಿಯ ಅಧ್ಯಕ್ಷ ಪಿ.ಎಂ. ನರೇಂದ್ರಸ್ವಾಮಿ ತಿಳಿಸಿದರು.

ನಗರದ ಹೊರವಲಯದ ಸ್ಯಾಂಜೊ ಆಸ್ಪತ್ರೆಯ ಹಿಂಭಾಗ ಕನ್ನಡ ಸಾಹಿತ್ಯ ಸಮ್ಮೇಳನದ ವೇದಿಕೆ ನಿರ್ಮಾಣದ ಸ್ಥಳ ಪರಿಶೀಲನೆ ನಡೆಸಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ನಗರದ ಅಮರಾವತಿ ಹೋಟೆಲ್ ಹಾಗೂ ಸ್ಯಾಂಜೋ ಆಸ್ಪತ್ರೆಹಿಂಭಾಗ ಕನ್ನಡ ಸಾಹಿತ್ಯ ಸಮ್ಮೇಳನವು ಸುಮಾರು 60 ಎಕರೆ ಪ್ರದೇಶದಲ್ಲಿ ನಡೆಯಲಿದ್ದು, ಮುಖ್ಯ ಪ್ರವೇಶ ದ್ವಾರದಿಂದ ವೇದಿಕೆಯವರೆಗೂ ಸಿದ್ಧತೆ ನಡೆದಿದೆ ಮುಖ್ಯದ್ವಾರದ ಬಳಿ ನೋಂದಣಿ ಕೌಂಟರ್ ಅನ್ನು ತೆರೆಯಲಾಗುವುದು ಎಂದರು.

ಸರ್ಕಾರ, ಜಿಲ್ಲಾಡಳಿತ ಹಾಗೂ ಜಿಲ್ಲೆಯಲ್ಲಿ ಎಲ್ಲಾ ಜನರೊಡಗೂಡಿ ಕನ್ನಡ ಸಾಹಿತ್ಯ ಸಮ್ಮೇಳನದ ಮೆರುಗನ್ನು ಹೆಚ್ಚಿಸುವ ಸಲುವಾಗಿ ಯಾವುದೇ ಉದಾಸೀನ ತೋರದೆ ಜವಾಬ್ದಾರಿಯಿಂದ ಎಲ್ಲರೂ ಒಗ್ಗೂಡಿ ಕನ್ನಡದ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸಲಾಗುವುದು ಎಂದರು.

ಮಳಿಗೆ: ಮುಖ್ಯ ವೇದಿಕೆಯ ಬಲಭಾಗ ಕನ್ನಡ ಆಸಕ್ತರಿಗಾಗಿ ಪುಸ್ತಕ ಮಳಿಗೆಯನ್ನು ತೆರೆಯಲಾಗುವುದು. ಎಡಭಾಗಕ್ಕೆ ಇಲಾಖೆಯ ವಸ್ತುಪ್ರದರ್ಶನ ಮಳಿಗೆಗಳನ್ನು ಇಡಲಾಗುವುದು. ಒಟ್ಟು 1000ಕ್ಕೂ ಹೆಚ್ಚು ಮಳಿಗೆಗಳಿಗೆ ಅವಕಾಶ ನೀಡಲಾಗಿದ್ದು, 450 ವಾಣಿಜ್ಯ ಮಳಿಗೆ ತೆರೆಯಲು ಅವಕಾಶ ನೀಡಲಾಗಿದೆ ಎಂದರು.

ಊಟದ ವ್ಯವಸ್ಥೆ: ಸಮ್ಮೇಳನಕ್ಕೆ ಆಗಮಿಸುವ ಪ್ರತಿಯೊಬ್ಬರಿಗೂ ಅಚ್ಚುಕಟ್ಟಾದ ಊಟದ ವ್ಯವಸ್ಥೆ ಕಲ್ಪಿಸಲಾಗಿದ್ದು, ಊಟದ ವ್ಯವಸ್ಥೆಯನ್ನು ವೇದಿಕೆಯ ಬಲಭಾಗದಲ್ಲಿ ಮಾಡಲಾಗುವುದು. ಡೈನಿಂಗ್ ಮತ್ತು ಅಡುಗೆಗೆ ಸುಮಾರು 2,64,000 ಚದರ ಅಡಿ ವ್ಯಾಪ್ತಿಯ ಪ್ರದೇಶವನ್ನು ಮೀಸಲಿಡಲಾಗಿದೆ. ಕುಡಿಯುವ ನೀರಿಗೆ ಈಗಾಗಲೇ ಪೈಪ್ಲೈನ್ ವ್ಯವಸ್ಥೆ ಅಳವಡಿಸಲು ಸಿದ್ಧತೆ ನಡೆಯುತ್ತಿದ್ದು, ಯಾವುದೇ ತೊಂದರೆಯಾಗುವುದಿಲ್ಲ. ಡಿಸೆಂಬರ್ 2 ರಂದು ಕನ್ನಡ ಸಾಹಿತ್ಯ ಸಮ್ಮೇಳನದ ಸಂಪೂರ್ಣ ಚಿತ್ರಣವನ್ನು ಅಧಿಕೃತವಾಗಿ ಪ್ರಕಟ ಮಾಡಲಾಗುವುದು ಎಂದು ತಿಳಿಸಿದರು.

ಪಾರ್ಕಿಂಗ್ ವ್ಯವಸ್ಥೆ: ಸಮ್ಮೇಳನಕ್ಕೆ ಆಗಮಿಸುವ ಸಾರ್ವಜನಿಕ ವಾಹನ ನಿಲುಗಡೆಗೆ ಪ್ರತ್ಯೇಕವಾಗಿ ಸುಮಾರು 20 ಎಕರೆ ಪ್ರದೇಶವನ್ನು ಮೀಸಲಿಡಲಾಗಿದೆ ಸಮ್ಮೇಳನಕ್ಕೆ ಆಗಮಿಸುವ ಗಣ್ಯರಿಗೆ ವೇದಿಕೆಯ ಬಲಭಾಗ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ ಎಂದರು.

ಶೌಚಾಲಯ ವ್ಯವಸ್ಥೆ: ಸಮ್ಮೇಳನದಲ್ಲಿ ಭಾಗವಹಿಸುವವರಿಗೆ ಸುಮಾರು 9 ಕಡೆ ಪುರುಷ ಹಾಗೂ ಮಹಿಳೆಯರಿಗೆ ಪ್ರತ್ಯೇಕವಾದ ಶೌಚಾಲಯದ ವ್ಯವಸ್ಥೆ ಮಾಡಲಾಗುವುದು. ಜನರಿಗೆ ಎಲ್ಲಾ ಮಾಹಿತಿ ಒದಗಿಸಲು ಸೂಚನಾ ಫಲಕಗಳನ್ನು ಅಳವಡಿಸಲಾಗುವುದು. ಸಮ್ಮೇಳನದ ಯಶಸ್ವಿಗೆ ಎಲ್ಲರ ಸಹಕಾರ ಮುಖ್ಯವಾಗಿದ್ದು, ಯಾವುದೇ ಕೊರತೆ ಉಂಟಾಗದ ರೀತಿಯಲ್ಲಿ ಸಕಲ ಸಿದ್ಧತೆಯ ಮೂಲಕ ಕನ್ನಡ ಹಬ್ಬವನ್ನು ನೆರವೇರಿಸೋಣ ಎಂದು ಹೇಳಿದರು. ಗೋಷ್ಠಿಯಲ್ಲಿ ವಾರ್ತಾಧಿಕಾರಿ ಎಚ್.ಎಸ್.ನಿರ್ಮಲಾ ಇದ್ದರು.



ಶಾಸಕ ಹಾಗೂ ವೇದಿಕೆ ಸಮಿತಿಯ ಅಧ್ಯಕ್ಷರಾದ ಪಿ.ಎಂ.ನರೇಂದ್ರಸ್ವಾಮಿ ಶನಿವಾರ ಸ್ಥಳ ಪರಿಶೀಲನೆ ನಡೆಸಿ ಸಲಹೆ ಸೂಚನೆಗಳನ್ನು ನೀಡಿದರು.

ಸಮ್ಮೇಳನದ ವೇದಿಕೆ 600 ಅಡಿ ಉದ್ದ ಹಾಗೂ 300 ಅಡಿ ಅಗಲದಲ್ಲಿ ನಿರ್ಮಾಣಗೊಳ್ಳುತ್ತಿದೆ. ಸುಮಾರು 35,000 ರಿಂದ 40,000 ಜನ ಸಭಿಕರು ಕೂರಲು ವ್ಯವಸ್ಥೆ ಮಾಡಲಾಗಿದೆ. ಅದಲ್ಲದೆ 2 ಸಮಾನಂತರ ವೇದಿಕೆಯನ್ನು 11,000 ಚದರ ಅಡಿ ಸ್ಥಳದಲ್ಲಿ ನಿರ್ಮಿಸಲಾಗುವುದು– ನರೇಂದ್ರಸ್ವಾಮಿ

ಕೆರೆ ಕಟ್ಟೆಗಳು ರೈತರ ಜೀವನಾಡಿ



ಪ್ರಗತಿ ಪರಿಶೀಲನೆ ಸಭೆಯಲ್ಲಿ ಮಾತನಾಡುತ್ತಿರುವ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ವಿ.ಅನ್ಬುಕುಮಾರ್

ಮಂಡ್ಯ, ನ.30– ಕೆರೆ ಕಟ್ಟೆಗಳು ರೈತರ ಜೀವನಾಡಿ, ಕೆರೆಗಳು ತುಂಬಿದರೆ ರೈತರು ತಮ್ಮ ಕೃಷಿ ಪದ್ಧತಿಗಳನ್ನು ನಡೆಸಲು ಅನುಕೂಲವಾಗುತ್ತದೆ ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ವಿ.ಅನ್ಬುಕುಮಾರ್ ತಿಳಿಸಿದರು.

ಶನಿವಾರ ಜಿಲ್ಲಾ ಪಂಚಾಯತ್ ಕಾವೇರಿ ಸಭಾಂಗಣದಲ್ಲಿ ಪ್ರಗತಿ ಪರಿಶೀಲನೆ ನಡೆಸಿ ಮಾತನಾಡಿದ ಅವರು, ಕೆರೆಗಳ ಸುತ್ತ ಒತ್ತುವರಿ ತೆರವುಗೊಳಿಸಿದ ನಂತರ ಅದರ ಸುತ್ತ ಗಿಡಗಳನ್ನು ನೆಡಿ, ಪಕ್ಷಿಗಳು ಗೂಡು ಕಟ್ಟಿ ಆಹಾರ ಪಡೆಯುವ ಗಿಡಗಳನ್ನು ನೆಟ್ಟಿ ಬಳಸಿ ಎಂದ ಅವರು, ಉತ್ತಮ ಮಳೆಯ ಹಿನ್ನೆಲೆ ಬಿತ್ತನೆ ಕೂಡ ಚೆನ್ನಾಗಿದೆ. ಬಿತ್ತನೆ ಬೀಜ ಹಾಗೂ ರಸಗೊಬ್ಬರಗಳ ಕೊರತೆಯಾಗದಂತೆ ನೋಡಿಕೊಳ್ಳಿ. ಜಿಲ್ಲೆಯಲ್ಲಿ ಕೃಷಿ ಸರ್ವೆ ನಡೆಸಲು ಯಾವುದೇ ತೊಂದರೆಗಳಿಲ್ಲ. ಬೆಳೆ ಸರ್ವೆ ಶೇ 100 ರಷ್ಟು ಆಗಬೇಕು ಎಂದರು.

ಬಹು ಗ್ರಾಮ ಕುಡಿಯುವ ನೀರಿನ ಯೋಜನೆ ಯಾವುದೇ ತೊಂದರೆಯಾಗದಂತೆ ಅನುಷ್ಠಾನಗೊಳ್ಳಬೇಕು. ಈ ಯೋಜನೆಯ ಕಾಮಗಾರಿಯ ನಿರಂತರ ಪರಿಶೀಲನೆಗೆ ಅಧಿಕಾರಿಗಳನ್ನು ನಿಯೋಜಿಸಿ. ಕುಡಿಯುವ ನೀರು ಎಲ್ಲೂ ಕಲುಷಿತವಾಗದಂತೆ ನೋಡಿಕೊಳ್ಳಬೇಕು. ಎಸ್ಎಸ್ಎಲ್ಸಿ ಪರೀಕ್ಷೆಯ ಫಲಿತಾಂಶವನ್ನು ಉತ್ತಮ ಪಡಿಸಲು ಯೋಜನೆ ರೂಪಿಸಿ. ವಿದ್ಯಾರ್ಥಿಗಳ ಬಗ್ಗೆ ಹೆಚ್ಚಿನ ನಿಗಾ ವಹಿಸಿ ಆತ್ಮವಿಶ್ವಾಸದೊಂದಿಗೆ ಪರೀಕ್ಷೆ ಎದುರಿಸಲು ಸಜ್ಜುಗೊಳಿಸಬೇಕೆಂದು ಹೇಳಿದರು.

ವಸತಿ ಯೋಜನೆಗೆ ಸಂಬಂಧಿಸಿದಂತೆ ರಾಜೀವ್ ಗಂಧಿ ವಸತಿ ಯೋಜನೆಯಡಿ ಅನುದಾನ ಲಭ್ಯವಿದ್ದು, ಪ್ರಗತಿಯಾಗಬೇಕಿದೆ. ಕಡಿಮೆ ಸಾಧನೆ ಮಾಡಿರುವ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಪಟ್ಟಿ ಮಾಡಿಕೊಂಡು ಪ್ರತಿ ದಿನ ಆನ್‌ಲೈನ್ ಸಭೆ ನಡೆಸಿ ನಿಗದಿತ ಗುರಿ ಸಾಧಿಸುವಂತೆ ಮಾಡಬೇಕು ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಡಾ.ಕುಮಾರ ಮಾತನಾಡಿ, ಲ್ಯಾಂಡ್, ಬೀಟ್, ಆಧಾರ್ ಸೀಡಿಂಗ್, ಬಗರ್‌ಹುಕಂ, ಗೃಹಲಕ್ಷ್ಮಿ , ಜಿಲ್ಲಾಧಿಕಾರಿ, ಉಪವಿಭಾಗಾಧಿಕಾರಿ ಹಾಗೂ ತಹಶೀಲ್ದಾರ್ ಕೋರ್ಟ್‌ಗಳಲ್ಲಿ ಬಾಕಿ ಇರುವ ಪ್ರಕರಣಗಳು ಹಾಗೂ ಇತರೆ ಯೋಜನೆಯ ಸಾಧನೆಗಳ ಬಗ್ಗೆ ಮಾಹಿತಿ ನೀಡಿದರು.

ಜಿಪಂ ಸಿಇಒ ಶೇಖ್ ತನ್ವೀರ್ ಆಸಿಫ್ ನರೇಗಾ, ಸ್ವಚ್ಛ ಭಾರತ್ ಮಿಷನ್, ಬಹುಗ್ರಾಮ ಕುಡಿಯುವ ನೀರು ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಸಭೆಗೆ ಮಾಹಿತಿ ನೀಡಿದರು.

ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಎಡಿಸಿ ಡಾ.ಹೆಚ್.ಎಲ್.ನಾಗರಾಜು ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ನಾಳೆ ಅರಿವು ಮೂಡಿಸುವ ಕಾರ್ಯಕ್ರಮ

ಮಂಡ್ಯ,ನ.30– ಜಿಲ್ಲೆಯಲ್ಲಿ 2024–25ನೇ ಸಾಲಿನಲ್ಲಿ ಪ್ರಧಾನಮಂತ್ರಿಗಳ ಉದ್ಯೋಗ ಸೃಜನ ಯೋಜನೆಯಡಿ ಪಿ.ಎಮ್.ಇ.ಜಿ.ಪಿ ಬ್ಯಾಂಕುಗಳ ಮುಖಾಂತರ ಸಾಲ ಪಡೆದ ಅತಿ ಸಣ್ಣ ಕೈಗಾರಿಕೆ/ಸೇವಾ ಉದ್ದಿಮೆಯನ್ನು ಸ್ಥಾಪಿಸುವ ಫಲಾನುಭವಿಗಳಿಗೆ ಒಂದು ದಿನದ ಅರಿವು ಮೂಡಿಸುವ ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಡಾ.ಕುಮಾರ ಅವರ ಅಧ್ಯಕ್ಷತೆಯಲ್ಲಿ ಡಿಸೆಂಬರ್ 2 ರಂದು ಬೆಳಿಗ್ಗೆ 10.30 ಗಂಟೆಗೆ ನಗರದ ಗಾಂಧಿ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಮಂಡ್ಯ ಜಿಲ್ಲಾ ಖಾದಿ ಗ್ರಾಮೋದ್ಯೋಗ ಅಧಿಕಾರಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆ.ಆರ್.ಪೇಟೆ ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾಗಿ ಆನಂದಕುಮಾರ್ ಆಯ್ಕೆ



ಕೆಆರ್.ಪೇಟೆ,ನ.30– ತಾಲೂಕು ಸರ್ಕಾರಿ ನೌಕರರ ಸಂಘದ ನೂತನ ಅಧ್ಯಕ್ಷರಾಗಿ ಶಿಕ್ಷಕ ಎಸ್.ಆರ್.ಆನಂದ್‌ಕುಮಾರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಖಜಾಂಚಿಯಾಗಿ ತೋಟಗಾರಿಕೆ ಅಧಿಕಾರಿ ಡಾ.ಆರ್.ಜಯರಾಮ್, ರಾಜ್ಯ ಪರಿಷತ್ ಸದಸ್ಯರಾಗಿ ಧರ್ಮೇಂದ್ರ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಅಧ್ಯಕ್ಷ ಸ್ಥಾನಕ್ಕೆ ಶಿಕ್ಷಕ ಎಸ್.ಆರ್. ಆನಂದ್‌ಕುಮಾರ್, ಖಜಾಂಚಿ ಸ್ಥಾನಕ್ಕೆ ತೋಟಗಾರಿಕೆ ಇಲಾಖೆ ಅಧಿಕಾರಿ ಡಾ.ಆರ್. ಜಯರಾಮ್ ಹಾಗೂ ರಾಜ್ಯ ಪರಿಷತ್ ಸದಸ್ಯ ಸ್ಥಾನಕ್ಕೆ ಅಕ್ಕಿಹೆಬ್ಬಾಳು ಪ್ರಾಥಮಿಕ ಆರೋಗ್ಯ ನಿರೀಕ್ಷಕ ಧರ್ಮೇಂದ್ರ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಘೋಷಿಸಿದರು.

ಕಬ್ಬಿನ ಯಾಂತ್ರೀಕೃತ ಬೇಸಾಯ ಪದ್ಧತಿ ಬಗ್ಗೆ ಪ್ರಾತ್ಯಕ್ಷಿಕೆ



ಕಬ್ಬಿನ ಯಾಂತ್ರೀಕೃತ ಬೇಸಾಯ ಪದ್ಧತಿಯ ಪ್ರಾತ್ಯಕ್ಷಿಕೆ ನೀಡಲಾಯಿತು.

ಪಾಂಡವಪುರ: ತಾಲೂಕಿನ ಹಿರೇಮರಳಿ ಗ್ರಾಮದಲ್ಲಿ ರೈತ ಸ್ವಾಮೀಗೌಡರ ಜಮೀನಿನಲ್ಲಿ ಕೃಷಿ ಇಲಾಖೆ ವತಿಯಿಂದ ಕಬ್ಬಿನ ಯಾಂತ್ರೀಕೃತ ಬೇಸಾಯ ಪದ್ಧತಿಯ ಪ್ರಾತ್ಯಕ್ಷಿಕೆ ನಡೆಸಲಾಯಿತು.

ಯಂತ್ರದ ಮೂಲಕ ಕಬ್ಬಿನ ಪೈರು ನಾಟಿ ಮಾಡುವ ಮೂಲಕ ಕಬ್ಬಿನ ಯಾಂತ್ರೀಕೃತ ಬೇಸಾಯ ಪದ್ಧತಿಯ ಪ್ರಾತ್ಯಕ್ಷಿಕೆಗೆ ಕೃಷಿ ಇಲಾಖೆ ಜಂಟಿ ನಿರ್ದೇಶಕ ವಿ.ಎಸ್. ಅಶೋಕ್ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಕಾರ್ಮಿಕರ ಕೊರತೆಯಿಂದಾಗಿ ಇತ್ತೀಚಿನ ದಿನಗಳಲ್ಲಿ ಕಬ್ಬು ಬೇಸಾಯ ಮಾಡುವುದು ಕಷ್ಟಸಾಧ್ಯವಾಗುತ್ತಿದೆ. ರೈತರು ಸರಿಯಾದ ಸಮಯಕ್ಕೆ ಬೇಸಾಯ ಮಾಡಲಾಗದೆ. ಕಬ್ಬಿನ ಬೇಸಾಯದ ಖರ್ಚು ಹೆಚ್ಚಾಗುತ್ತಿದೆ ಇಳುವರಿ ಕಡಿಮೆಯಾಗಿ ರೈತರಿಗೆ ಹೆಚ್ಚಿನ ಆರ್ಥಿಕ ನಷ್ಟ ಉಂಟಾಗುತ್ತಿದೆ. ಹಾಗಾಗಿ ರೈತರಿಗೆ ಕಬ್ಬು ಬೇಸಾಯಕ್ಕೆ ಅನುಕೂಲವಾಗಲೆಂದು ಯಂತ್ರಗಳನ್ನು ಬಳಸಿ ಬೇಸಾಯ ಮಾಡಲು ರೈತರಿಗೆ ಯಾಂತ್ರೀಕೃತ ಬೇಸಾಯ ಪದ್ಧತಿಯ ಬಗ್ಗೆ ಅರಿವು ಮೂಡಿಸಲಾಗುತ್ತಿದೆ ಎಂದರು.

ಯಂತ್ರದ ಮೂಲಕ 5 ಅಡಿ ಅಂತರದಲ್ಲಿ ಕಬ್ಬಿನ ಪೈರು ನಾಟಿ ಮಾಡುವುದು, ಹನಿ ನೀರಾವರಿ ಬೇಸಾಯ ಪದ್ಧತಿಯಲ್ಲಿ ಕಬ್ಬು ಬೆಳೆಯುವುದು, ಅಂತರ ಬೇಸಾಯ ಪದ್ಧತಿ, ಕಟಾವು, ಕಳೆ ನಿರ್ವಹಣೆ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. ರೈತರು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಕೃಷಿ ಯಾಂತ್ರೀಕೃತ ಬೇಸಾಯ ಪದ್ಧತಿಯ ಪ್ರಾತ್ಯಕ್ಷಿಕೆಯಲ್ಲಿ 200ಕ್ಕೂ ಅಧಿಕ ರೈತರು ಪಾಲ್ಗೊಂಡಿದ್ದರು. ಕಬ್ಬು ಬೇಸಾಯ ಪದ್ಧತಿಯ ಬಗ್ಗೆ ಉಪನ್ಯಾಸ ನೀಡಲಾಯಿತು.

ಗ್ರಾಪಂ ಅಧ್ಯಕ್ಷೆ ಮಂಜುಳ, ಯಶ್ವಂತ್, ಡಾ.ಭಾನುಪ್ರಕಾಶ್, ಡಾ.ಸ್ವಾಮೀಗೌಡ, ಡಾ.ಶ್ರೀದೇವಿ, ಸೋಮಶೇಖರ್ ಹಾಜರಿದ್ದರು.

ಇಂದು ನಾವಾಡುವ ನುಡಿಯೇ ಕನ್ನಡ ನುಡಿ ಕಾರ್ಯಕ್ರಮ

ಮಂಡ್ಯ,ನ.30– ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ತು, ದೂರದರ್ಶನ ಚಂದನ ವಾಹಿನಿಯ ಸಹಯೋಗದಲ್ಲಿ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಅಂಗವಾಗಿ ದೂರದರ್ಶನ ಚಂದನದ ಜನಪ್ರಿಯ ಕಾರ್ಯಕ್ರಮವಾದ "ಮಧುರ ಮಧುರವೀ ಮಂಜುಳಗಾನ" ವಿಶೇಷ ಸಾಂಸ್ಕೃತಿಕ ಕಾರ್ಯಕ್ರಮ ಶೀರ್ಷಿಕೆಯಡಿಯಲ್ಲಿ "ನಾವಾಡುವ ನುಡಿಯೇ ಕನ್ನಡ ನುಡಿ" ಕಾರ್ಯಕ್ರಮವನ್ನು ಡಿ1 ರಂದು ಸಂಜೆ4 ಗಂಟೆಗೆ ನಗರದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದ ಉದ್ಘಾಟನೆಯನ್ನು ಬೆಂಗಳೂರು ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳಾದ ನ್ಯಾಯಮೂರ್ತಿ ಇ.ಎಸ್.ಇಂದ್ರೇಶ್‌ರವರು ನಡೆಸಲಿದ್ದಾರೆ.

ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಎನ್.ಚೆಲುವರಾಯಸ್ವಾಮಿ ಅವರ ಗೌರವ ಅಧ್ಯಕ್ಷತೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ. ಮಹೇಶ ಜೋಶಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಶ್ರೀ ಕ್ಷೇತ್ರ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಶ್ರೀಶ್ರೀಶ್ರೀ ನಿರ್ಮಲಾನಂದ ಸ್ವಾಮೀಜಿ ಮತ್ತು ಶ್ರೀರಂಗಪಟ್ಟಣ ಶ್ರೀ ಕ್ಷೇತ್ರ ಬೇಬಿ ಮಠ ಮತ್ತು ಚಂದ್ರವನ ಆಶ್ರಮದ ಪೀಠಾಧ್ಯಕ್ಷರಾದ ಶ್ರೀಶ್ರೀ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ ಅವರು ಕಾರ್ಯಕ್ರಮದಲ್ಲಿ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ ಎಂದು ದೂರದರ್ಶನ ಚಂದನ ವಾಹಿನಿಯ ಪ್ರಕಟಣೆ ತಿಳಿಸಿದೆ.

ಮೂರನೇ ಪುಟದಿಂದ

ಮುಡಾ ಸಭೆಯಲ್ಲಿ ಗಂಭೀರ ಚರ್ಚೆ

ತನಿಖೆಗೆ ಆದೇಶಿಸಿರುವ ಹಿನ್ನೆಲೆಯಲ್ಲಿ ಲೋಕಾಯುಕ್ತ ಮೈಸೂರು ಎಸ್ಪಿ ಟಿ.ಜೆ.ಉದೇಶ್ ನೇತೃತ್ವದಲ್ಲಿ ತನಿಖೆ ನಡೆಯುತ್ತಿದೆ. ಅಲ್ಲದೆ ನಿವೃತ್ತ ನ್ಯಾಯಮೂರ್ತಿ ಪಿ.ಎನ್.ದೇಸಾಯಿ ನೇತೃತ್ವದ ಏಕಸದಸ್ಯ ಆಯೋಗವೂ ಮತ್ತೊಂದೆಡೆ ಮುಡಾ ನಿವೇಶನ ಹಂಚಿಕೆ ಹಗರಣ ಕುರಿತಂತೆ ತನಿಖೆ ನಡೆಸುತ್ತಿದೆ ಎಂದ ವಿಶ್ವನಾಥ್ ಅವರು, ಜೊತೆಗೆ ಜಾರಿ ನಿರ್ದೇಶನಾಲಯ (ಇಡಿ)ವೂ ತನಿಖೆ ಕೈಗೊಂಡಿದ್ದು, ಇನ್ನೇನು ವರದಿ ಸಲ್ಲಿಸುವ ಹಂತದಲ್ಲಿದ್ದಾಗಿಯೂ ನಿವೇಶನ ಕಳೆದುಕೊಂಡಿರುವ ಮುಡಾದಿಂದ ಈವರೆಗೆ ಪೊಲೀಸರಿಗಾಗಲೀ, ಸರ್ಕಾರಕ್ಕಾಗಲೀ ಅಥವಾ ಇನ್ನಾವುದೇ ತನಿಖಾ ಸಂಸ್ಥೆಗಾಗಲೀ ದೂರು ನೀಡದಿರುವುದು ವಿಪರ್ಯಾಸ ಎಂದರು.

ಇಂತಹ ಒಂದು ದೊಡ್ಡ ಆರ್ಥಿಕ ನಷ್ಟ ಉಂಟಾಗಿದ್ದರೂ ಮುಡಾದಲ್ಲಿ ಮಾತ್ರ ಯಾರೂ ಸೊಲ್ಲೆತ್ತದೆ ಹೊರಗೆ ಜನ ಬಾಯಿಗೆ ಬಂದಂತೆ ಮಾತನಾಡಿಕೊಳ್ಳುವಂತಾಗಿದೆ. ಇದಕ್ಕೆಲ್ಲ ಯಾರು ಹೊಣೆ ಎಂದು ವಿಶ್ವನಾಥ್ ಪ್ರಶ್ನಿಸುತ್ತಿದ್ದಂತೆಯೇ ಅವರ ನೆರವಿಗೆ ಬಂದ ಶಾಸಕರಾದ ತನ್ವೀರ್ ಸೇಠ್ ಹಾಗೂ ಶ್ರೀವತ್ಸ ಅವರು, ಶೇ. 50:50ರ ಅನುಪಾತದಡಿ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸದೆ ವಸತಿ ಬಡಾವಣೆಗಾಗಿ ಬಳಸಿಕೊಂಡಿರುವ ಭೂಮಿಗೆ ಬದಲಾಗಿ ಅಭಿವೃದ್ಧಿಪಡಿಸಿರುವ ಪ್ರತಿಷ್ಠಿತ ಬಡಾವಣೆಗಳಲ್ಲಿ ಕೋಟ್ಯಾಂತರ ರೂ. ಬೆಲೆಬಾಳುವ ನಿವೇಶನಗಳನ್ನು ಹಂಚುವ ಸಂಬಂಧ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಿಲ್ಲ. ಸರ್ಕಾರದಿಂದಲೂ ಅನುಮತಿ ಪಡೆಯದೆ ನ್ಯಾಯಾಲಯಗಳ ಕೆಲ ಪ್ರಕರಣಗಳನ್ನು ಉಲ್ಲೇಖಿಸಿ ಅಧಿಕೃತ ಜ್ಞಾಪನ ಹೊರಡಿಸುವ ಮೂಲಕ ಈ ಹಿಂದಿನ ಆಯುಕ್ತರು ನಿಯಮವನ್ನು ಗಾಳಿಗೆ ತೂರಿ ಮಂಜೂರು ಮಾಡಿರುವುದು ಇವತ್ತಿನ ಈ ಸ್ಥಿತಿಗೆ ಕಾರಣವಾಗಿದೆ ಎಂದರು.

ಒಂದು ವೇಳೆ ಇಂತಹ ಪ್ರಕ್ರಿಯೆ ಆರಂಭವಾದಾಗಲೇ ಎಚ್ಚೆತ್ತು ಸಭೆ ಗಮನಕ್ಕೆ ತಂದಿದ್ದರೆ ಅಥವಾ ಈ ರೀತಿ ಮಂಜೂರು ಮಾಡಿದವರ ವಿರುದ್ಧ ದೂರು ನೀಡಿದ್ದರೆ ಕ್ರಮ ವಹಿಸಬಹುದಾಗಿತ್ತು. ಅಲ್ಲದೆ, ಸಾವಿರಾರು ಕೋಟಿ ರೂ. ಮುಡಾ ಆಸ್ತಿ ರಕ್ಷಣೆಯಾಗುತ್ತಿತ್ತು. ನಮ್ಮ ನಿರ್ಲಕ್ಷದ ಬಗ್ಗೆ 'ಮೈಸೂರು ಮಿತ್ರ' ಪತ್ರಿಕೆಯಲ್ಲಿ ಸುದೀರ್ಘ ವರದಿ ಪ್ರಕಟವಾಗಿದೆ. ಒಮ್ಮೆ ಹೋದ ಮಾನ ಮತ್ತೆ ಪಡೆಯಲಾದೀತೆ? ಎಂದು ಅವರು ಪ್ರಶ್ನಿಸುತ್ತಿದಂತೆಯೇ ಮಧ್ಯ ಪ್ರವೇಶಿಸಿದ ಶಾಸಕ ಕೆ.ಹರೀಶ್‌ಗೌಡ ಅವರು, 50:50 ಅನುಪಾತದ ನಿವೇಶನ ಹಂಚಿಕೆ ಪ್ರಕರಣ ಕುರಿತಂತೆ ಈಗಾಗಲೇ ಲೋಕಾಯುಕ್ತ, ಇಡಿ, ನ್ಯಾಯಮೂರ್ತಿಗಳ ನೇತೃತ್ವದ ಆಯೋಗವು ತನಿಖೆ ನಡೆಸುತ್ತಿದೆ. ಈ ನಡುವೆ ನಾವೇ ದೂರು ನೀಡಿದರೆ ಪ್ರಾಧಿಕಾರದ ಗೌರವವನ್ನು ನಾವೇ ಕಳೆದಂತಾಗುವುದಿಲ್ಲವೇ? ಎಂದರು. ಅದರಿಂದ ಅಸಮಾಧಾನಗೊಂಡ ವಿಶ್ವನಾಥ್ ಅವರು, 'ಅಲ್ರೀ ನಮ್ಮ ಮನೆಯಲ್ಲಿ ಒಂದು ಚೊಂಬು ಕಳುವಾದರೆ ತಡಬಡಾಯಿಸುತ್ತೇವೆ. ಊರು ತುಂಬ ಮಾತಾಡುತ್ತೇವೆ. ಅಗತ್ಯ ಬಿದ್ದರೆ ಪೊಲೀಸರಿಗೆ ಕಂಪ್ಲೇಂಟ್ ಕೊಡುತ್ತೇವೆ. ಇಲ್ಲಿ ಸಾವಿರಾರು ಕೋಟಿ ರೂ. ಬೆಲೆಬಾಳುವ ಸಾವಿರಾರು ನಿವೇಶನಗಳ ಅಕ್ರಮ ಮಾರಾಟವಾಗಿದೆ. ನಮ್ಮ ಸಂಸ್ಥೆಯ ಆಸ್ತಿಯನ್ನು ಬೇಕಾಬಿಟ್ಟಿಯಾಗಿ ಪರಭಾರೆ ಮಾಡಿದರೆ ದೂರು ನೀಡಬಾರದೆ?, ಹಾಗೆ ನಾವು ದೂರು ನೀಡಿದರೆ ಅದು ಮಾನ ಹೋದಂತೆಯೇ? ಈಗ ಏನಾಗಿದೆ? ಮುಡಾದ ಗೌರವ, ಮಾನ ಎಲ್ಲ ಹೋಗಿದೆ. ಏನು ಉಳಿದಿದೆ ಹೇಳಿ?' ಎಂದು ಪ್ರಶ್ನಿಸಿದರು.

ದಲಿತರ ಭೂಮಿ ರಕ್ಷಣೆಗೆಂದೇ ಪಿಟಿಸಿಎಲ್ ಕಾಯ್ದೆ ಜಾರಿಯಲ್ಲಿದೆ. ಆದರಿಲ್ಲಿ ಅದೇ ಪಿಟಿಸಿಎಲ್ ಕಾಯ್ದೆ ಉಲ್ಲಂಘನೆ ಮಾಡಿ ದಲಿತರಿಂದ ಭೂಮಿ ಖರೀದಿಸಿರುವ ಬಗ್ಗೆ ಇಡೀ ಸರ್ಕಾರವೇ ಅಲುಗಾಡುವಂತಾಗಿದೆ. ಹಾಗಾದರೆ ನಿವೇಶನ ಮಂಜೂರಾತಿಗೆ ಇರುವ ಕಾಯ್ದೆ ಕಾನೂನುಗಳನ್ನು ಉಲ್ಲಂಘಿಸಿದವರ ವಿರುದ್ಧ ಕ್ರಮವಾಗಬಾರದೆ?. ಈ ಬಗ್ಗೆ ಈಗಲಾದರೂ ಎಚ್ಚೆತ್ತು ಕ್ರಮವಹಿಸದಿದ್ದರೆ ಮುಂದಿನ ದಿನಗಳಲ್ಲಿ ಮುಡಾಗೆ ಖಾಯಂ ಕಳಂಕ ಬರುತ್ತದೆ ಎಂದು ವಿಶ್ವನಾಥ್ ಅವರು ಅಭಿಪ್ರಾಯಪಟ್ಟರು. ಸುದೀರ್ಘ ಚರ್ಚೆ ನಡೆದ ಬಳಿಕ ಕಾನೂನಿನ ಅಭಿಪ್ರಾಯ, ಸಲಹೆ ಪಡೆದು ಈ ಕುರಿತು ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಸಭೆಯ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾಧಿಕಾರಿ ಲಕ್ಷ್ಮೀಕಾಂತರೆಡ್ಡಿ ಅವರು ತಿಳಿಸಿದರು.

ಶಾಸಕರಾದ ಜಿ.ಟಿ.ದೇವೇಗೌಡ, ರಮೇಶ್ ಬಾಬು ಬಂಡಿಸಿದ್ದೇಗೌಡ, ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ದಿನೇಶ್ ಗೂಳಿಗೌಡ, ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಮುಡಾ ಆಯುಕ್ತ ಎ.ಎನ್.ರಘುನಂದನ್, ಕಾರ್ಯದರ್ಶಿ ಪ್ರಸನ್ನಕುಮಾರ್, ಸೂಪರಿಂಟೆಂಡೆಂಟ್ ಇಂಜಿನಿಯರ್ ಮುರಳೀಧರ್ ಸೇರಿದಂತೆ ಹಲವು ಸದಸ್ಯರು ಇಂದಿನ ಮುಡಾ ಸಭೆಯಲ್ಲಿ ಉಪಸ್ಥಿತರಿದ್ದರು. ಬೆಳಗ್ಗೆ 11ರಿಂದ ಮಧ್ಯಾಹ್ನ 2.30ರವರೆಗೂ ನಡೆದ ಸಭೆಯಲ್ಲಿ ಒಟ್ಟು 344 ವಿಷಯಗಳನ್ನು ಇತ್ಯರ್ಥಪಡಿಸಿ, ತೀರ್ಮಾನಿಸಲಾಯಿತು.

ಅಕ್ರಮವಾಗಿ ನಿವೇಶನ ಹಂಚಿಕೆ ಮಾಡಿರುವವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ನಾನು ಮೊದಲಿನಿಂದಲೂ ಹೇಳುತ್ತಿದ್ದೇನೆ. ಮುಡಾ ಸಭೆಗೆ ತಂದು ಕೈಗೊಂಡ ನಿರ್ಣಯದ ಬಗ್ಗೆ ಸರ್ಕಾರಕ್ಕೆ ನಡವಳಿಗಳನ್ನು ಸಲ್ಲಿಸಿ, ಅನುಮೋದನೆ ಪಡೆದ ಬಳಿಕವಷ್ಟೇ ನಿವೇಶನಗಳನ್ನು ಕೊಡಬೇಕಾಗಿತ್ತು. ಆದರೆ ಅದಾವುದೂ ಆಗಲಿಲ್ಲ. ಸಿಎ ನಿವೇಶನ ಹಂಚಿಕೆ ಸಂಬಂಧವೂ ಸಮರ್ಪಕವಾಗಿ ಚರ್ಚಿಸಿ, ಅಗತ್ಯವುಳ್ಳವರಿಗೆ ನಿಯಮಾನುಸಾರ ಅನುಕೂಲವಾಗುವಂತೆ ಹಂಚಿಕೆ ಮಾಡಬೇಕೆಂಬುದು ನನ್ನ ಸಲಹೆ. ಇಂದೂ ಸಹ ನಾನು ಅದನ್ನು ಸಭೆಯಲ್ಲಿ ಹೇಳಿದ್ದೇನೆ. ಒಟ್ಟಾರೆ ಶೇ.50:50ರ ಅನುಪಾತದ ನಿವೇಶನ ಹಂಚಿಕೆ ಹಗರಣ ಸಂಬಂಧಿಸಿದಂತೆ ನಿಷ್ಪಕ್ಷಪಾತ ತನಿಖೆ ನಡೆದು ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲೇ ಬೇಕು.
–ತನ್ವೀರ್ ಸೇಠ್, ಶಾಸಕ

344 ವಿಷಯಗಳಿಗೆ ಮುಡಾ ಸಮ್ಮತಿ

ಬಡಾವಣೆಗಳ ಕಂದಾಯ ವಸೂಲಿ ಮಾಡುವುದು, ಬಡಾವಣೆಗಳ ನಕ್ಷೆ ಅನುಮೋದನೆ, ನಗರದ ಅಭಿವೃದ್ಧಿ ಚಟುವಟಿಕೆಗಳನ್ನು ಹೊರತುಪಡಿಸಿ ಬೇರೆ ಯಾವ ಸೇವೆಗಳನ್ನೂ ಪ್ರಾಧಿಕಾರದಿಂದ ನೀಡಬಾರದು ಎಂದು ಇಂದಿನ ಸಭೆಯಲ್ಲಿ ನಿರ್ಣಯಿಸಲಾಗಿದೆ.

ಅರ್ಜಿಗಳನ್ನು ಪರಿಶೀಲಿಸಿ ಉದ್ದೇಶಕ್ಕನುಗುಣವಾಗಿ ಖಾಸಗಿ ಸಂಘ–ಸಂಸ್ಥೆಗಳಿಗೆ ಸಿಎ (ನಾಗರಿಕ ಸೌಲಭ್ಯ) ನಿವೇಶನ ನೀಡುವ ಬಗ್ಗೆ ಮುಂದಿನ ಪ್ರಾಧಿಕಾರದ ಸಾಮಾನ್ಯ ಸಭೆಗೆ ಕಡತ ಮಂಡಿಸಬೇಕು. ಸಂಘ–ಸಂಸ್ಥೆಗಳ ಕಾರ್ಯಚಟುವಟಿಕೆ, ಬ್ಯಾಂಕ್ ವಹಿವಾಟು, ಸಿಎ ನಿವೇಶನ ನೀಡುವುದರಿಂದ ಸಮಾಜ, ಸಮುದಾಯಕ್ಕೆ ಆಗುವ ಅನುಕೂಲದ ಬಗ್ಗೆ ಪರಾಮರ್ಶಿಸಿ ಸಿಎ ನಿವೇಶನ ಮಂಜೂರು ಮಡುವ ಬಗ್ಗೆ ತೀರ್ಮಾನ ಕೈಗೊಳ್ಳಲು ಸಭೆಯಲ್ಲಿ ಸದಸ್ಯರು ಸಲಹೆ ನೀಡಿದರು.

ಮುಡಾ ಆಡಳಿತ ಯಂತ್ರ ಸದೃಢಗೊಳಿಸಿ ಸುಗಮವಾಗಿ ಸಾರ್ವಜನಿಕರ ಕೆಲಸಗಳಾಗುವಂತೆ ಮಾಡಬೇಕು, ಅನಗತ್ಯ ವೆಚ್ಚಗಳಿಗೆ ಕಡಿವಾಣ ಹಾಕಿ ಆದಾಯ ವೃದ್ಧಿಗೆ ಆದ್ಯತೆ ನೀಡಿ ಪ್ರಾಧಿಕಾರವನ್ನು ಆರ್ಥಿಕವಾಗಿ ಸಬಲವಾಗುವಂತೆ ಮಾಡಬೇಕೆಂದು ಸದಸ್ಯರು ಸಲಹೆ ನೀಡಿದರಲ್ಲದೆ, ಅಭಿವೃದ್ಧಿ ಕಾಮಗಾರಿಗಳು ಬಾಕಿ ಇರುವ ಖಾಸಗಿ ಬಡಾವಣೆಗಳನ್ನು ಹಸ್ತಾಂತರ ಮಾಡಿದರೆ ಸ್ಥಳೀಯ ಸಂಸ್ಥೆಗಳಿಗೆ ಹೊರೆಯಾಗುವುದರಿಂದ ಈ ಬಗ್ಗೆ ಗಮನಹರಿಸಿ ಎಂದು ತಿಳಿಸಿದರು. ಹಸ್ತಾಂತರಗೊಂಡ ಬಡಾವಣೆಗಳ ಆಸ್ತಿಗಳಿಂದ ಕಂದಾಯ, ಇತರ ತೆರಿಗೆ ಬರುವುದರಿಂದ ರಸ್ತೆ, ನೀರು, ಚರಂಡಿ, ಬೀದಿ ದೀಪ, ಸ್ವಚ್ಛತೆ ನಿರ್ವಹಣೆ ಮಾಡುವುದಾಗಿರುವುದರಿಂದ ಮುಡಾ ಆಯಾ ವ್ಯಾಪ್ತಿಯ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಲೇಬೇಕು. ಪ್ರಾಧಿಕಾರವು ಖಾತೆ–ಕಂದಾಯ ಮಾಡುವುದು, ತೆರಿಗೆ ವಸೂಲಿ ಮಾಡಬಾರದು. ನಕ್ಷೆ ಅನುಮೋದನೆ, ಅಭಿವೃದ್ಧಿಗಷ್ಟೇ ಸೀಮಿತಗೊಳಿಸಬೇಕು ಎಂದು ಅಧ್ಯಕ್ಷರಾದ ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತ ರೆಡ್ಡಿ ಸಭೆಗೆ ತಿಳಿಸಿದರು.

ನಿವೇಶನ ನೀಡಲು ಮುಡಾ ನಿರ್ಧಾರ

ಪಡೆಯುತ್ತಿರುವುದಕ್ಕೆ ದಾಖಲಾತಿ, ಮರಣ ಸಮರ್ಪಣಾ ಪತ್ರ, ಕುಟುಂಬ ಜೀವಿತ ದೃಢೀಕರಣ ಪತ್ರ, ವಾಸಸ್ಥಳ ದೃಢೀಕರಣ ಪತ್ರ, ಯಾವುದೇ ನಿವೇಶನ ಇರುವುದಿಲ್ಲ ಎಂಬ ಪ್ರಮಾಣ ಪತ್ರ ಆಧಾರ್ ಪ್ರತಿ ಹಾಗೂ ಗುರುತಿನ ಚೀಟಿಗಳ ಮೂಲ ದಾಖಲಾತಿಗಳೊಂದಿಗೆ ಪರಿಶೀಲನೆಗಾಗಿ ಕಚೇರಿಗೆ ಖುದ್ದು ಹಾಜರಾಗುವಂತೆ ಸೂಚಿಸಲಾಗಿತ್ತು. ಅದರಂತೆ ಕಲಾವತಿಯವರು ಮುಡಾಗೆ ದಾಖಲಾತಿಗಳನ್ನು ಸಲ್ಲಿಸಿದ ಬಳಿಕವೂ 2022ರ ಅಕ್ಟೋಬರ್ 21ರಂದು ಮತ್ತೊಂದು ಹಿಂಬರಹ ನೀಡಿದ್ದು, ಉಚಿತ ನಿವೇಶನ ಹಂಚಿಕೆ ಮಾಡಲು ಕ್ರಮ ವಹಿಸಲಾಗಿದೆ. ಆಯುಕ್ತರ ಆದೇಶದಂತೆ ಪ್ರಾಧಿಕಾರ ಮುಂದೆ ನಿವೇಶನ ಹಂಚಿಕೆಗಾಗಿ ಅಧಿಸೂಚನೆ ಹೊರಡಿಸಿದ ಸಂದರ್ಭದಲ್ಲಿ ಆದ್ಯತೆ ಮೇರೆಗೆ ನಿಮ್ಮ ಮನವಿಯನ್ನು ಪರಿಗಣಿಸಲಾಗುವುದು ಎಂದು ತಿಳಿಸಲಾಗಿತ್ತು ಎಂದು ರಘುನಂದನ್ ಅವರು ಸಭೆಗೆ ಮಾಹಿತಿ ನೀಡಿದರು.

ಅಲ್ಲದೆ 2024ರ ಆಗಸ್ಟ್ 5 ಮತ್ತು 6ರಂದು 'ಸ್ಟಾರ್ ಆಫ್ ಮೈಸೂರ್' ಮತ್ತು 'ಮೈಸೂರು ಮಿತ್ರ' ಪತ್ರಿಕೆಗಳಲ್ಲಿ 'ಪುಲ್ವಾಮಾ ಹುತಾತ್ಮ ಯೋಧನ ವಿಧವಾ ಪತ್ನಿಗೆ ನಿವೇಶನ ನೀಡಲು ಮುಡಾ ನಕಾರ' ಎಂಬ ವರದಿಗಳು ಪ್ರಕಟವಾಗಿದ್ದವು ಎಂಬ ವಿಷಯವೂ ಸಭೆಗೆ ಚರ್ಚೆಗೆ ಬಂತು. ನಿವೇಶನ ಕೋರಿರುವ ವೀರ ಯೋಧರ ಕುಟುಂಬಗಳಿಗೆ ರಾಜ್ಯದ ಬೇರೆ ಎಲ್ಲಿಯೂ ಸರ್ಕಾರದಿಂದ ನಿವೇಶನ ಅಥವಾ ಭೂಮಿಯನ್ನು ನೀಡಿಲ್ಲ ಎಂಬುದನ್ನು ಖಾತರಿಪಡಿಸಿಕೊಂಡು ಮುಡಾದಿಂದ ನಿವೇಶನ ಮಂಜೂರು ಮಾಡಲು ಸಮ್ಮತಿ ಸೂಚಿಸಿದರು. ಕನಕಪುರ ತಾಲೂಕಿನ ಸಾಸಲೆಪುರ ಗ್ರಾಮದ ಹೆಚ್.ಗುರು ಅವರು ಸೇನೆಯಲ್ಲಿ ಸೇವೆ ಸಲ್ಲಿಸುತ್ತಿದ್ದರು. ಅವರು ಮಂಡ್ಯ ಜಿಲ್ಲೆಯ ಮದ್ದೂರು ತಾಲೂಕು ಗದಲಿಗೆರೆಯ ಎಸ್.ಕಲಾವತಿ ಅವರನ್ನು ವಿವಾಹವಾಗಿದ್ದರು. ಮದುವೆಯಾಗಿ ಕೇವಲ 10 ತಿಂಗಳಲ್ಲೇ ಗುರು ಅವರು ಜಮ್ಮು ಮತ್ತು ಕಾಶ್ಮೀರದ ಪುಲ್ವಾಮಾ ಜಿಲ್ಲೆ ಲೇತ್‌ಪುರ ಎಂಬಲ್ಲಿ ಉಗ್ರರು ನಡೆಸಿದ ಐಇಡಿ ಸ್ಫೋಟಗೊಂಡು 2019ರ ಫೆಬ್ರವರಿ 14ರಂದು ವೀರ ಮರಣ ಹೊಂದಿದ್ದರು. ಸೇನೆಯಲ್ಲಿ 8 ವರ್ಷಗಳ ಕಾಲ ಸೇವೆ ಸಲ್ಲಿಸಿದ ಪತಿ ಪುಲ್ವಾಮಾದಲ್ಲಿ ಉಗ್ರರ ದಾಳಿಯ ಸ್ಫೋಟಕ್ಕೆ ಸಿಲುಕಿ ವೀರ ಮರಣ ಹೊಂದಿರುವುದರಿಂದ ರಾಜ್ಯ ಸರ್ಕಾರದಿಂದ ಯೋಧರ ಅವಲಂಬಿತರಿಗೆ ನೀಡುವ ಉಚಿತ ನಿವೇಶನ ಮಂಜೂರು ಮಾಡುವಂತೆ ಕೋರಿ ಗುರು ಅವರ ಪತ್ನಿ ಕಲಾವತಿ ಅವರು ಬೆಂಗಳೂರಿನ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ನಿರ್ದೇಶಕರಿಗೆ ಮನವಿ ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದು. ಕಲಾವತಿ ಅವರ ಜೊತೆಗೆ ಇನ್ನೂ ನಾಲ್ವರು ಮರಣ ಹೊಂದಿದ ಯೋಧರ ಕುಟುಂಬದವರಿಗೂ ನಿವೇಶನ ನೀಡುವಂತೆ ಇಂದು ನಡೆದ ಮುಡಾ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ.

ವಿಜಯೇಂದ್ರ ಬಣದ ಶಕ್ತಿ ಪ್ರದರ್ಶನ

ಕಾರಣ ಎಂದು ರೇಣುಕಾಚಾರ್ಯ ಆಪಾದಿಸಿದರು. ವಿಜಯೇಂದ್ರ ಅವರನ್ನು ರಾಜ್ಯಾಧ್ಯಕ್ಷರಾಗಿ ಮಾಡಿರುವುದು ನಾವಲ್ಲ. ಅವರ ಪಕ್ಷ ಸಂಘಟನೆಯ ಶಕ್ತಿ ನೋಡಿ ಹೈಕಮಾಂಡ್ ಅವರನ್ನು ರಾಜ್ಯಾಧ್ಯಕ್ಷರಾಗಿ ಮಾಡಿದೆ. ಬಿಜೆಪಿಯಲ್ಲಿ ಹಿರಿಯರು ಅಧ್ಯಕ್ಷರಾಗಿದ್ದಾರೆ, ಕಿರಿಯರು ಅಧ್ಯಕ್ಷರಾಗಿದ್ದಾರೆ. ಇದು ಯತ್ನಾಳ್ ಟೀಂಗೆ ಕಾಣಿಸುತ್ತಿಲ್ಲವೆ ಎಂದು ಪ್ರಶ್ನಿಸಿದರು. ಕಾಂಗ್ರೆಸ್‌ನಿಂದ ಸುಪಾರಿ ಪಡೆದಿರುವ ಯತ್ನಾಳ್ ಪಕ್ಷ ವಿರೋಧಿ ಚಟುವಟಿಕೆಯಲ್ಲಿ ಭಾಗಿಯಾಗಿದ್ದಾರೆ. ಸಿದ್ದರಾಮಯ್ಯಗೆ ಬೆಂಬಲ ನೀಡುತ್ತೇನೆ ಎಂದಿರುವ ಯತ್ನಾಳ್ ಮ್ಯಾಚ್ ಫಿಕ್ಸಿಂಗ್‌ಗೆ ಇದಕ್ಕಿಂತ ಬೇರೆ ನಿದರ್ಶನ ಬೇಕೆ ಎಂದು ಪ್ರಶ್ನಿಸಿದ ರೇಣುಕಾಚಾರ್ಯ, ಯಡಿಯೂರಪ್ಪ ರಾಜಕಾರಣಕ್ಕೆ ಬಂದಾಗ ಇವರು ಹುಟ್ಟಿರಲಿಲ್ಲ ಎಂದು ಕಿಡಿಕಾರಿದರು.

ಬಸನಗೌಡ ಪಾಟೀಲ್ ಯತ್ನಾಳ್ ಜೊತೆ ಮೈಸೂರಿನ ಬಿಜೆಪಿ ನಾಯಕರು ಕೂಡ ಸೇರಿದ್ದಾರೆ ಎಂದು ಆರೋಪಿಸಿದ ರೇಣುಕಾಚಾರ್ಯ, ಆ ನಾಯಕರು ಯಾರೆಂದು ಹೆಸರು ಬಹಿರಂಗ ಮಾಡಲಿಲ್ಲ. ಪ್ರತಿ ದಿನ ಮಾಧ್ಯಮದವರ ಜೊತೆ ಸಂಪರ್ಕದಲ್ಲಿರುವ ಅವರು ಯಾರೆಂದು ನಿಮಗೆ ಗೊತ್ತಿಲ್ಲವೆ ಎಂದು ಪ್ರಶ್ನಿಸಿದರು. ಬಸನಗೌಡ ಪಾಟೀಲ್ ಯತ್ನಾಳ್ ಉಚ್ಚಾಟನೆ ಮಾಡಬೇಕೆಂದು ದಾವಣಗೆರೆಯಲ್ಲಿ ದೊಡ್ಡ ಸಮಾವೇಶ ಮಾಡುತ್ತೇವೆ. ಈ ಸಂಬಂಧ ಮುರುಡೇಶ್ವರದಲ್ಲಿ ಶೀಘ್ರವೇ ಪೂರ್ವಭಾವಿ ಸಭೆ ನಡೆಸುತ್ತೇವೆ ಎಂದು ತಿಳಿಸಿದರು.

ಕಾಂಗ್ರೆಸ್ ಜೊತೆ ಮ್ಯಾಚ್ ಫಿಕ್ಸಿಂಗ್: ಈ ವೇಳೆ ಮಾತನಾಡಿದ ಮಾಜಿ ಸಚಿವ ಹರತಾಳು ಹಾಲಪ್ಪ, ಮುಡಾ ಪ್ರಕರಣ ಸಂಬಂಧ ವಿಜಯೇಂದ್ರ ನಾಯಕತ್ವದಲ್ಲಿ ಬೆಂಗಳೂರಿನಿಂದ ಮೈಸೂರು ತನಕ ಪಾದಯಾತ್ರೆ ನಡೆಯಿತು. ಈ ಮೂಲಕ ವಿಜಯೇಂದ್ರ ಅವರು ಸಿದ್ದರಾಮಯ್ಯ ಅವರನ್ನು ಆತಂಕಗೊಳಿಸಿದ್ದಾರೆ. ಒಬ್ಬ ಅಧ್ಯಕ್ಷರಾಗಿ ಇದಕ್ಕಿಂತ ಮತ್ತೇನು ಮಾಡಬೇಕು. ಇಷ್ಟೆಲ್ಲಾ ಮಾತನಾಡುವ ಯತ್ನಾಳ್ ಪಾದಯಾತ್ರೆ ನಡೆಸುವ ಸಂದರ್ಭದಲ್ಲಿ ಎಲ್ಲಿಹೋಗಿದ್ದರು ಎಂದು ಪ್ರಶ್ನಿಸಿದರು.

ರಾಜ್ಯ ಕಾಂಗ್ರೆಸ್ ಸರ್ಕಾರ ಯಡಿಯೂರಪ್ಪ ಅವರನ್ನು ಟಾರ್ಗೆಟ್ ಮಾಡಿದೆ. ಆದರೆ ಇದಕ್ಕೆಲ್ಲ ಯಡಿಯೂರಪ್ಪ ಬಗ್ಗಲ್ಲ, ಕುಗ್ಗಲ್ಲ. ವಿಜಯೇಂದ್ರ ಇದನ್ನೆಲ್ಲಾ ಸಮರ್ಥ ವಾಗಿ ಎದುರಿಸುತ್ತಾರೆ. ವಿಜಯೇಂದ್ರ ಅಂತಹ ನಾಯಕರು ಪಕ್ಷಕ್ಕೆ ಅವಶ್ಯ ಎಂದು ಬಸನಗೌಡ ಪಾಟೀಲ್ ಯತ್ನಾಳ್ ತಿಳಿಯಬೇಕು ಎಂದು ಹಾಲಪ್ಪ ಸಲಹೆ ನೀಡಿದರು.

ನಮಗೆ ಮುಜುಗರ: ಸಂಡೂರು ಹಾಗೂ ಶಿಗ್ಗಾವಿ ಉಪ ಚುನಾವಣೆ ಬಿಜೆಪಿ ಸೋಲಿಗೆ ಪಕ್ಷದ ಈ ಬೆಳವಣಿಗೆ ಕಾರಣ. ಇದರಿಂದ ನಮಗೂ ತೀವ್ರ ಮುಜುಗರವಾಗುತ್ತಿದೆ. ಸಿದ್ದರಾಮಯ್ಯ ಸರ್ಕಾರದ ಹಗರಣ ಮುಚ್ಚಿಹಾಕಲು ಯತ್ನಾಳ್ ಕಾಂಗ್ರೆಸ್ ಜೊತೆ ಸೇರಿದ್ದಾರೆ ಎಂದು ಮಾಜಿ ಶಾಸಕ ತಿಪ್ಪಣ್ಣ ಬಳ್ಳಾರಿ ಆರೋಪಿಸಿದರು. ಮಾಜಿ ಸಚಿವ ಕಟ್ಟಾ ಸುಬ್ರಹ್ಮಣ್ಯ ನಾಯ್ಡು, ಮಾಜಿ ಶಾಸಕ ರೂಪಾಲಿ ನಾಯ್ಕ್, ನಗರ ಬಿಜೆಪಿ ಅಧ್ಯಕ್ಷ ನಾಗೇಂದ್ರ, ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಮಾಜಿ ಮೇಯರ್ ಸಂದೇಶ್ ಸ್ವಾಮಿ ಸೇರಿದಂತೆ ಹಲವರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಯತ್ನಾಳ್‌ಗೆ ಮಠಾಧೀಶರು ಛೀಮಾರಿ ಹಾಕಲಿ

ಬಸವಣ್ಣನವರ ಬಗ್ಗೆ ಹಗುರವಾಗಿ ಮಾತನಾಡಿರುವ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್‌ಗೆ ಮಠಾಧೀಶರೆಲ್ಲಾ ಸೇರಿ ಛೀಮಾರಿ ಹಾಕಬೇಕು ಎಂದು ಮಾಜಿ ಸಚಿವ ರೇಣುಕಾಚಾರ್ಯ ಮನವಿ ಮಾಡಿದರು. ಕ್ರಾಂತಿಕಾರಿ ಬಸವಣ್ಣನವರು ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಳ್ಳಲಿಲ್ಲ. ಬದಲಿಗೆ ಐಕ್ಯರಾದರು ಎಂದು ಸ್ಪಷ್ಟಪಡಿಸಿದರು. ಈ ತನಕ ರಾಜಕೀಯ ನಾಯಕರನ್ನು ಟೀಕೆ ಮಾಡುತ್ತಿದ್ದ ಯತ್ನಾಳ್ ಈಗ ಬಸವಣ್ಣ ನವರ ಬಗ್ಗೆ ಕೂಡ ಹಗುರವಾಗಿ ಮಾತ ನಾಡಿದ್ದಾರೆ. ಇವರನ್ನು ಕ್ಷಮಿಸಲು ಸಾಧ್ಯವೆ ಎಂದು ರೇಣುಕಾಚಾರ್ಯ ಪ್ರಶ್ನಿಸಿದರು.

ಚಾಮುಂಡೇಶ್ವರಿ ಮೊರೆ

ಬಿ.ಸಿ.ಪಾಟೀಲ್ ಆಕ್ರೋಶ ವ್ಯಕ್ತಪಡಿಸಿದರು. ಬಿಜೆಪಿ ಹೈಕಮಾಂಡ್ ಕರ್ನಾಟಕದ ಈ ಬೆಳವಣಿಗೆಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದೆ. ಹೊರಗಿನ ಶತ್ರುವಾಗಿದ್ದರೆ ಒಂದೇ ಬಾರಿಗೆ ಮುಗಿಸಿ ಬಿಡುತ್ತಿತ್ತು. ಆದರೆ ಒಳಗಿನ ಶತ್ರುವಾದ ಕಾರಣ ಎಚ್ಚರಿಕೆಯಿಂದ ಹೆಜ್ಜೆ ಇಡುತ್ತಿದೆ. ತಪ್ಪು ತಿದ್ದಿಕೊಳ್ಳಲು ಬಸನಗೌಡ ಪಾಟೀಲ್ ಯತ್ನಾಳ್‌ಗೆ ಹೈಕಮಾಂಡ್ ಸಮಯ ನೀಡುತ್ತಿದೆ. ಇಲ್ಲದಿದ್ದರೆ ಕಠಿಣ ಕ್ರಮ ಕೈಗೊಳ್ಳಲಿದೆ ಎಂದು ಎಚ್ಚರಿಸಿದರು.

ಪಕ್ಷದಲ್ಲಿ ಇವರಂತೆ ಹಾರಾಡಿ, ಜಿಗಿ, ಕುಣಿದ ಬಹಳಷ್ಟು ಜನರು ಚುನಾವಣೆಯಲ್ಲಿ ಠೇವಣಿ ಕಳೆದುಕೊಂಡು ಮನೆ ಸೇರಿದದ್ದಾರೆ. ತಪ್ಪು ತಿದ್ದುಕೊಳ್ಳದಿದ್ದರೆ ಇವರ ಸ್ಥಿತಿ ಕೂಡ ಇದೆ ಆಗುತ್ತದೆ. ಬಸನಗೌಡ ಪಾಟೀಲ್ ಯತ್ನಾಳ್ ಒಬ್ಬರೆ ಮಾತನಾಡಿಕೊಂಡು ಓಡಾಡುತ್ತಿದ್ದಾರೆ. ಆದರೆ ಇವರಿಗೆ ತಕ್ಕ ಶಾಸ್ತಿ ಆಗಲು ಕಾಲ ಬರುತ್ತದೆ. ಇವರಿಗೆ ಬುದ್ಧಿ ಕಲಿಸಲು ಪಕ್ಷದಲ್ಲಿ ಗಟ್ಟಿತನ ಇದ್ದು, ಅಶಿಸ್ತನ್ನು ಹೈಕಮಾಂಡ್ ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ ಎಂದು ಮತ್ತೊಮ್ಮೆ ಎಚ್ಚರಿಕೆ ನೀಡಿದರು.

ಅಣ್ಣ ತಮ್ಮಂದಿರ ಜಗಳ ಪರಿಹಾರ ಮಾಡಲು ಒಂದೇ ದಿನ ಕಠಿಣ ನಿರ್ಧಾರ ಮಾಡಲು ಆಗುವುದಿಲ್ಲ. ಬಿಜೆಪಿಯಲ್ಲಿನ ಈ ಬೆಳವಣಿಗೆ ಕೂಡ ಇದೇ ರೀತಿ ಇದೆ ಬಿ.ಸಿ.ಪಾಟೀಲ್ ತಿಳಿಸಿದರು. ಈ ವೇಳೆ ಮಾತನಾಡಿದ ಮಾಜಿ ಸಚಿವ ರೇಣುಕಾಚಾರ್ಯ, ತಪ್ಪು ತಿದ್ದುಕೊಳ್ಳಲಿದ್ದರೆ ಬಸವನಗೌಡ ಪಾಟೀಲ್ ಯತ್ನಾಳ್ ಅವರನ್ನು ಶೀಘ್ರದಲ್ಲೆ ಪಕ್ಷದಿಂದ ಉಚ್ಚಾಟನೆ ಮಾಡಲಾಗುತ್ತದೆ ಎಂದು ಹೇಳಿದರು.

ಯತ್ನಾಳ್ ಉಚ್ಚಾಟನೆಗೆ ಬಿಜೆಪಿ ಕಾರ್ಯಕರ್ತರ ಆಗ್ರಹ; ಬಿಜೆಪಿ ನಾಯಕರ ಪತ್ರಿಕಾಗೋಷ್ಠಿಯಲ್ಲಿ ರಾಜ್ಯ ನಾಯಕರಿಗೆ ತರಾಟೆ

ಮೈಸೂರು, ನ.30(ಬಿಎಲ್‌ಯು)– ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಿರುದ್ಧ ಸಿಡಿದೆದ್ದಿರುವ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದ ನಾಯಕರ ವಿರುದ್ಧ ಬಿಜೆಪಿ ಕಾರ್ಯಕರ್ತರು ಆಕ್ರೋಶ ಹೊರ ಹಾಕಿದ ಪ್ರಸಂಗ ಇಂದು ನಡೆಯಿತು.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಇಂದು ವಿಜಯೇಂದ್ರ ಬಣದ ಬಿಜೆಪಿ ನಾಯಕರು ಪತ್ರಿಕಾಗೋಷ್ಠಿ ನಡೆಸುತ್ತಿದ್ದ ಸಂದರ್ಭದಲ್ಲಿ ಯತ್ನಾಳ್ ವಿರುದ್ಧ ಕ್ರಮ ಕೈಗೊಳ್ಳದ ಬಗ್ಗೆ ಕಾರ್ಯಕರ್ತರು ಬಹಿರಂಗವಾಗಿ ತಮ್ಮ ಅಸಮಾಧಾನ ಹೊರ ಹಾಕಿದರು.

ಮಾಜಿ ಸಚಿವ ರೇಣುಕಾಚಾರ್ಯ ಮಾತನಾಡುತ್ತಿದ್ದ ವೇಳೆ ದಿಢೀರ್ ಮೇಲೆದ್ದ ಬಿಜೆಪಿ ಕಾರ್ಯಕರ್ತರು, ಬಸನಗೌಡ ಪಾಟೀಲ್ ಯತ್ನಾಳ್ ಇಷ್ಟೆಲ್ಲಾ ಮಾತನಾಡುತ್ತಿದ್ದರೂ ಹೈಕಮಾಂಡ್ ಏಕೆ ಇನ್ನು ಕ್ರಮ ಕೈಗೊಂಡಿಲ್ಲ ಎಂದು ಪ್ರಶ್ನಿಸಿದರು. ನಾವೆಲ್ಲಾ ಹತ್ತಾರು ವರ್ಷದಿಂದ ಬಿಜೆಪಿಯಲ್ಲಿ ಶಿಸ್ತಿನಿಂದ ಇದ್ದೇವೆ. ಆದರೆ ಬಿಜೆಪಿಯಲ್ಲಿ ಆಗುತ್ತಿರುವ ಈ ಬೆಳವಣಿಗೆಯಿಂದ ನಮಗೆ ಮುಜುಗರವಾಗಿದೆ. ಹೀಗಾದರೆ ಪಕ್ಷವನ್ನು ನಾವು ಯಾವ ರೀತಿ ಸಮರ್ಥನೆ ಮಾಡಿಕೊಳ್ಳುವುದು ಎಂದು ಮರು ಪ್ರಶ್ನಿಸಿದರು.

ಈ ಸಂದರ್ಭದಲ್ಲಿ ಕಾರ್ಯಕರ್ತರನ್ನು ಸಮಾಧಾನ ಮಾಡಲು ರೇಣುಕಾಚಾರ್ಯ ಸೇರಿದಂತೆ ಇತರರು ಯತ್ನಿಸಿದಾಗ ಯಾರ ಮಾತನ್ನು ಕೇಳದೆ ಕೋಪೋದ್ರಿಕ್ತರಾದ ಕಾರ್ಯಕರ್ತರು, ಯತ್ನಾಳ್‌ರನ್ನು ಉಚ್ಚಾಟನೆ ಮಾಡಿಬೀಸಾಕಿ. ಇದು ಏಕೆ ಸಾಧ್ಯವಾಗುತ್ತಿಲ್ಲ ಎಂದು ತರಾಟೆಗೆ ತೆಗೆದುಕೊಂಡರು.

ಇದರಿಂದ ಬಿಜೆಪಿ ನಾಯಕರ ಪತ್ರಿಕಾಗೋಷ್ಠಿಯಲ್ಲಿ ಕೆಲ ಕಾಲ ಗದ್ದಲದ ವಾತಾವರಣ ನಿರ್ಮಾಣವಾಯಿತು.

ಬಸನಗೌಡ ಪಾಟೀಲ್ ಯತ್ನಾಳ್ ಉಚ್ಚಾಟನೆಗೆ ಈಗಲೇ ಸಭೆಯಲ್ಲಿ ಸರ್ವಾನುಮತದ ತೀರ್ಮಾನ ಕೈಗೊಂಡು ಹೈಕಮಾಂಡ್‌ಗೆ ಕಳುಹಿಸಬೇಕು ಎಂದು ಪಟ್ಟು ಹಿಡಿದರು. ತರುವಾಯ ನಗರ ಬಿಜೆಪಿ ಅಧ್ಯಕ್ಷ ನಾಗೇಂದ್ರ ಸೇರಿದಂತೆ ಇತರೆ ನಾಯಕರು ಸ್ಥಳೀಯ ಕಾರ್ಯಕರ್ತರನ್ನು ಸಮಾದಾನ ಮಾಡಿದ ನಂತರ ಪತ್ರಿಕಾಗೋಷ್ಠಿ ಮುಂದುವರೆಯಿತು.

ಮೈಸೂರು ಮಿತ್ರ

ಭಾನುವಾರ 1 ಡಿಸೆಂಬರ್ 2024

ಅಭಿವೃದ್ಧಿ ವಿಚಾರದಲ್ಲಿ ಕನ್ನಡ ಪರ ಸಂಘಟನೆಗಳು ಸರ್ಕಾರದೊಂದಿಗೆ ಗಟ್ಟಿಯಾಗಿ ನಿಲ್ಲಬೇಕು

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮನವಿ

ಮೈಸೂರು, ನ.30(ಎಸ್‌ಪಿಎನ್)– ಕರ್ನಾಟಕದ ನೆಲ–ಜಲ–ನುಡಿ ರಕ್ಷಣೆಗಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಕಟಿಬದ್ಧವಾಗಿದೆ. ಅಭಿವೃದ್ಧಿ ವಿಷಯದಲ್ಲಿ ಸರ್ಕಾರದ ಜೊತೆ ಕನ್ನಡ ಪರ ಸಂಘಟನೆಗಳು ಗಟ್ಟಿಯಾಗಿ ನಿಲ್ಲಬೇಕು ಎಂದು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ .ಮಹದೇವಪ್ಪ ಮನವಿ ಮಾಡಿದರು.

ಮೈಸೂರು ಹೂಟಗಳ್ಳಿ ಸಂತೇಮಾಳ ಮೈದಾನದಲ್ಲಿ ಕನ್ನಡಾಂಬೆ ರಕ್ಷಣಾ ವೇದಿಕೆ ವತಿಯಿಂದ 69ನೇ ಕನ್ನಡ ರಾಜ್ಯೋತ್ಸವ ಅಂಗವಾಗಿ ನಡೆದ 'ಕನ್ನಡಾಂಬೆ ಹಬ್ಬ' ಹಾಗೂ ವಿವಿಧ ಕ್ಷೇತ್ರದ ಸಾಧಕರಿಗೆ ಕನ್ನಡಾಂಬೆ ರತ್ನ ಪ್ರಶಸ್ತಿ ವಿತರಿಸಿ ಮಾತನಾಡಿದರು.

ನಮ್ಮ ಹಿರಿಯರೂ ಹೋರಾಟದ ಫಲವಾಗಿ ವಿಶಾಲ ಕರ್ನಾಟಕ ಉದಯವಾಗಿದೆ. ದೇಶದ ಅಭಿವೃದ್ಧಿಯಲ್ಲಿ ಕರ್ನಾಟಕದ ಪಾಲೂ ಇದೆ. ಸರ್ಕಾರದ ಆಡಳಿತದಲ್ಲಿ ಕನ್ನಡವೇ ಪ್ರಧಾನವಾಗಿದೆ ಎಂದ ಅವರು, ಕನ್ನಡ ನಾಡು, ನುಡಿ, ಸಂಸ್ಕೃತಿ ಉಳಿವಿಗೆ ಶ್ರಮಿಸಿದ ಅನೇಕ ಸಾಧಕರನ್ನು ಈ ವೇದಿಕೆಯಲ್ಲಿ ಕನ್ನಡಾಂಬೆ ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷ ಬಿ.ಬಿ.ರಾಜಶೇಖರ್ ನೇತೃತ್ವದ ತಂಡ ಸನ್ಮಾನಿಸುತ್ತಿರುವುದು ಶ್ಲಾಘನೀಯ ಎಂದರು.

ಬಿಜೆಪಿ ಮುಖಂಡ ಕವೀಶ್‌ಗೌಡ ಮಾತನಾಡಿ, ಇತ್ತೀಚೆಗೆ ಮೈಸೂರಲ್ಲಿ ವಿವಿಧ ಎಂಎನ್‌ಸಿ ಕಂಪನಿಗಳು ಸ್ಥಾಪಿತವಾಗುತ್ತಿರುವುದು ಸ್ವಾಗತಾರ್ಹ. ಆದರೆ, ಈ ಕಂಪನಿಗಳು ಸ್ಥಳೀಯರಿಗೆ ಕೆಲಸ ನೀಡುವಲ್ಲಿ ಮೀನಾಮೇಷ ಎಣಿಸುತ್ತಿವೆ. ಇದನ್ನು ತಪ್ಪಿಸಲು ಸ್ಥಳೀಯರಿಗೆ ಶೇ.80ರಷ್ಟು ಉದ್ಯೋಗ ನೀಡುವಂತಹ ಕಾನೂನು ಜಾರಿಗೆ ತರಬೇಕು. ಕನ್ನಡ ಭಾಷೆ ಉಳಿಸಲು ಕನ್ನಡ ಪರ ಸಂಘಟನೆಗಳು ಇಂದಿಗೂ ಬೀದಿಗಿಳಿದು ಹೋರಾಟ ನಡೆಸುವ ಸನ್ನಿವೇಶ ಬಂದಿರುವುದು ಬೇಸರ ಸಂಗತಿ. ಇನ್ನಾದರೂ ಸರ್ಕಾರವೇ ಕನ್ನಡ ಉಳಿವಿಗೆ ಕಾನೂನು ರೂಪಿಸುವಂತೆ ಆಗ್ರಹಿಸಿದರು.

ಕನ್ನಡಾಂಬೆ ಪ್ರಶಸ್ತಿ ಪ್ರದಾನ: ಬೆಂಗಳೂರು ಜಯದೇವ ಆಸ್ಪತ್ರೆ ವೈದ್ಯ ಡಾ.ನಟರಾಜುಶೆಟ್ಟಿ, ಹಿರಿಯ ಪತ್ರಕರ್ತ ರಾಘವೇಂದ್ರ, ಕೆ.ಆರ್.ನಗರ ಮೂಳೆತಜ್ಞ ಡಾ.ಗೌತಮ್, ಇಂಡಿಯಾ ಬುಕ್ ಆಫ್ ರೆಕಾರ್ಡ್ ಮಾಡಿರುವ ವಿಹಿಕ, ಕನ್ನಡ ಪರ ಹೋರಾಟಗಾರ ಮಂಜುನಾಥ್ ಅವರಿಗೆ ಕನ್ನಡಾಂಬೆ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಗಮನ ಸೆಳೆದ ಸಾಂಸ್ಕೃತಿಕ ಕಾರ್ಯಕ್ರಮ: ಇದಕ್ಕೂ ಮುನ್ನ ಹೂಟಗಳ್ಳಿ ಸರ್ಕಾರಿ ಪ್ರೌಢ ಹಾಗೂ ಪ್ರಾಥಮಿಕ ಶಾಲೆ, ಹಿನಕಲ್ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಸುದರ್ಶನ ವಿದ್ಯಾಸಂಸ್ಥೆ, ಕೂರ್ಗಳ್ಳಿ ವಾಸವಿ ಕಾನ್ವೆಂಟ್, ರೋಟರಿ ಶಾಲೆ, ಇಲವಾಲ ಮತ್ತು ಬೆಳವಾಡಿ ಹಿರಿಯ ಪ್ರಾಥಮಿಕ ಶಾಲೆ, ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿ ಗಳು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರದರ್ಶಿಸಿದರು. ನಂತರ ವಿವಿಧ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ನಂತರ ಜೂ.ರಾಜ್‌ಕುಮಾರ್, ಜೂ.ವಿಷ್ಣುವರ್ಧನ್, ಡಿಂಗ್ರಿನಾಗರಾಜು ಸೇರಿದಂತೆ ವಿವಿಧ ಕಿರುತೆರೆ ಕಲಾವಿದರು ಮನರಂಜನಾ ಕಾರ್ಯಕ್ರಮ ನಡೆಸಿಕೊಟ್ಟರು.

ವೇದಿಕೆಯಲ್ಲಿ ಶಾಸಕ ಕೆ.ಹರೀಶ್‌ಗೌಡ, ರೈತಮುಖಂಡ ಚಂದನ್‌ಗೌಡ, ಮುಖಂಡರಾದ ಎಸ್.ರವಿ, ಟಿ.ಸುರೇಶ್ ಗೋಲ್ಡ್, ಶಿವಣ್ಣ, ಸಿ.ರವೀಂದ್ರ, ನೇತ್ರತಜ್ಞ ಡಾ.ಪವನ್‌ಜೋಶಿ, ಜಿಪಂ ಮಾಜಿ ಅಧ್ಯಕ್ಷ ಕೂರ್ಗಳ್ಳಿ ಮಹದೇವ್, ಸಾಮಾಜಿಕ ಹೋರಾಟಗಾರ ಡಾ.ಎಂ.ಪಿ.ವರ್ಷ, ಆತ್ಮಾನ್ ವೆಲ್‌ನೆಸ್ ಸೆಂಟರ್‌ನ ಡಾ.ಸತೀಶ್, ಉದ್ಯಮಿ ಡಾ.ಸಂದೇಶ್, ಜೆಡಿಎಸ್ ಮುಖಂಡ ಸುರೇಶ್, ರಾಷ್ಟ್ರೀಯ ಕುಸ್ತಿಪಟು ಮಂಜುನಾಥ್ ಸಿಂಗ್, ಕಾಂಗ್ರೆಸ್ ಮುಖಂಡ ಪಲಾವ್ ಮಹದೇವ್, ಬೀರಿಹುಂಡಿ ಬಸವಣ್ಣ, ಡೈರಿ ಸಿದ್ದರಾಜು, ಲಲಿತನಾಗೇಶ್, ನಾಗರತ್ನ ಸೇರಿದಂತೆ ಇತರರಿದ್ದರು.



ಕನ್ನಡಾಂಬೆ ರಕ್ಷಣಾ ವೇದಿಕೆ ವತಿಯಿಂದ 69ನೇ ಕನ್ನಡ ರಾಜ್ಯೋತ್ಸವ ಅಂಗವಾಗಿ ನಡೆದ 'ಕನ್ನಡಾಂಬೆ ಹಬ್ಬ' ಹಾಗೂ ವಿವಿಧ ಕ್ಷೇತ್ರದ ಸಾಧಕರಿಗೆ ಕನ್ನಡಾಂಬೆ ರತ್ನ ಪ್ರಶಸ್ತಿ ವಿತರಿಸುವ ಸಮಾರಂಭವನ್ನು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹಾಗೂ ಶಾಸಕ ಜಿ.ಟಿ.ದೇವೇಗೌಡರು ಉದ್ಘಾಟಿಸಿದರು.

ಕನ್ನಡ ನಿರ್ಲಕ್ಷಿಸಿ, ನಿರಾಭಿಮಾನಿಗಳಾಗಬೇಡಿ: ಜಿಟಿಡಿ

ಕನ್ನಡಿಗರು ಉದ್ಯೋಗ, ವ್ಯವಹಾರಿಕವಾಗಿ ಇಂಗ್ಲಿಷ್ ಸೇರಿದಂತೆ ಇತರೆ ಭಾಷೆಗಳನ್ನು ಕಲಿಯುವುದು ಅನಿವಾರ್ಯ. ಹಾಗಂತ ಕನ್ನಡ ಭಾಷೆಯನ್ನು ನಿರ್ಲಕ್ಷಿಸಿ, ನಿರಾಭಿಮಾನಿಗಳಾಗಬೇಡಿ ಎಂದು ಶಾಸಕ ಜಿ.ಟಿ.ದೇವೇಗೌಡರು ಕನ್ನಡಿಗರಿಗೆ ಕಿವಿಮಾತು ಹೇಳಿದರು. ಕರ್ನಾಟಕ ರಾಜಧಾನಿ ಬೆಂಗಳೂರಿನಲ್ಲಿ ಪ್ರಸ್ತುತ ಶೇ.65ರಷ್ಟು ಅನ್ಯಭಾಷಿಕರು ಆಕ್ರಮಿಸಿಕೊಂಡು ಅಲ್ಲಿನ ಉದ್ಯೋಗ, ಸಂಪತ್ತು ತಮ್ಮದಾಗಿಸಿಕೊಂಡಿದ್ದಾರೆ. ಇನ್ನುಳಿದ ಶೇ.35ರಷ್ಟು ಕನ್ನಡಿಗರು ಜೀವನ ಕಟ್ಟಿಕೊಳ್ಳಲಾಗದೇ ಬೀದಿಪಾಲಾಗುತ್ತಿದ್ದಾರೆ ಎಂದು ಆತಂಕ ವ್ಯಕ್ತಪಡಿಸಿದರು. ಕನ್ನಡ ಏಕೀಕರಣಕ್ಕಾಗಿ ಆಲೂರು ವೆಂಕಟರಾಯರು ಸೇರಿದಂತೆ ಅನೇಕರ ತ್ಯಾಗ– ಬಲಿದಾನವಾಗಿದೆ. ಕನ್ನಡ ನಮ್ಮ ಸ್ವಾಭಿಮಾನದ ಸಂಕೇತ. ಇದನ್ನು ಉಳಿಸುವ ನಿಟ್ಟಿನಲ್ಲಿ ಕನ್ನಡ ಪರ ಸಂಘಟನೆಗಳ ಪಾತ್ರ ಪ್ರಮುಖವಾಗಿದೆ. ಈ ಪಾತ್ರದಲ್ಲಿ ಕನ್ನಡಾಂಬೆ ರಕ್ಷಣಾ ವೇದಿಕೆ ಪಾತ್ರವೂ ಇದೆ.

ಹಾಗಾಗಿ ಕನ್ನಡ ಉಳಿಸುವುದು ಕೇವಲ ಸಂಘಟನೆಗಳ ಜವಾಬ್ದಾರಿ ಎಂದು ಸಾಮಾನ್ಯ ಜನರು ಮೈಮರೆತರೆ, ಮುದೊಂದು ದಿನ ಸಾಂಸ್ಕೃತಿಕ ನಗರಿ ಮೈಸೂರೂ ಅನ್ಯಭಾಷಿಕರ ಪಾಲಾಗುವ ಸಾಧ್ಯತೆ ಇದೆ. ಈಗಲೇ ಎಚ್ಚೆತ್ತುಕೊಂಡು ಕನ್ನಡ ಉಳಿವು–ನಲಿವು ನಿಮ್ಮ ಕೈಯಲ್ಲಿದೆ ಎಂದರು. ಜಾಗತೀಕರಣದಿಂದಾಗಿ ಭಾರತೀಯ ಭಾಷೆಗಳಾದ ತೆಲುಗು, ತಮಿಳು, ಮಳಯಾಳಂ ಭಾಷಾ ಜನರು ತಮ್ಮತಮ್ಮ ಭಾಷೆಗಳನ್ನು ಉಳಿಸಿಕೊಳ್ಳಲು ಟೊಂಕಕಟ್ಟಿ ನಿಲ್ಲುತ್ತಿದ್ದಾರೆ. ಆದರೆ, ಕನ್ನಡಿಗರು ಅನ್ಯಭಾಷಿಕರ ಜೊತೆಗೆ ಅವರ ಭಾಷೆಯನ್ನೇ ಮಾತನಾಡಲು ಮುಂದಾಗುತ್ತಿದ್ದಾರೆ. ಹಾಗಾಗಿ ನಮ್ಮ ಸ್ವಾಭಿಮಾನದ ಸಂಕೇತವಾಗಿರುವ ಕನ್ನಡವನ್ನು ನಮ್ಮ ಮಕ್ಕಳಿಗೂ ಕಲಿಸಿ, ಇತರರಿಗೂ ಕಲಿಸುವಂತೆ ತಾಕೀತು ಮಾಡಿದರು.

ಮುಂದಿನ ಏಪ್ರಿಲ್–ಮೇನಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಿ

ರಾಜ್ಯ ಕಾಂಗ್ರೆಸ್ ನಾಯಕರಿಗೆ ಎಐಸಿಸಿ ಸೂಚನೆ



ದೆಹಲಿಯಲ್ಲಿ ಎಐಸಿಸಿ ಕಾರ್ಯಕಾರಿಣಿ ಸಭೆ ನಡೆಯಿತು.

ಬೆಂಗಳೂರು, ನ.30 (ಕೆಎಂಶಿ)– ಜಿಲ್ಲಾ, ತಾಲೂಕು ಪಂಚಾಯತ್ ಹಾಗೂ ನಗರ ಸ್ಥಳೀಯ ಸಂಸ್ಥೆಗಳಿಗೆ ಏಪ್ರಿಲ್–ಮೇ ತಿಂಗಳಲ್ಲಿ ಚುನಾವಣೆ ನಡೆಸಿ ಎಂದು ಕಾಂಗ್ರೆಸ್ ವರಿಷ್ಠರು ರಾಜ್ಯ ಮುಖಂಡರಿಗೆ ಸೂಚಿಸಿದ್ದಾರೆ.

ಸ್ಥಳೀಯ ಸಂಸ್ಥೆ ಚುನಾವಣೆ ಮುಗಿಯುವವರೆಗೂ ಕೆಪಿಸಿಸಿ ಅಧ್ಯಕ್ಷರಾಗಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮುಂದುವರೆಯಲಿ, ಅದರಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ತಿಳಿಸಿದ್ದಾರೆ.

ಕೋರ್ಟ್ ಆದೇಶದನ್ವಯ ಯಾವುದೇ ಸಮಯದಲ್ಲಿ ಜಿಲ್ಲಾ ಮತ್ತು ತಾಲೂಕು ಪಂಚಾಯತ್‌ಗಳಿಗೆ ಚುನಾವಣೆ ಘೋಷಣೆಯಾಗಬಹುದು, ಸದ್ಯದ ಪರಿಸ್ಥಿತಿಯಲ್ಲಿ ಪಕ್ಷಕ್ಕೆ ಹೊಸ ಅಧ್ಯಕ್ಷರ ನೇಮಕವಾದರೆ ಕಾರ್ಯತಂತ್ರ ರೂಪಿಸುವುದು ಕಷ್ಟವಾಗಲಿದೆ. ಉಪಚುನಾವಣೆಯಲ್ಲಿ ಪಕ್ಷಕ್ಕೆ ಒಳ್ಳೆಯ ಗೆಲುವು ತಂದು ಕೊಟ್ಟಿದ್ದೀರಿ, ಇದೇ ಹುಮ್ಮಸ್ಸಿನಲ್ಲಿ, ನೀವು ಸ್ಥಳೀಯ ಕಾರ್ಯಕರ್ತರಿಗೆ ಅಧಿಕಾರ ನೀಡಲು ಮತ್ತು ಪಕ್ಷ ಸಂಘಟಿಸಲು ಚುನಾವಣೆಗಳನ್ನು ನಡೆಸಿ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪಕ್ಷದ ಅಧಿನಾಯಕ ರಾಹುಲ್ ಗಾಂಧಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಶಿವಕುಮಾರ್ ಅವರಿಗೆ ಸೂಚಿಸಿದ್ದಾರೆ.

ದೆಹಲಿಯಲ್ಲಿ ನಿನ್ನೆ ನಡೆದ ಎಐಸಿಸಿ ಕಾರ್ಯಕಾರಿಣಿ ಸಭೆಯಲ್ಲೇ ವರಿಷ್ಠರು ರಾಜ್ಯ ಚುನಾವಣಾ ಫಲಿತಾಂಶದ ಬಗ್ಗೆ ಮೆಚ್ಚುಗೆ ಸೂಚಿಸಿ, ಕಾರ್ಯಕರ್ತರಿಗೂ ಅಧಿಕಾರ ನೀಡಿ ಎಂದಿದ್ದಾರೆ.

ಸ್ಥಳೀಯ ಸಂಸ್ಥೆ ಚುನಾವಣೆಗಳು ಮುಗಿಯುವವರೆಗೆ ಯಾವುದೇ ರಾಜಕೀಯ ನಿರ್ಧಾರಗಳನ್ನು ಕೈಗೊಳ್ಳುವುದು ಬೇಡ, ತುಂಬಾ ಅವಶ್ಯವಿದ್ದರೆ, ನಮ್ಮ ಗಮನಕ್ಕೆ ತಂದು ಮಾಡಿ. ಕರ್ನಾಟಕದಲ್ಲಿ ಕಾಂಗ್ರೆಸ್ ಶಕ್ತಿ ಹೆಚ್ಚುತ್ತಿದೆ, ಪ್ರತಿಪಕ್ಷ ಬಿಜೆಪಿಯಲ್ಲಿ ಆಂತರಿಕ ಕಲಹ ಕಾಡುತ್ತಿದೆ, ಇಂತಹ ಸನ್ನಿವೇಶವನ್ನು ನೀವು ರಾಜಕೀಯವಾಗಿ ಬಳಸಿಕೊಳ್ಳಿ ಎಂದಿದ್ದಾರೆ.


ಈ ಚುನಾವಣೆಯಲ್ಲಿ ಪಕ್ಷಕ್ಕೆ ಯಶಸ್ಸು ಕಾಣುತ್ತದೆ, ಇದರಿಂದ ನಿಮಗೂ ಮತ್ತು ಕಾಂಗ್ರೆಸ್‌ಗೂ ಮತ್ತಷ್ಟು ಬಲ ಬರುತ್ತದೆ.

ನಿಗಮ–ಮಂಡಳಿಗಳಿಗೆ ಅಧ್ಯಕ್ಷರು, ಸದಸ್ಯರ ನೇಮಕ ಮಾಡುವ ಮೂಲಕ ಕಾರ್ಯಕರ್ತರನ್ನು ಸಂಪೂರ್ಣವಾಗಿ ತೃಪ್ತಿಪಡಿಸಲಾಗದು, ಅವರೂ ಜನರಿಂದ ಆಯ್ಕೆಗೊಂಡು ಸಾರ್ವಜನಿಕ ಸೇವೆ ಮಾಡಲಿ, ಇದರಿಂದ ಆಡಳಿತ ವಿಕೇಂದ್ರೀಕರಣವಾಗಿ ಮತ್ತಷ್ಟು ಅಭಿವೃದ್ಧಿಗೆ ಸಹಕಾರಿಯಾಗುತ್ತದೆ. ವಿಧಾನಮಂಡಲದ ಅಧಿವೇಶನ ಪೂರ್ಣಗೊಳ್ಳುವವರೆಗೂ ಅಬಕಾರಿ ಸಚಿವರ ಖಾತೆ ಬದಲಾವಣೆ ಮಾಡಬೇಡಿ ಎಂದು ಮುಖ್ಯಮಂತ್ರಿ ಅವರಿಗೆ ಖರ್ಗೆ ಸಭೆಯಲ್ಲೇ ತಿಳಿಸಿದ್ದಾರೆ.

ಖಾತೆ ಬದಲಾವಣೆ ಮಾಡಿ ಸದನ ಎದುರಿಸುವುದು ಅಷ್ಟು ಸುಲಭವಲ್ಲ, ಇದರಿಂದ ಅವರು ಆರೋಪಿ ಎಂಬುದು ಸಾಬೀತಾಗುತ್ತದೆ, ನೀವೇ ಇಕ್ಕಟ್ಟಿಗೆ ಸಿಲುಕುತ್ತೀರ ಎಂಬ ಸಲಹೆ ನೀಡಿದ್ದಾರೆ.

ಈ ಸಂದರ್ಭದಲ್ಲಿ ಸಿದ್ದರಾಮಯ್ಯ ಮಾತನಾಡಿ, ಬಿ.ನಾಗೇಂದ್ರ ಅವರಿಗೆ ಭರವಸೆ ನೀಡಿದ್ದೇನೆ, ಅವರೊಬ್ಬರನ್ನು ಖಾಲಿ ಇರುವ ಸಚಿವ ಸ್ಥಾನಕ್ಕೆ ಭರ್ತಿ ಮಾಡಿಕೊಳ್ಳುವುದಾಗಿ ಹೇಳಿದಾಗ, ಪರಿಸ್ಥಿತಿ ನೋಡಿಕೊಂಡು ನಿರ್ಧಾರ ಕೈಗೊಳ್ಳಿ ಎಂದು ಸಲಹೆ ನೀಡಿದ್ದಾರೆ.

ಯದುವೀರ್ ಒಡೆಯರ್‌ಗೆ ಸನ್ಮಾನ...



ಶಾಸಕ ಟಿ.ಎಸ್.ಶ್ರೀವತ್ಸ ಅವರ ನೂತನ ಕಚೇರಿಗೆ ಭೇಟಿ ನೀಡಿ, ಶುಭ ಹಾರೈಸಿದ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಯದುವೀರ್ ಒಡೆಯರ್ ಅವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಕ್ಷೇತ್ರದ ಅಧ್ಯಕ್ಷ ಗೋಪಾಲ್‌ರಾಜೇ ಅರಸ್, ಪ್ರಧಾನ ಕಾರ್ಯದರ್ಶಿ ಜಯರಾಮ್, ಜಯಶಂಕರ್, ಪ್ರದೀಪ್‌ಕುಮಾರ್, ಕಿಶೋರ್ ಉಪಸ್ಥಿತರಿದ್ದರು.

ದೆಹಲಿ ಮಾಜಿ ಸಿಎಂ ಕೇಜ್ರಿವಾಲ್ ಮೇಲೆ ಲಿಕ್ವಿಡ್ ಎರಚಿದ ವ್ಯಕ್ತಿ ಬಂಧನ

ನವದೆಹಲಿ, ನ.30– ದೆಹಲಿಯ ಗ್ರೇಟರ್ ಕೈಲಾಶ್ ಪ್ರದೇಶದಲ್ಲಿ ಶನಿವಾರ ನಡೆದ ಪಾದಯಾತ್ರೆ ವೇಳೆ ದೆಹಲಿ ಮಾಜಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರ ಮೇಲೆ ವ್ಯಕ್ತಿಯೊಬ್ಬ ಲಿಕ್ವಿಡ್ ಎರಚಿದ್ದು, ಆತನನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಬೆಳವಣಿಗೆಗೆ ಪ್ರತಿಕ್ರಿಯಿಸಿದ ಎಎಪಿ, ಮಾಜಿ ಮುಖ್ಯಮಂತ್ರಿಯೊಬ್ಬರು ರಾಷ್ಟ್ರ ರಾಜಧಾನಿಯಲ್ಲಿ ಸುರಕ್ಷಿತವಾಗಿಲ್ಲದಿದ್ದರೆ, ಇನ್ನು ಜನಸಾಮಾನ್ಯರ ಗತಿ ಏನು? ಎಂದು ಪ್ರಶ್ನಿಸಿದೆ.

ಕೇಜ್ರಿವಾಲ್ ಅವರು ತಮ್ಮ ಭದ್ರತಾ ಸಿಬ್ಬಂದಿ ಹಿಂದೆ ನಿಂತಿರುವ ಜನರತ್ತ ಕೈಬೀಸುತ್ತಿದ್ದ ವೇಳೆ ಅವರ ಬಳಿಗೆ ಬಂದ ವ್ಯಕ್ತಿಯೊಬ್ಬ ಮಾಜಿ ಸಿಎಂ ಮೇಲೆ ದ್ರವವನ್ನು ಎರಚಿದ. ತಕ್ಷಣ ಭದ್ರತಾ ಸಿಬ್ಬಂದಿ ಆತನನ್ನು ತಡೆದರು. ನಂತರ ಕೇಜ್ರಿವಾಲ್ ಮತ್ತು ಅವರ ಜೊತೆಗಿದ್ದ ಭದ್ರತಾ ಸಿಬ್ಬಂದಿ ಮುಖ ಒರೆಸಿಕೊಳ್ಳುತ್ತಿರುವುದು ವಿಡಿಯೋದಲ್ಲಿ ಸೆರೆಯಾಗಿದೆ. ಅದೇ ಪ್ರದೇಶದ ನಿವಾಸಿಯಾಗಿರುವ ಲಿಕ್ವಿಡ್ ಎರಚಿದ ವ್ಯಕ್ತಿಯನ್ನು ಸ್ಥಳೀಯ ಪೊಲೀಸ್ ಠಾಣೆಗೆ ಕರೆದೊಯ್ಯಲಾಗಿದೆ.

ಕೊಲೆ ಯತ್ನ, ಸುಪಾರಿ ಆರೋಪ: ಮುನಿರತ್ನ ವಿರುದ್ಧ ಮತ್ತೊಂದು ಎಫ್‌ಐಆರ್


ಬೆಂಗಳೂರು, ನ.30– ಜಾತಿ ನಿಂದನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸದ್ಯ ಷರತ್ತು ಬದ್ಧ ಜಾಮೀನಿನ ಮೇಲೆ ಹೊರಗಿರುವ ಆರ್‌ಆರ್ ನಗರ ಶಾಸಕ ಮುನಿರತ್ನ ವಿರುದ್ಧ ಇದೀಗ ಮತ್ತೊಂದು ಎಫ್‌ಐಆರ್ ದಾಖಲಾಗಿದೆ.



ಕೊಲೆ ಯತ್ನ, ಸುಪಾರಿ ಆರೋದ ಮೇರೆಗೆ ಮಾಜಿ ಕಾರ್ಪೊರೇಟರ್ ಮಂಜುಳಾ ಪತಿ ನಾರಾಯಣ ಸ್ವಾಮಿ ನೀಡಿದ ದೂರನ್ನು ಆಧರಿಸಿ ನಂದಿನಿ ಲೇಔಟ್ ಪೊಲೀಸ್ ಠಾಣೆಯಲ್ಲಿ ಮುನಿರತ್ನ ಹಾಗೂ ಕೆಲವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಜಾತಿ ನಿಂದನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಶನಿವಾರ ಎಸ್‌ಐಟಿ ಅಧಿಕಾರಿಗಳು ಜನಪ್ರತಿನಿಧಿಗಳ ನ್ಯಾಯಾಲಯಕ್ಕೆ 590 ಪುಟಗಳ ಚಾರ್ಜ್‌ಶೀಟ್ ಸಲ್ಲಿಸಿದ್ದಾರೆ. ಇದೇ ದಿನವೇ ಮತ್ತೊಂದು ಎಫ್‌ಐಆರ್ ದಾಖಲಾಗಿದೆ. ಹೀಗಾಗಿ ಮುನಿರತ್ನಗೆ ಮತ್ತಷ್ಟು ಸಂಕಷ್ಟ ಎದುರಾಗಿದೆ. ಸದ್ಯ ನಂದಿನಿ ಲೇಔಟ್ ಪೊಲೀಸರಿಂದ ತನಿಖೆ ನಡೆಯುತ್ತಿದೆ.

ಶ್ರೀ ಚಂದ್ರಶೇಖರ ಸ್ವಾಮೀಜಿ ವಿರುದ್ಧ ಎಫ್‌ಐಆರ್‌ಗೆ ಖಂಡನೆ

ಮೈಸೂರು, ನ.30(ಜಿಎ)–ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಶ್ರೀ ಚಂದ್ರಶೇಖರ ಸ್ವಾಮೀಜಿ ತಮ್ಮ ಹೇಳಿಕೆ ಹಿಂಪಡೆದಿದ್ದಾರೆ. ಆದರೂ ಅವರ ವಿರುದ್ಧ ದುರುದ್ದೇಶಪೂರ್ವಕವಾಗಿ ಕೇಸು ದಾಖಲಿಸಿ ಎಫ್‌ಐಆರ್ ದಾಖಲಿಸಿರುವುದನ್ನು ಜಿಲ್ಲಾ ಬಿಜೆಪಿ ರೈತ ಮೋರ್ಚಾ ಅಧ್ಯಕ್ಷ ಹಾಗೂ ಕರ್ನಾಟಕ ವಸ್ತು ಪ್ರಾಧಿಕಾರದ ಮಾಜಿ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ ರಾಜ್ಯ, ಖಂಡಿಸಿದ್ದಾರೆ.



ಶ್ರೀನಿವಾಸ್‌ಗೌಡ

ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಬೆಂಬಲಿಸಿ ಹೇಳಿಕೆ ನೀಡುತ್ತಾ, ಜನ ದಂಗೆ ಏಳುತ್ತಾರೆ ಎಂದು ಕನಕ ಗುರು ಪೀಠದ ಸ್ವಾಮೀಜಿ ಕರೆ ಕೊಟ್ಟಾಗ, ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ನನ್ನ ಬಂಧಿಸಿದರೆ ಜನ ದಂಗೆ ಏಳ್ತಾರೆ ಎಂದು ಹೇಳುವ ಮೂಲಕ ಸಾಮಾಜಿಕ ಅಶಾಂತಿಗೆ ಕರೆ ಕೊಟ್ಟಿದ್ದರ ಬಗ್ಗೆ ಎಫ್‌ಐಆರ್ ದಾಖಲಾಗಲಿಲ್ಲ ಏಕೆ ಎಂದು ಪ್ರಶ್ನಿಸಿದ್ದಾರೆ.

ಸಚಿವ ಜಮೀರ್ ಅಹಮದ್ ಸಾರ್ವಜನಿಕ ವೇದಿಕೆಯಲ್ಲಿ ದೇವೇಗೌಡರ ಕುಟುಂಬವನ್ನು ಮುಸ್ಲಿಮರು ಸೇರಿ ಖರೀದಿಸುತ್ತೇವೆ ಎಂದು ಹೇಳಿದಾಗ ಎಫ್‌ಐಆರ್ ದಾಖಲಾಗಲಿಲ್ಲ. ಆದರೆ ಮುಸ್ಲಿಮರು ಈ ನೆಲದ ಕಾನೂನಿಗೆ ಗೌರವಿಸದಿದ್ದರೆ ಅದರ ಅಡಿಯಲ್ಲಿ ನಡೆಯದಿದ್ದರೆ ಅವರ ಮತದಾನದ ಹಕ್ಕು ಕಸಿಯುವುದು ಸೂಕ್ತ ಎಂಬ ಹೇಳಿಕೆ ಮೇಲೆ ಚಂದ್ರಶೇಖರನಾಥ ಸ್ವಾಮೀಜಿಯವರ ಮೇಲೆ ಎಫ್‌ಐಆರ್ ದಾಖಲಿಸಿದ್ದಾರೆ ಎಂದರೆ ಅದು ಈ ಸರ್ಕಾರದ ದೃಷ್ಟಿಕೋನದ ಪ್ರದರ್ಶನ ಅಷ್ಟೇ ಎಂದು ಕಿಡಿಕಾರಿದ್ದಾರೆ.

ಒಕ್ಕಲಿಗ ವಿರೋಧಿ ಕಾಂಗ್ರೆಸ್ ಸರ್ಕಾರದ ನಡೆಗೆ ನಮ್ಮ ಧಿಕ್ಕಾರವಿದೆ. ಶ್ರೀಗಳ ಮೇಲೆ ದಾಖಲಿಸಿರುವ ಎಫ್‌ಐಆರ್ ವಿಚಾರವಾಗಿ ಕಾಂಗ್ರೆಸ್‌ನಲ್ಲಿರುವ ಒಕ್ಕಲಿಗ ಮಂತ್ರಿಗಳು ಮತ್ತು ಶಾಸಕರು ಜಾಣ ಮೌನಕ್ಕೆ ಶರಣಾಗಿರುವುದು ನಾಚಿಕೆಗೇಡು, ಮುಂದಿನ ದಿನಗಳಲ್ಲಿ ಒಕ್ಕಲಿಗ ಕುಲ ಬಾಂಧವರು ತಕ್ಕಪಾಠ ಕಲಿಸುವುದು ನಿಶ್ಚಿತ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜನರ ಬದುಕು ಹಸನಾಗಿಸಲು ಸಹಕಾರ ಸಂಘಗಳ ಪಾತ್ರ ಮುಖ್ಯ

ಚರ್ಚಾ, ಪ್ರಬಂಧ ಸ್ಪರ್ಧೆಯಲ್ಲಿ ಮೈಸೂರು ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಹೆಚ್.ವಿ.ರಾಜೀವ್ ಅಭಿಮತ

ಮೈಸೂರು,ನ.30(ಜಿಎ)–ಜನಸಾಮಾನ್ಯರ ಬದುಕು ಹಸನಾಗಿಸಲು ಸಹಕಾರ ಸಂಘಗಳು ಮುಖ್ಯ ಪಾತ್ರ ವಹಿಸಲಿದ್ದು, ಸುಸ್ಥಿರ ಅಭಿವೃದ್ಧಿಯ ಗುರಿ ಸಾಧನೆ ಯಲ್ಲಿ ಸಹಕಾರ ಸಂಸ್ಥೆಗಳ ಪಾತ್ರ ಮಹತ್ವದ್ದಾಗಿದೆ ಎಂದು ಮೈಸೂರು ಜಿಲ್ಲಾ ಸಹಕಾರ ಒಕ್ಕೂಟ ಅಧ್ಯಕ್ಷ ಎಚ್.ವಿ.ರಾಜೀವ್ ಅಭಿಪ್ರಾಯಪಟ್ಟರು.

ಮೈಸೂರು ಜಿಲ್ಲಾ ಯೂನಿಯನ್ ಸಭಾಂಗಣ ದಲ್ಲಿ ಶನಿವಾರ ರಾಜ್ಯ ಸಹಕಾರ ಮಹಾಮಂಡಳಿ, ಮೈಸೂರು ಜಿಲ್ಲಾ ಸಹಕಾರ ಒಕ್ಕೂಟ, ಸಹಕಾರ ಇಲಾಖೆ, ಪ್ರಮತಿ ಹಿಲ್‌ವ್ಯೂ ಶಾಲೆ ಸಂಯುಕ್ತಾಶ್ರಯ ದಲ್ಲಿ ನಡೆದ ಸಹಕಾರ ವಿಷಯ ಕುರಿತ ಚರ್ಚಾ ಮತ್ತು ಪ್ರಬಂಧ ಸ್ಪರ್ಧೆ ವಿಜೇತರ ಬಹುಮಾನ ವಿತರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಇಂದಿನ ಚರ್ಚಾ ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳು ಪರ ವಿರೋಧ ಕುರಿತು ನಿರಂತರವಾಗಿ ವಿಚಾರಧಾರೆ ಮಂಡಿಸಿದ್ದು, ಸಂತಸ ತಂದಿದೆ. ರಾಜ್ಯದ ಉದ್ದಗಲಕ್ಕೂ ಈ ರೀತಿಯ ಕಾರ್ಯಕ್ರಮ ನಡೆಯಬೇಕು. ಗ್ರಾಮೀಣ, ನಗರ ಸೇರಿದಂತೆ ಎಲ್ಲೆಡೆಯಿಂದ ವಿದ್ಯಾರ್ಥಿಗಳು ಭಾಗವಹಿಸಿದ್ದು ವಿಶೇಷ ಎಂದ ಅವರು, ಸಹಕಾರ ಕ್ಷೇತ್ರ ಸದೃಢವಾಗಲು ಸಂಸ್ಥೆಯ ಬಗ್ಗೆ ಗೌರವ ಇರಬೇಕು. ಸಂಸ್ಥೆಯ ಏಳಿಗೆಗೆ ಪ್ರಾಮಾಣಿಕತೆಯಿಂದ ಕಾರ್ಯ ನಿರ್ವಹಿಸಬೇಕು ಎಂದು ತಿಳಿಸಿದರು.

ಮೈಸೂರು ಪ್ರಾಂತದ ಸಹಕಾರ ಸಂಘಗಳ ಜಂಟಿ ನಿಬಂಧಕ ಸಿ.ಪ್ರಸಾದ್ ರೆಡ್ಡಿ ಮಾತನಾಡಿ, ಸಹಕಾರ ಇಲ್ಲದೆ ಯಾವುದೇ ಅಭಿವೃದ್ಧಿ ಇಲ್ಲ. ಇಂತಹ ಸಹ ಕಾರ ಸಂಬಂಧಪಟ್ಟ ವಿಷಯ ಕುರಿತು ಸ್ಪರ್ಧೆ ಆಯೋಜಿಸಿ ಯುವ ಪೀಳಿಗೆಗೆ ಮನವರಿಕೆ ಮಾಡುವ ಕೆಲಸ ಆಗಬೇಕಿದೆ. ವಿದ್ಯಾರ್ಥಿಗಳ ಜ್ಞಾನದ ವೃದ್ಧಿಗೆ ಈ ಸ್ಪರ್ಧೆ ಸಹಕಾರಿ. ಸಹಕಾರ ಬಗೆಗೆ ಹೆಚ್ಚಿನ ಮಾಹಿತಿ ತಿಳಿದುಕೊಳ್ಳುವ ಪ್ರಯತ್ನ ಮಾಡಬೇಕು. ನಿಮ್ಮ ಸುತ್ತಮುತ್ತಲಿನವರಲ್ಲಿ ಅರಿವು ಮೂಡಿಸಿ ಸಹಕಾರ ಕ್ಷೇತ್ರಕ್ಕೆ ಕೊಡುಗೆ ನೀಡುವಲ್ಲಿ ಪ್ರಮುಖ ಪಾತ್ರ ವಹಿಸಬೇಕು ಎಂದು ಸಲಹೆ ನೀಡಿದರು. ಸಹಕಾರಿ ಕ್ಷೇತ್ರ ಬಲಪಡಿಸಿ ಅಭಿವೃದ್ಧಿ ಸಾಧಿಸಬೇಕು. ಇದಕ್ಕಾಗಿ ಎಲ್ಲರ ಸಹಕಾರ ಅಗತ್ಯ. ಇಂದು ಸಹಕಾರ ಕ್ಷೇತ್ರ ಬೆಳವಣಿಗೆಯಾಗುತ್ತಿದ್ದು, ಸಹಕಾರಿ ಸಂಘಗಳು ಸಾಕಷ್ಟಿವೆ. ಈ ಮೂಲಕ ರೈತರ, ಬಡವರ ಶ್ರೇಯೋಭಿವೃದ್ಧಿಗೆ ಶ್ರಮಿಸುತ್ತಿರುವುದು ಹೆಮ್ಮೆಯ ವಿಷಯ ಎಂದು ಹೇಳಿದರು.

ಪ್ರಬಂಧ, ಚರ್ಚಾ ಸ್ಪರ್ಧಾ ವಿಜೇತರು: ಪ್ರಬಂಧ ಸ್ಪರ್ಧೆ (ಪ್ರೌಢಶಾಲೆ ವಿದ್ಯಾರ್ಥಿಗಳು): ಪೀಪಲ್ಸ್ ಪಾರ್ಕ್‌ನ ಸರ್ಕಾರಿ ಬಾಲಕಿಯರ ಜೂನಿಯರ್ ಕಾಲೇಜು ವಿದ್ಯಾರ್ಥಿನಿ ಬಿ.ಬಿ.ಕುಲ್ಸುಮ್ (ಪ್ರಥಮ). ಹುಣಸೂರು ತೆಂಕಲಕೊಪ್ಪಲು ಸರ್ಕಾರಿ ಪ್ರೌಢ ಶಾಲೆ ವಿದ್ಯಾರ್ಥಿನಿ ಎಂ.ಭಾರ್ಗವಿ (ದ್ವಿತೀಯ). ಹುಣ ಸೂರು ಶಾಲೆ ಶಾಸ್ತ್ರೀ ಪಬ್ಲಿಕ್ ಶಾಲಾ ವಿದ್ಯಾರ್ಥಿನಿ ಯೋಗಿತಶ್ರೀ (ತೃತೀಯ). ಚರ್ಚಾ ಸ್ಪರ್ಧೆ (ಪಿಯುಸಿ ವಿದ್ಯಾರ್ಥಿಗಳು): 'ಸಹಕಾರ ವಲಯದ ಪ್ರಾಥಮಿಕ ಸಂಘಗಳ ಬಲವರ್ಧನೆಯಿಂದ ಮಾತ್ರವೇ ಸಹಕಾರ ಚಳವಳಿ ಸದೃಢಗೊಳ್ಳಲ್ಲದು' ವಿಷಯದ ಪರ: ಪದವಿ ಡಿ.ಬನುಮಯ್ಯ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿನಿ ನಿಮಿತಾ (ಪ್ರಥಮ). ಸದ್ವಿದ್ಯಾ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿನಿ ಪ್ರಮಾ ಡಿ.ರಜೋಲಿ (ದ್ವಿತೀಯ). ವಿಷಯದ ವಿರೋಧ: ವಾಣಿವಿಲಾಸ ಅರಸು ಪದವಿ ಪೂರ್ವ ಕಾಲೇಜು ವಿದ್ಯಾರ್ಥಿನಿ ವಿ.ಇ.ಲತಾ (ಪ್ರಥಮ). ಎಸ್‌ಡಿಎಂ ಮತ್ತು ಎಂಎಂಕೆ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿನಿ ಸಿಂಚನಾ (ದ್ವಿತೀಯ). ತೀರ್ಪುಗಾರರಾಗಿ ಪುಟ್ಟಸ್ವಾಮಿ, ಬಿ.ಎಸ್.ಚಂದ್ರ ಶೇಖರ್, ಮಂಜುಪ್ರಸಾದ್ ಪಾಲ್ಗೊಂಡಿದ್ದರು. ಮೈಸೂರು ಜಿಲ್ಲಾ ಸಹಕಾರ ಒಕ್ಕೂಟ ಉಪಾಧ್ಯಕ್ಷ ಬಿ.ಎನ್.ಸದಾನಂದ, ನಿರ್ದೇಶಕ ವೈ ಭೈರಪ್ಪ, ರಾಮೇಗೌಡ, ಸಿಇಒ ಎಂ.ವಿಶ್ವೇಶ್ವರಯ್ಯ, ಕೆಐಸಿಎಂ ಪ್ರಾಂಶುಪಾಲ ಚಂದ್ರಶೇಖರ್ ಉಪಸ್ಥಿತರಿದ್ದರು.



ಮೈಸೂರು ಜಿಲ್ಲಾ ಯೂನಿಯನ್ ಸಭಾಂಗಣದಲ್ಲಿ ಶನಿವಾರ ರಾಜ್ಯ ಸಹಕಾರ ಮಹಾಮಂಡಳಿ, ಮೈಸೂರು ಜಿಲ್ಲಾ ಸಹಕಾರ ಒಕ್ಕೂಟ, ಸಹಕಾರ ಇಲಾಖೆ, ಪ್ರಮತಿ ಹಿಲ್‌ವ್ಯೂ ಶಾಲೆ ಸಂಯುಕ್ತಾಶ್ರಯದಲ್ಲಿ ನಡೆದ ಸಹಕಾರ ವಿಷಯ ಕುರಿತ ಚರ್ಚಾ ಮತ್ತು ಪ್ರಬಂಧ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ದೇಶ - ವಿದೇಶ

ಬಾಂಗ್ಲಾದೇಶದಲ್ಲಿ ಮೂರು ಹಿಂದೂ ದೇವಾಲಯಗಳ ಧ್ವಂಸ

ಢಾಕಾ: ಬಾಂಗ್ಲಾದೇಶದ ಚಟ್ಟೋಗ್ರಾಮ್‌ನಲ್ಲಿ ನಡೆಯುತ್ತಿರುವ ಪ್ರತಿಭಟನೆ ಮತ್ತು ಹಿಂಸಾಚಾರದ ನಡುವೆ ಗುಂಪೊಂದು ಮೂರು ಹಿಂದೂ ದೇವಾಲಯಗಳನ್ನು ಧ್ವಂಸಗೊಳಿಸಿರುವ ಆತಂಕಕಾರಿ ಘಟನೆ ನಡೆದಿದೆ. ಸಂತಾನೇಶ್ವರ ಮಾತ್ರಿ ದೇವಸ್ಥಾನ, ಶೋನಿ ದೇವಸ್ಥಾನ ಮತ್ತು ಶಾಂತನೇಶ್ವರಿ ಕಾಲಿಬರಿ ದೇವಸ್ಥಾನವನ್ನು ಗುರಿಯಾಗಿಸಿಕೊಂಡು ಶುಕ್ರವಾರ ಮಧ್ಯಾಹ್ನ 2.30ರ ಸುಮಾರಿಗೆ ಹರೀಶ್ ಚಂದ್ರ ಮುನ್ಸೆಫ್ ಲೇನ್ ಪ್ರದೇಶದಲ್ಲಿ ದಾಳಿ ನಡೆದಿದೆ. ವರದಿಗಳ ಪ್ರಕಾರ, ನೂರಾರು ವ್ಯಕ್ತಿಗಳ ಗುಂಪು ಶುಕ್ರವಾರದ ಪ್ರಾರ್ಥನೆಯಲ್ಲಿ ಭಾಗವಹಿಸಿದ ನಂತರ ದೇವಾಲಯಗಳ ದ್ವಾರಗಳಿಗೆ ಹಾನಿಯನ್ನುಂಟು ಮಾಡಿದೆ. ಗೇಟ್‌ಗಳನ್ನು ಮುರಿದಿದ್ದು, ದೇವಾಲಯದ ಇತರ ಭಾಗಗಳನ್ನು ಧ್ವಂಸಗೊಳಿಸಲಾಗಿದೆ. ದಾಳಿ ಬಗ್ಗೆ ಖಚಿತಪಡಿಸಿರುವ ಕೊತ್ವಾಲಿ ಪೊಲೀಸ್ ಠಾಣೆ ಮುಖ್ಯಸ್ಥ ಅಬ್ದುಲ್ ಕರೀಂ, ದಾಳಿಕೋರರು ಉದ್ದೇಶಪೂರ್ವಕವಾಗಿಯೇ ದೇವಾಲಯಗಳಿಗೆ ಹಾನಿಯನ್ನುಂಟು ಮಾಡುವ ಪ್ರಯತ್ನ ಮಾಡಿದ್ದಾರೆ ಎಂದರು. ದಾಳಿಕೋರರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಿದ್ದಂತೆ ಹಿಂದೂ ವಿರೋಧಿ ಮತ್ತು ಇಸ್ಕಾನ್ ವಿರೋಧಿ ಘೋಷಣೆಗಳನ್ನು ಕೂಗಲು ಪ್ರಾರಂಭಿಸಿದರು ಎಂದು ಸಂತಾನೇಶ್ವರ ಮಾತ್ರಿ ದೇವಸ್ಥಾನದ ಆಡಳಿತ ಸಮಿತಿ ಖಾಯಂ ಸದಸ್ಯ ತಪನ್ ದಾಸ್, ಘೋರ ಘಟನೆಗಳನ್ನು ವಿವರಿಸಿದರು.

ಚುನಾವಣಾ ಆಯೋಗಕ್ಕೆ ಅವಹೇಳನ: ಭಾಯಿ ಜಗತಾಪ್ ವಿರುದ್ಧ ದೂರು ದಾಖಲು

ನವದೆಹಲಿ: ಕೇಂದ್ರ ಚುನಾವಣಾ ಆಯೋಗದ ವಿರುದ್ಧ ಅವಹೇಳನಕಾರಿ ಹೇಳಿಕೆ ಹಿನ್ನೆಲೆಯಲ್ಲಿ ಕಾಂಗ್ರೆಸ್ ನಾಯಕ ಭಾಯಿ ಜಗತಾಪ್ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹಿಸಿ ಬಿಜೆಪಿ ನಾಯಕ ಹಾಗೂ ಮಾಜಿ ಸಂಸದ ಕಿರೀಟ್ ಸೋಮಯ್ಯ ಚುನಾವಣಾ ಆಯೋಗ ಮತ್ತು ಮುಂಬೈ ಪೊಲೀಸ್ ಆಯುಕ್ತರಿಗೆ ದೂರು ಸಲ್ಲಿಸಿದ್ದಾರೆ.



ಜಗತಾಪ್ ಹೇಳಿಕೆಯನ್ನು ಖಂಡಿಸಿದ ಅವರು, ಸಾಂವಿಧಾನಿಕ ಸಂಸ್ಥೆಯು ಇಂತಹ ಅಗೌರವವನ್ನು ಸಹಿಸಲು ಸಾಧ್ಯವಿಲ್ಲ. ಜಗತಾಪ್ ಚುನಾವಣಾ ಆಯೋಗವನ್ನು ನಾಯಿಗೆ ಹೋಲಿಸಿದ್ದಾರೆ. ಈ ರೀತಿಯ ನಿಂದನೆ ಮತ್ತು ಅಗೌರವವು ಸಂಪೂರ್ಣವಾಗಿ ತಪ್ಪು. ಇಂತಹ ಅವಮಾನ ಸಹಿಸಲು ಸಾಧ್ಯವಿಲ್ಲ, ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಸೋಮಯ್ಯ ಆಗ್ರಹಿಸಿದ್ದಾರೆ.

ಚುನಾವಣಾ ಆಯೋಗವನ್ನು ನಾಯಿಗೆ ಹೋಲಿಸಿ ಜಗತಾಪ್ ಹೇಳಿಕೆ ನೀಡಿದ ನಂತರ ವಿವಾದ ಭುಗಿಲೆದ್ದಿದೆ. ಚುನಾವಣಾ ಆಯೋಗ ನಾಯಿಯಂತೆ ವರ್ತಿಸುತ್ತಿದ್ದು, ಮೋದಿ ಅವರ ಬಂಗಲೆ ಮುಂದೆ ಕೂತಿರುವ ನಾಯಿ ಎಂದು ಹೇಳಿದ್ದಾರೆ. ಚುನಾವಣಾ ಆಯೋಗ ಹಾಗೂ ಇತರ ಏಜೆನ್ಸಿಗಳನ್ನು ಕೇಂದ್ರ ಸರ್ಕಾರ ದುರುಪಯೋಗಪಡಿಸಿಕೊಳ್ಳುತ್ತಿದೆ ಎಂಬರ್ಥದಲ್ಲಿ ಜಗತಾಪ್ ನೀಡಿರುವ ಹೇಳಿಕೆ ವ್ಯಾಪಕ ವಿವಾದಕ್ಕೆ ಕಾರಣವಾಗಿದೆ.

ರಷ್ಯಾದೊಂದಿಗೆ ಯುದ್ಧದ ವೆಚ್ಚ ಭರಿಸಲು ಉಕ್ರೇನ್ ಜನರ ಮೇಲೆ ಯುದ್ಧದ ತೆರಿಗೆ ಜಾರಿ

ಕೀವ್: ಕಳೆದ 3 ವರ್ಷದಿಂದ ಸತತವಾಗಿ ರಷ್ಯಾದೊಂದಿಗೆ ಯುದ್ಧ ನಡೆಸುತ್ತಿರುವ ಉಕ್ರೇನ್ ಸರ್ಕಾರ ಇದೀಗ ಬೊಕ್ಕಸವನ್ನು ತುಂಬಿಸುವ ಸಲುವಾಗಿ ಜನರ ಮೇಲೆ ಯುದ್ಧ ತೆರಿಗೆ ಹೇರಲು ನಿರ್ಧರಿಸಿದೆ. ಅದರನ್ವಯ ವೈಯಕ್ತಿಕ ತೆರಿಗೆ ಪ್ರಮಾಣವನ್ನು ಶೇ.1.5ರಿಂದ ಶೇ.5ಕ್ಕೆ ಹೆಚ್ಚಿಸಿದೆ. ಜೊತೆಗೆ ಲಕ್ಷಾಂತರ ಉದ್ಯಮಿಗಳಿಗೂ ಹೊಸದಾಗಿ ತೆರಿಗೆ ಹಾಕಿದೆ. ಡಿ.1ರಿಂದ ಹೊಸ ನಿಯಮ ಜಾರಿಯಾಗಲಿದೆ. ಇದರ ಜೊತೆಗೆ ವಾಣಿಜ್ಯ ಬ್ಯಾಂಕುಗಳ ಲಾಭಗಳ ಮೇಲೆ ಶೇ.50ರಷ್ಟು ತೆರಿಗೆ, ಇತರ ಹಣಕಾಸು ಸಂಸ್ಥೆಗಳ ಲಾಭದ ಮೇಲಿನ ತೆರಿಗೆಯನ್ನು ಶೇ.25ಕ್ಕೇರಿಸಲಾಗಿದೆ. ಈ ಹೆಚ್ಚಳದಿಂದ ಮುಂದಿನ ಹಣಕಾಸು ವರ್ಷದಲ್ಲಿ ಹೆಚ್ಚುವರಿಯಾಗಿ 28000 ಕೋಟಿ ರೂ. ತೆರಿಗೆ ಸಂಗ್ರಹದ ನಿರೀಕ್ಷೆ ಇದೆ. ಉಕ್ರೇನ್‌ನ ರಕ್ಷಣಾ ಕ್ಷೇತ್ರಕ್ಕೆ ಆರ್ಥಿಕ ಸಂಪನ್ಮೂಲವನ್ನು ಭದ್ರಪಡಿಸಿಕೊಳ್ಳಲು ಈ ಕಾನೂನು ಮುಖ್ಯ ಎಂದು ಸರ್ಕಾರ ಹೇಳಿದೆ.

ರಷ್ಯಾ ಹಾಗೂ ಉಕ್ರೇನ್ ನಡುವಿನ ಯುದ್ಧ 29ನೇ ತಿಂಗಳಿಗೆ ತಲುಪಿದೆ. ಈಗಾಗಲೇ ಮಿಲಿಟರಿ ಶಸ್ತ್ರಾಸ್ತ್ರಗಳು ಹಾಗೂ ಮದ್ದು–ಗುಂಡುಗಳಿಗಾಗಿ ಉಕ್ರೇನ್ ಅಪಾರ ಪ್ರಮಾಣದ ವೆಚ್ಚಗಳನ್ನು ಮಾಡಿದೆ. ಇಲ್ಲಿಯವರೆಗೆ ಉಕ್ರೇನ್ ಸುಮಾರು 1.7 ಟ್ರಿಲಿಯನ್ ಹ್ರಿವ್ನಿಯಾಗಳ ರಕ್ಷಣಾ ವೆಚ್ಚವನ್ನು ಗುರಿಯಾಗಿಸಿಕೊಂಡಿದೆ.

ವಾರಣಾಸಿ ರೈಲು ನಿಲ್ದಾಣದಲ್ಲಿ ಭೀಕರ ಅಗ್ನಿ ದುರಂತ: 150ಕ್ಕೂ ಹೆಚ್ಚು ದ್ವಿಚಕ್ರ ವಾಹನಗಳು ಭಸ್ಮ

ವಾರಣಾಸಿ: ಉತ್ತರ ಪ್ರದೇಶದ ವಾರಣಾಸಿ ರೈಲು ನಿಲ್ದಾಣದಲ್ಲಿ ಭೀಕರ ಅಗ್ನಿ ದುರಂತ ಸಂಭವಿಸಿದ್ದು, ಪಾರ್ಕಿಂಗ್ ಪ್ರದೇಶದಲ್ಲಿ ಅಗ್ನಿ ಆಕಸ್ಮಿಕ ಸಂಭವಿಸಿ 150ಕ್ಕೂ ಹೆಚ್ಚು ದ್ವಿಚಕ್ರವಾಹನಗಳು ಸುಟ್ಟು ಭಸ್ಮವಾಗಿವೆ.



ಶುಕ್ರವಾರ ರಾತ್ರಿ ಈ ಘಟನೆ ನಡೆದಿದ್ದು, ಪ್ರಾಣ ಹಾನಿಯಾಗಿರುವ ಬಗ್ಗೆ ವರದಿಯಾಗಿಲ್ಲ. ವಾರಾಣಸಿಯ ಕಂಟೋನ್ಮೆಂಟ್ ರೈಲು ನಿಲ್ದಾಣದ ವಾಹನ ನಿಲುಗಡೆ ಪ್ರದೇಶದಲ್ಲಿ ಅಗ್ನಿ ಅವಘಡ ಸಂಭವಿಸಿದ್ದು, 150ಕ್ಕೂ ಹೆಚ್ಚು ದ್ವಿಚಕ್ರ ವಾಹನಗಳು ಸುಟ್ಟು ಭಸ್ಮವಾಗಿವೆ ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ. ವಿಚಾರ ತಿಳಿದ ಕೂಡಲೇ ರೈಲ್ವೆ ರಕ್ಷಣಾ ಪಡೆ, ಸರ್ಕಾರಿ ರೈಲ್ವೆ ಪೊಲೀಸ್ ತಂಡ ಹಾಗೂ ಅಗ್ನಿಶಾಮಕ ಸಿಬ್ಬಂದಿ ಸ್ಥಳಕ್ಕೆ ದೌಡಾಯಿಸಿ ಬೆಂಕಿ ನಂದಿಸುವಲ್ಲಿ ಯಶಸ್ವಿಯಾಗಿದ್ದಾರೆ. ಘಟನೆಯ ಬಗ್ಗೆ ಹೆಚ್ಚುವರಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಲಾಲ್ಜಿ ಚೌಧರಿ ವಿಷಾದ ವ್ಯಕ್ತಪಡಿಸಿದ್ದಾರೆ. ರೈಲ್ವೆ ನೌಕರರಿಗಾಗಿ ಪಾರ್ಕಿಂಗ್ ಸ್ಟ್ಯಾಂಡ್ ನಿರ್ಮಿಸಲಾಗಿತ್ತು. ಅಗ್ನಿ ಅವಘಡದಿಂದ ಸಾಕಷ್ಟು ಹಾನಿಯಾಗಿದೆ ಎಂದು ಹೇಳಿದ್ದಾರೆ. ರೈಲ್ವೇ ಸಿಬ್ಬಂದಿಗಾಗಿಯೇ ಮೀಸಲಿರಿಸಲಾಗಿದ್ದ ಪಾರ್ಕಿಂಗ್ ಜಾಗ ಇದಾಗಿದ್ದು, ಇಲ್ಲಿ ಬೆಂಕಿ ಆಕಸ್ಮಿಕ ಸಂಭವಿಸಿದೆ. ಘಟನೆಯಲ್ಲಿ ಯಾವುದೇ ಪ್ರಾಣಹಾನಿಯಾಗಿಲ್ಲ. ಈ ಬಗ್ಗೆ ತನಿಖೆ ನಡೆಸಲು ಸಮಿತಿ ರಚಿಸಲಾಗಿದೆ ಎಂದೂ ತಿಳಿಸಿದ್ದಾರೆ.

ಡಿ.10ರವರೆಗೆ ಸಂಭಾಲ್‌ಗೆ ಹೊರಗಿನವರಿಗೆ ಪ್ರವೇಶ ನಿಷೇಧ

ಸಂಭಾಲ್: ಜಾಮಾ ಮಸೀದಿ ವಿಚಾರಕ್ಕೆ ಸಂಬಂಧಿಸಿದಂತೆ ಸಂಭಾಲ್ ಜಿಲ್ಲೆಯಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ ಸಂಭಾಲ್ ಜಿಲ್ಲಾಡಳಿತ ಡಿ.10ರವರೆಗೆ ಹೊರಗಿನವರ ಪ್ರವೇಶವನ್ನು ನಿಷೇಧಿಸಿದೆ.

ಡಿ.10ರವರೆಗೆ ಸಕ್ಷಮ ಪ್ರಾಧಿಕಾರದ ಅನುಮತಿ ಪಡೆಯದೆ ಯಾವುದೇ ಹೊರಗಿನವರು, ಯಾವುದೇ ಸಾಮಾಜಿಕ ಸಂಘಟನೆ ಅಥವಾ ಯಾವುದೇ ಸಾರ್ವಜನಿಕ ಪ್ರತಿನಿಧಿಗಳು ಜಿಲ್ಲೆಯ ಗಡಿಯನ್ನು ಪ್ರವೇಶಿಸುವಂತಿಲ್ಲ ಎಂದು ಸಂಭಾಲ್ ಜಿಲ್ಲಾಧಿಕಾರಿ ರಾಜೇಂದ್ರ ಪೆನ್ಸಿಯಾ ಹೇಳಿಕೆ ನೀಡಿದ್ದಾರೆ. ಶಾಹಿ ಜಾಮಾ ಮಸೀದಿ ಸಂಕೀರ್ಣದಲ್ಲಿ ನಡೆದ ಹಿಂಸಾಚಾರದ ಬಗ್ಗೆ ಮಾಹಿತಿ ಸಂಗ್ರಹಿಸಲು ಸಮಾಜವಾದಿ ಪಕ್ಷದ 15 ಸದಸ್ಯರ ನಿಯೋಗ ಸಂಭಾಲ್‌ಗೆ ಭೇಟಿ ನೀಡಲಿರುವ ದಿನದಂದು ಈ ಕ್ರಮವು ಮಹತ್ವವನ್ನು ಪಡೆದುಕೊಂಡಿದೆ.

15 ಸದಸ್ಯರ ಎಸ್‌ಪಿ ನಿಯೋಗದ ನೇತೃತ್ವ ವಹಿಸಲಿರುವ ಉತ್ತರ ಪ್ರದೇಶ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಮಾತಾ ಪ್ರಸಾದ್ ಪಾಂಡೆ ಅವರು ಲಕ್ನೋದಲ್ಲಿನ ತಮ್ಮ ನಿವಾಸದ ಹೊರಗೆ ಸುದ್ದಿಗಾರರೊಂದಿಗೆ ಮಾತನಾಡಿ, ಗೃಹ ಕಾರ್ಯದರ್ಶಿ ಸಂಜಯ್ ಪ್ರಸಾದ್ ಅವರು ತಮಗೆ ಕರೆ ಮಾಡಿ ಸಂಭಾಲ್‌ಗೆ ಭೇಟಿ ನೀಡದಂತೆ ವಿನಂತಿಸಿದ್ದಾರೆ ಎಂದು ಹೇಳಿದರು.

ಮೈಸೂರು ಮಿತ್ರ ಭಾನುವಾರ 1 ಡಿಸೆಂಬರ್ 2024

ಲಾರಿ ಮಗುಚಿ ಜಾರ್ಖಂಡ್ ಮೂಲದ ಕಾರ್ಮಿಕ ಸಾವು

ಐವರಿಗೆ ಗಾಯ, ಓರ್ವನ ಸ್ಥಿತಿ ಗಂಭೀರ

ಮಡಿಕೇರಿ,ನ.30– ಕೊಡಗು–ಕೇರಳ ಗಡಿ ಭಾಗದ ಮಾಕುಟ್ಟ ಬಳಿ ಚಾಲಕನ ನಿಯಂತ್ರಣ ತಪ್ಪಿ ಲಾರಿ ಮಗುಚಿ ಬಿದ್ದ ಪರಿಣಾಮ ಜಾರ್ಖಂಡ್ ಮೂಲದ ಕಾರ್ಮಿಕನೋರ್ವ ಸಾವನ್ನಪ್ಪಿ ಐವರು ಗಾಯಗೊಂಡಿರುವ ಘಟನೆ ನಡೆದಿದೆ.



ಜಾರ್ಖಂಡ್ ಮೂಲದ ಬುದ್ಧಾರಾಮ್ (55) ಮೃತ ದುರ್ದೈವಿ. ತೀವ್ರವಾಗಿ ಗಾಯ ಗೊಂಡಿರುವ ಲಾರಿ ಚಾಲಕ ತೆಲಂಗಾಣದ ನಾಗೇಶ್ವರ ರಾವ್(30), ಜಾರ್ಖಂಡ್ ಮೂಲದ ರಾಜೇಂದ್ರ(24), ಜಯಮಂಗಲ(25), ಆಕಾಶ್(25) ಮತ್ತು ಸುರೇಶ್(48) ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಓರ್ವನ ಸ್ಥಿತಿ ಗಂಭೀರವಾಗಿದೆ. ಹೈದರಾಬಾದ್‌ನಿಂದ ಕಣ್ಣೂರಿಗೆ ಕೇಬಲ್ ಕಾಮಗಾರಿಗೆ ಸಂಬಂಧಿಸಿದ ಸಾಮಗ್ರಿಗಳನ್ನು ಸಾಗಿಸುತ್ತಿದ್ದ 10 ಚಕ್ರದ ಲಾರಿ ಅಪಘಾತಕ್ಕೀಡಾಗಿದೆ. ಇಳಿಜಾರಿನ ರಸ್ತೆ ಇಳಿಯುವಾಗ ನಿಯಂತ್ರಣ ತಪ್ಪಿ ಅವಘಡ ಸಂಭವಿಸಿರಬಹುದು ಎಂದು ಶಂಕಿಸಲಾಗಿದೆ.

ಲಾರಿಯಲ್ಲಿ ಸಿಲುಕಿದ್ದ ಜನರನ್ನು ಇರಿಟ್ಟಿಯ ಅಗ್ನಿ ಶಾಮಕ ಸಿಬ್ಬಂದಿ ಹಾಗೂ ಸ್ಥಳೀಯರು ಹೊರ ತಂದು ಆಸ್ಪತ್ರೆಗೆ ಸಾಗಿಸಿದ್ದಾರೆ. ಘಟನಾ ಸ್ಥಳದಲ್ಲಿ ಮೊಬೈಲ್ ನೆಟ್‌ವರ್ಕ್ ಇಲ್ಲದ ಕಾರಣ ಪೊಲೀಸರಿಗೂ ತಡವಾಗಿ ಮಾಹಿತಿ ದೊರೆತಿದೆ. ಸ್ಥಳಕ್ಕೆ ವಿರಾಜಪೇಟೆ ಗ್ರಾಮಾಂತರ ಠಾಣಾ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಓರ್ವ ಕಾರ್ಮಿಕ ಮೃತಪಟ್ಟಿರುವ ಹಿನ್ನೆಲೆಯಲ್ಲಿ ಗಾಯಾಳುಗಳ ಹೇಳಿಕೆ ಪಡೆಯಲು ವಿರಾಜಪೇಟೆ ಗ್ರಾಮಾಂತರ ಠಾಣೆಯ ಪೊಲೀಸರ ಒಂದು ತಂಡ ಇರಿಟಿ ಮತ್ತು ಕಣ್ಣೂರು ಆಸ್ಪತ್ರೆಗೆ ತೆರಳಿದೆ.

ಕೊಡವ ಮಹಿಳೆ ಅಪ್‌ಲೋಡ್ ಮಾಡಿದ್ದ ಫೋಟೋಗೆ ಅಶ್ಲೀಲ ಕಮೆಂಟ್ ಮಾಡಿದ್ದವನ ಬಂಧನ

ಮಡಿಕೇರಿ,ನ.30– ಕೊಡವ ಸಮುದಾಯದ ಮಹಿಳೆಯೋರ್ವರು ಫೇಸ್ ಬುಕ್‌ನಲ್ಲಿ ಅಪ್‌ಲೋಡ್ ಮಾಡಿದ್ದ ಫೋಟೋಗೆ ಅಶ್ಲೀಲವಾಗಿ ಕಮೆಂಟ್ ಮಾಡಿದ್ದ ಆರೋಪಿಯನ್ನು ಮಡಿಕೇರಿ ಸೆನ್ ಠಾಣಾ ಪೊಲೀಸರು ಬಂಧಿಸಿದ್ದಾರೆ.



ಬೆಳಗಾವಿಯ ಕಿತ್ತೂರು ನಿವಾಸಿ ಗಂಗಾಧರ ಜಮಾದಾರ (22) ಎಂಬಾತನೇ ಬಂಧಿತ ಆರೋಪಿ. ಫೇಸ್‌ಬುಕ್‌ನಲ್ಲಿ ಅಶ್ಲೀಲ ಸಂದೇಶ ಹಾಕಿರುವ ಕುರಿತು ಮಹಿಳೆ ಸೆನ್ ಠಾಣೆಗೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡ ಪೊಲೀಸರು ಆರೋಪಿಯನ್ನು ಬೆಳಗಾವಿಯಲ್ಲಿ ಬಂಧಿಸಿ ನ್ಯಾಯಾಂಗ ವಶಕ್ಕೆ ಒಪ್ಪಿಸಿದ್ದಾರೆ.

ಕರ್ತವ್ಯ ಲೋಪ : ಮೊರಾರ್ಜಿ ಶಾಲೆಯ ಪ್ರಾಂಶುಪಾಲರ ಅಮಾನತು

ಮಡಿಕೇರಿ,ನ.30– ಕರ್ತವ್ಯ ಲೋಪ ಎಸಗಿದ ಆರೋಪದ ಮೇರೆಗೆ ವಿರಾಜಪೇಟೆ ಆರ್ಜಿ ಗ್ರಾಮದಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲರಾದ ಕು.ಮಮತ ಅವರನ್ನು ಕರ್ತವ್ಯದಿಂದ ಅಮಾನತು ಮಾಡಿ ಅಲ್ಪಸಂಖ್ಯಾತ ನಿರ್ದೇಶನಾಲಯದ ನಿರ್ದೇಶಕರು ಮತ್ತು ಶಿಸ್ತು ಪ್ರಾಧಿಕಾರದ ಅಧಿಕಾರಿ ಜೀಲಾನಿ ಹೆಚ್.ಮೊಕಾಶಿ ಆದೇಶ ಹೊರಡಿಸಿದ್ದಾರೆ.

ಜುಲೈ 7ರಂದು ವಸತಿ ನಿಲಯಕ್ಕೆ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರು ಮತ್ತು ವಿರಾಜಪೇಟೆ ಕ್ಷೇತ್ರ ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಅವರು ಅನಿರೀಕ್ಷಿತವಾಗಿ ಭೇಟಿ ನೀಡಿದ್ದರು. ಈ ವೇಳೆ ಕಟ್ಟಡ ದುರಸ್ಥಿ ಮಾಡದಿರುವುದು, ಮಕ್ಕಳ ಉಪಯೋಗಕ್ಕೆ ನೂತನ ಹಾಸಿಗೆಗಳನ್ನು ನೀಡದಿರುವುದು, ಶೌಚಾಲಯದಲ್ಲಿ ಶುಚಿತ್ವ ಕಾಪಾಡದಿರುವುದು ಸೇರಿದಂತೆ ಕರ್ತವ್ಯ ಲೋಪ ಎಸಗಿರುವುದು ಕಂಡು ಬಂದಿತ್ತು. ಈ ಹಿನ್ನೆಲೆಯಲ್ಲಿ ಶಾಸಕ ಎ.ಎಸ್.ಪೊನ್ನಣ್ಣ ಅವರು ವಸತಿ ಶಾಲೆಯ ಪ್ರಾಂಶುಪಾಲರ ವಿರುದ್ಧ ಇಲಾಖೆ ತನಿಖೆ ನಡೆಸುವಂತೆ ಅಲ್ಪಸಂಖ್ಯಾತರ ಇಲಾಖೆ ಉನ್ನತಾಧಿಕಾರಿಗಳಿಗೆ ದೂರು ನೀಡಿದ್ದರು. ಈ ಹಿನ್ನೆಲೆಯಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲರಾದ ಕು.ಮಮತ ಅವರನ್ನು ಅಮಾನತು ಮಾಡಿ ಆದೇಶ ಮಾಡಿದ್ದಾರೆ.

ಇಂಗ್ಲೀಷ್ ಜೊತೆಗೆ ಕನ್ನಡ ಭಾಷಾ ಸಂಸ್ಕೃತಿ ಸಂರಕ್ಷಿಸಿ

ಮಡಿಕೇರಿ ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿ ಡಾ. ದೊಡ್ಡೇಗೌಡ ಅಭಿಪ್ರಾಯ

ಮಡಿಕೇರಿ,ನ.30– ಇಂಗ್ಲೀಷ್ ಅನ್ನು ಒಂದು ಭಾಷೆಯಾಗಿ ಪ್ರಾಥಮಿಕ ಹಂತದಿಂದಲೇ ಮಕ್ಕಳಿಗೆ ಕಲಿಸುವುದರ ಜೊತೆಯಲ್ಲೆ, ಅತ್ಯಂತ ಸಂಪದ್ಭರಿತವಾದ ಕನ್ನಡ ಭಾಷೆಯತ್ತ ಅವರಲ್ಲಿ ಆಸಕ್ತಿಯನ್ನು ಮೂಡಿಸುವ ಮೂಲಕ ಕನ್ನಡ ಭಾಷಾ ಸಂಸ್ಕೃತಿಯನ್ನು ಸಂರಕ್ಷಿಸುವ ಕಾರ್ಯ ನಡೆಯಬೇಕಾಗಿದೆ ಎಂದು ಮಡಿಕೇರಿ ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿ ಡಾ. ದೊಡ್ಡೇಗೌಡ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಕೊಡಗು ಜಿಲ್ಲಾ ಲೇಖಕ ಮತ್ತು ಕಲಾವಿದರ ಬಳಗ ಹಾಗೂ ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಂಯುಕ್ತಾಶ್ರಯದಲ್ಲಿ ನಗರದ ಲಯನ್ಸ್ ಸಭಾಂಗಣದಲ್ಲಿ 69ನೇ ಕನ್ನಡ ರಾಜ್ಯೋತ್ಸವ ಪ್ರಯುಕ್ತ ಆಯೋಜಿತ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಜನಪದ ನೃತ್ಯ ಸ್ಪರ್ಧೆಯನ್ನು ಜ್ಯೋತಿ ಬೆಳಗಿ ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳಲ್ಲಿ ಒಂದು ಭಾಷೆಯಾಗಿ ಇಂಗ್ಲೀಷ್ ಕಲಿಸುವ ಹಂತದಲ್ಲೆ, ಕನ್ನಡ ಭಾಷೆಯ ಆಳವಾದ ಜ್ಞಾನವನ್ನು ಹೊಂದಿರುವ ಶಿಕ್ಷಕ ವರ್ಗದ ಮೂಲಕ, ಮಕ್ಕಳಲ್ಲಿ ಕನ್ನಡ ಭಾಷಾ ಸಂಸ್ಕೃತಿಯತ್ತ ಒಲವು ಮೂಡಿಸುವ ಪ್ರಯತ್ನ ನಡೆಯಬೇಕು. ಕನ್ನಡದ ಮೌಲ್ಯ



ಪ್ರೌಢಶಾಲಾ ವಿದ್ಯಾರ್ಥಿಗಳ ಜನಪದ ನೃತ್ಯ ಸ್ಪರ್ಧೆಯನ್ನು ಜ್ಯೋತಿ ಬೆಳಗಿಸಿ, ಉದ್ಘಾಟಿಸಲಾಯಿತು.

ಮತ್ತು ಬದುಕು ಅತ್ಯಂತ ದೊಡ್ಡದಾಗಿದ್ದು, ಇದನ್ನರಿತು ಕನ್ನಡಿಗರಾದ ನಾವೆಲ್ಲ ಒಂದೆನ್ನುವ ಭಾವವನ್ನು ಮನದಲ್ಲಿ ತುಂಬಿಕೊಂಡು ಒಟ್ಟಾಗಿ ಕನ್ನಡದ ಕಂಪನ್ನು ಪಸರಿಸಬೇಕಾಗಿದೆ ಎಂದು ಮನದುಂಬಿ ನುಡಿದರು.

ನಾಲ್ಕು ಮಂದಿಗೆ ಕನ್ನಡ ಕಲಿಸಿ: ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಂ.ಪಿ.ಕೇಶವ ಕಾಮತ್ ಮಾತನಾಡಿ, ಕನ್ನಡಿಗರಾದ ನಾವೆಲ್ಲ ನಮ್ಮ ಬದುಕಿನಲ್ಲಿ ನಾಲ್ಕು ಮಂದಿಗೆ ಕನ್ನಡವನ್ನು ಕಲಿಸಿದಲ್ಲಿ ಕನ್ನಡದ ಉದ್ಧಾರ ಸಾಧ್ಯವಾಗುತ್ತದೆ. ಪ್ರಸ್ತುತ ಬದುಕಿಗಾಗಿ ಕನ್ನಡ ನೆಲದಲ್ಲಿ ನೆಲೆ ನಿಂತ ಮಂದಿಯೊಂದಿಗೆ ಕನ್ನಡದಲ್ಲಿ ವ್ಯವಹರಿಸಬೇಕಾದ ನಾವು, ಅವರ ಭಾಷೆಯಲ್ಲೆ ಮಾತನಾಡುವ ಪರಿಸ್ಥಿತಿಯನ್ನು ನೋಡುತ್ತಿದ್ದೇವೆ. ಇದನ್ನು ಮೀರಿ ನಮ್ಮೆಲ್ಲ ವ್ಯವಹಾರಗಳಲ್ಲಿ ಕನ್ನಡದ ಬಳಕೆಗೆ ಒತ್ತು ನೀಡುವಂತಾಗಬೇಕೆಂದು ಆಶಯ ವ್ಯಕ್ತಪಡಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕುಮಾರ್ ಮಾತನಾಡಿ, ಕನ್ನಡ ಭಾಷಾ ಸಂಸ್ಕೃತಿ ಅತ್ಯಂತ ಶಕ್ತಿಯುತವಾದದ್ದು. ಇದರ ಬೆನ್ನೆಲುಬೆ ಸಾಹಿತ್ಯವೆಂದು ವ್ಯಾಖ್ಯಾನಿಸಿದ ಅವರು, ಇಂದು ಕನ್ನಡ ಸಂಸ್ಕೃತಿಯ ಬೆಳವಣಿಗೆಗೆ ಅಗತ್ಯ ಸ್ಪಂದನ ದೊರಕುತ್ತಿಲ್ಲ ಎನ್ನುವ ಭಾವನೆ ಮೂಡುತ್ತಿದೆ. ಇಂತಹ ಸಂದಿಗ್ಧ ಕಾಲಘಟ್ಟದಲ್ಲಿ ಕನ್ನಡ ಭಾಷಾ ಸಂಸ್ಕೃತಿಯತ್ತ ಪ್ರತಿಯೊಬ್ಬರು ಹೃದಯವಂತಿಕೆಯನ್ನು ಮೆರೆದು, ಈ ನೆಲದ ಸಂಸ್ಕೃತಿಯ ಬೆಳವಣಿಗೆಗೆ ಮುಂದಾಗಬೇಕೆಂದು ಕರೆ ನೀಡಿದರು.

ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷರು ಹಾಗೂ ದತ್ತಿ ದಾನಿಗಳಾದ ಟಿ.ಪಿ. ರಮೇಶ್ ಮಾತನಾಡಿದರು. ಕೊಡಗು ಜಿಲ್ಲಾ ಲೇಖಕ ಮತ್ತು ಕಲಾವಿದರ ಬಳಗದ ಅಧ್ಯಕ್ಷ ಲೋಕನಾಥ್ ಅಮೆಚೂರ್ ಮಾತನಾಡಿ, ಬಳಗ ಮತ್ತು ಕಸಾಪ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಎರಡು ಸಂಘಟನೆಗಳು ಕನ್ನಡ ಭಾಷೆ, ಸಂಸ್ಕೃತಿ, ಪರಂಪರೆಗಳ ಉಳಿವು ಮತ್ತು ಬೆಳವಣಿಗೆಗಾಗಿ ಶ್ರಮಿಸುತ್ತಿರುವುದಾಗಿ ನುಡಿದರು.

ಸಭಾ ಕಾರ್ಯಕ್ರಮ ಬಳಿಕ ನಡೆದ ಪ್ರೌಢಶಾಲಾ ವಿದ್ಯಾರ್ಥಿಗಳ ಜನಪದ ನೃತ್ಯ ಸ್ಪರ್ಧೆ ಅತ್ಯಾಕರ್ಷಕವಾಗಿ ಮೂಡಿ ಬಂದಿತು. ನಗರದ ವಿವಿಧ ಶಾಲೆಗಳ ಕಲಾ ತಂಡಗಳು ವಿವಿಧ ಜಾನಪದ ಹಾಡುಗಳಿಗೆ ಪ್ರದರ್ಶಿಸಿದ ನೃತ್ಯ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಯಿತು. ಸಮಾರಂಭದಲ್ಲಿ ಸರ್ವೋದಯ ಸಮಿತಿ ಅಧ್ಯಕ್ಷ ಅಂಬೆಕಲ್ಲು ಕುಶಾಲಪ್ಪ, ಜಿಲ್ಲಾ ಕಸಾಪ ಪ್ರಧಾನ ಕಾರ್ಯದರ್ಶಿ ಭಾರತಿ ರಮೇಶ್, ಕೋಶಾಧಿಕಾರಿ ಕಡ್ಲೇರ ತುಳಸಿ ಮೋಹನ್, ಕಸಾಪ ಪದಾಧಿಕಾರಿಗಳು ಉಪಸ್ಥಿತರಿದ್ದರು.

ನಿಯಮಬಾಹಿರ ಪರಿಭಾವಿತ ಅರಣ್ಯ ಯೋಜನೆ ಕೈಬಿಡಲು ಕಾಫಿ ರೈತರ ಸಂಘ ಆಗ್ರಹ



ವಿರಾಜಪೇಟೆ: ರಾಜ್ಯದ ಅರಣ್ಯ ಭೂಮಿಗಳ ಸಮಗ್ರ ದಾಖಲೀಕರಣಕ್ಕಾಗಿ ಅಧ್ಯಯನ ಸರಿ. ಅದರೆ ಪರಿಭಾವಿತ ಅರಣ್ಯದ ಅಧ್ಯಯನ ಎನ್ನುವುದು ಸರಿಯಲ್ಲ. ಪರಿಭಾವಿತ ಅರಣ್ಯ, ಡೀಮ್ಡ್ ಫಾರೆಸ್ಟ್ ವಿಚಾರವೇ ನಿಯಮಬಾಹಿರವಾಗಿದ್ದು, ಇದನ್ನು ಕೈಬಿಡುವಂತೆ ಕರ್ನಾಟಕ ಕಾಫಿ ರೈತರ ಸಂಘ ಕೊಡಗು ಜಿಲ್ಲಾ ಘಟಕ ಆಗ್ರಹಿಸಿದೆ.

ಪತ್ರಿಕಾಗೋಷ್ಠಿಯಲ್ಲಿ ಕೊಡಗು ಘಟಕದ ಸದಸ್ಯ ಡಾ.ದುರ್ಗಾಪ್ರಸಾದ್ ಮಾತನಾಡಿ, ಪರಿಭಾವಿತ ಅರಣ್ಯ (ಡೀಮ್ಡ್ ಫಾರೆಸ್ಟ್)ದ ವಿಚಾರವೇ ನಿಯಮಬಾಹಿರ ಎಂದು ರಾಜ್ಯದ ಉಚ್ಚ ನ್ಯಾಯಾಲಯ ತೀರ್ಪು ನೀಡಿ ಪುನರುಚ್ಚರಿಸಿದೆ. ನಂತರವೂ ಈ ವಿಚಾರದೊಂದಿಗೆ ರಾಜ್ಯ ಸರ್ಕಾರ ಮುಂದುವರೆಯುತ್ತಿರುವುದು ನ್ಯಾಯಾಲಯದ ತೀರ್ಪಿನ ಉಲ್ಲಂಘನೆಯಾಗಿದೆ. ರಾಜ್ಯ ಸರ್ಕಾರ ನ್ಯಾಯಾಲಯದ ತೀರ್ಪನ್ನು ಕಡೆಗಣಿಸುತ್ತಿರುವ ವರ್ತನೆ ಸರಿಯಲ್ಲ ಎಂದರು.

ಎರಡು ಬಾರಿ ರಾಜ್ಯ ಉಚ್ಚ ನ್ಯಾಯಾಲಯ ತೀರ್ಪು ನೀಡಿದ್ದರೂ ಸರ್ಕಾರ ಪರಿಭಾವಿತ ಅರಣ್ಯ (ಡೀಮ್ಡ್ ಫಾರೆಸ್ಟ್) ಎಂದು ವಾದಿಸುತ್ತ ಬರುತ್ತಿದೆ. ಇದರಲ್ಲಿ ನ್ಯಾಯಾಲಯದ ತೀರ್ಪನ್ನು ಸರ್ಕಾರ ಉಲ್ಲಂಘಿಸಿದೆ ಎಂದು ಆರೋಪಿಸಿದರು.

ಪರಿಭಾವಿತ ಅರಣ್ಯದ ವಿಚಾರವನ್ನು ಕೈಬಿಟ್ಟಾಗ ಅದರ ಹೆಸರಿನಲಿದ್ದ ಸಿ ಅಂಡ್ ಡಿ ಭೂಮಿ, ಪೈಸಾರಿ ವಿಭಾಗ ಭೂಮಿಗಳು ಅರಣ್ಯ ಪಟ್ಟಿಯಿಂದ ಸ್ವತಂತ್ರವಾಗುತ್ತೆ. ಇಲ್ಲಿ ವಾಸಿಸುವ ಜನರ ಒಡೆತನದ ಹಕ್ಕಿನ ಬಗ್ಗೆ ಪ್ರಶ್ನೆಯನ್ನು ಸಕಾಲದಲ್ಲಿ ಪರಿಹರಿಸಲು ಸಾಧ್ಯವಾಗುತ್ತದೆ ಎಂದರು.

ಗೋಷ್ಠಿಯಲ್ಲಿ ಜಿಲ್ಲಾ ಘಟಕದ ಸಂಚಾಲಕ ಕೆ.ಹೆಚ್.ಹನೀಫ್ ಚಾಮಿಯಾಲ, ಉದಯಕುಮಾರ್ ನೆಲ್ಯಹುದಿಕೇರಿ, ಹಮೀದ್ ಗುಂಡಿಕೆರೆ ಉಪಸ್ಥಿತರಿದ್ದರು.

ಆರೋಗ್ಯ ಕೇಂದ್ರದಲ್ಲಿ ಎನ್‌ಸಿಸಿ ಕೆಡೆಟ್‌ಗಳಿಂದ ಸ್ವಚ್ಛತಾ ಕಾರ್ಯ

ಸುಂಟಿಕೊಪ್ಪ: ಸಂತ ಮೇರಿ ಆಂಗ್ಲ ಮಾಧ್ಯಮ ಶಾಲೆಯ ವತಿಯಿಂದ ಎನ್‌ಸಿಸಿ ದಿನಾಚರಣೆಯ ಅಂಗವಾಗಿ ಸ್ಥಳೀಯ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸ್ವಚ್ಛತಾ ಕಾರ್ಯ ನಡೆಸಲಾಯಿತು.

ವಿದ್ಯಾ ಸಂಸ್ಥೆಯ ವ್ಯವಸ್ಥಾಪಕರಾದ ಧರ್ಮಗುರು ರೆ.ಫಾ.ವಿಜಯ್ ಕುಮಾರ್ ಅವರ ನೇತೃತ್ವದಲ್ಲಿ ಎನ್‌ಸಿಸಿ ಕೆಡೆಟ್‌ಗಳು ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ತೆರಳಿ ಅಲ್ಲಿ ಬಿದ್ದಿದ್ದ ಪ್ಲಾಸ್ಟಿಕ್, ಕಸ ಕಡ್ಡಿಗಳು, ಇನ್ನಿತರ ತ್ಯಾಜ್ಯ ವಸ್ತುಗಳನ್ನು ಸಂಗ್ರಹಿಸಿ ಶ್ರಮದಾನ ನಡೆಸಿದರು. ಅಲ್ಲದೇ ಸಾರ್ವಜನಿಕರಿಗೆ ಸ್ವಚ್ಛತೆ ಕಾಪಾಡುವಂತೆ ವಿದ್ಯಾರ್ಥಿಗಳು ಮನವಿ ಮಾಡಿದರು. ಈ ಸಂದರ್ಭ ಪ್ರಾಚಾರ್ಯರಾದ ಸೆಲ್ವರಾಜ್, ಸಿಟಿಓ ಹಮೀದ್ ಹಾಗೂ ಶಿಕ್ಷಕರು ಹಾಜರಿದ್ದರು.



ಶ್ರಮದಾನ ಮಾಡುತ್ತಿರುವ ಎನ್‌ಸಿಸಿ ಕೆಡೆಟ್.

ಬೀದಿ ದೀಪ ಆರಿಸಿ, ಸಿಸಿ ಕ್ಯಾಮರಾ ಬೇರೆಡೆ ತಿರುಗಿಸಿ ಗ್ರಾಪಂ ಕಚೇರಿ, ಅಂಚೆ ಕಚೇರಿಯಲ್ಲಿ ಕಳ್ಳತನ



ಮಡಿಕೇರಿ,ನ.30– ವಿರಾಜಪೇಟೆ ತಾಲೂಕಿನ ಬಿಟ್ಟಂಗಾಲ ಗ್ರಾಮ ಪಂಚಾಯತಿ ಕಾರ್ಯಾಲಯ ಮತ್ತು ಅದೇ ಕಟ್ಟಡದಲ್ಲಿರುವ ಅಂಚೆ ಕಚೇರಿಯ ಬೀಗ ಮುರಿದು ಕಳ್ಳತನ ಮಾಡಲಾಗಿದೆ. ವಿರಾಜಪೇಟೆ ಹೊರವಲಯದ ಗೋಣಿಕೊಪ್ಪ ಮುಖ್ಯ ರಸ್ತೆಯಲ್ಲಿರುವ ಗ್ರಾಮ ಪಂಚಾಯಿತಿ ಕಟ್ಟಡದಲ್ಲಿ ಅಂಚೆ ಕಚೇರಿ ಕೂಡ ಇದ್ದು, ಗ್ರಾಪಂ ಸಿಸಿ ಕ್ಯಾಮೆರಾದ ಮದರ್ ಬೋರ್ಡ್ ಹಾಗೂ ಅಂಚೆ ಕಚೇರಿಯಿಂದ 4 ಸಾವಿರ ರೂ. ನಗದು ಕಳವು ಮಾಡಲಾಗಿದೆ.

ಕಳ್ಳತನಕ್ಕೂ ಮುನ್ನ ಮುಖ್ಯ ರಸ್ತೆಯ ಬೀದಿ ದೀಪವನ್ನು ಆರಿಸಿದ್ದು ಪಕ್ಕದ ಕಟ್ಟಡದ ಸಿ.ಸಿ ಕ್ಯಾಮರಾವನ್ನು ಬೇರೆಡೆಗೆ ತಿರುಗಿಸಿರುವುದು ಕಂಡು ಬಂದಿದೆ. ಘಟನಾ ಸ್ಥಳಕ್ಕೆ ವಿರಾಜಪೇಟೆ ಗ್ರಾಮಾಂತರ ಪೊಲೀಸರು ತೆರಳಿ ಪರಿಶೀಲನೆ ನಡೆಸಿದರು. ಕಳ್ಳರ ಜಾಡು ಹಿಡಿಯಲು ಮಡಿಕೇರಿಯ ಶ್ವಾನ ದಳ ಹಾಗೂ ಬೆರಳಚ್ಚು ತಜ್ಞರು ತೆರಳಿ ಶೋಧ ಕಾರ್ಯ ನಡೆಸಿದರು. ಪೊಲೀಸ್ ಶ್ವಾನ ಘಟನಾ ಸ್ಥಳದಿಂದ ಬಾಳುಗೋಡು ರಸ್ತೆಯಲ್ಲಿ 1 ಕಿಮೀ ತೆರಳಿ ಹಿಂತಿರುಗಿತು. ಪ್ರಕರಣ ದಾಖಲಿಸಿಕೊಂಡಿರುವ ವಿರಾಜಪೇಟೆ ಗ್ರಾಮಾಂತರ ಠಾಣಾ ಪೊಲೀಸರು ತನಿಖೆಯನ್ನು ಚುರುಕುಗೊಳಿಸಿದ್ದಾರೆ.

ಸಮಾಜ ಕಲ್ಯಾಣ ಇಲಾಖೆಯ ವಿನೂತನ ಯೋಜನೆ

ವಿದ್ಯಾರ್ಥಿನಿಲಯಗಳು, ವಸತಿ ಶಾಲೆಗಳ ಉಪಾಹಾರ, ಊಟದ ವ್ಯವಸ್ಥೆ ಸಾರ್ವಜನಿಕವಾಗಿ ವೀಕ್ಷಿಸುವ ಜಾಲತಾಣಕ್ಕೆ ಚಾಲನೆ

ಚಾಮರಾಜನಗರ, ನ.30– ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳು ಹಾಗೂ ವಸತಿ ಶಾಲೆಗಳಲ್ಲಿ ಪ್ರತಿನಿತ್ಯ ವಿದ್ಯಾರ್ಥಿಗಳಿಗೆ ನೀಡುವ ಉಪಾಹಾರ ಊಟದ ವ್ಯವಸ್ಥೆಯನ್ನು ಸಾರ್ವಜನಿಕರು ಮುಕ್ತವಾಗಿ ವೀಕ್ಷಿಸಲು, ಪರಿಶೀಲಿಸಲು ಹಾಗೂ ಸಲಹೆ ನೀಡುವ ಅದ್ಭುತ ವ್ಯವಸ್ಥೆಗೆ ಚಾಮರಾಜನಗರದಲ್ಲಿ ಚಾಲನೆ ನೀಡಲಾಗಿದೆ.

ಭಾರತ ದೇಶದಲ್ಲೇ ಪ್ರಥಮ ಪ್ರಯತ್ನವಾಗಿ ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳು ಹಾಗೂ ವಸತಿ ಶಾಲೆಗಳಲ್ಲಿ ವಿತರಿಸಲಾಗುವ ಊಟ, ಉಪಾಹಾರದ ವ್ಯವಸ್ಥೆಯನ್ನು ಜಾಲತಾಣದ ಮೂಲಕ ಸಾರ್ವಜನಿಕರು ವೀಕ್ಷಿಸುವ ವಿನೂತನ ಯೋಜನೆ ಅನುಷ್ಠಾನಕ್ಕಾಗಿ ಪೈಲೆಟ್ ಜಿಲ್ಲೆಗಳಾಗಿ ಚಾ.ನಗರ ಹಾಗೂ ಬೀದರ್ ಆಯ್ಕೆಯಾಗಿದೆ.

ವಿದ್ಯಾರ್ಥಿನಿಲಯಗಳು, ವಸತಿ ಶಾಲೆಗಳಲ್ಲಿ ಪ್ರತಿನಿತ್ಯ ನೀಡುತ್ತಿರುವ ತಿಂಡಿ, ಊಟದ ವಿವರಗಳನ್ನು ಎಕ್ಸ್ ಖಾತೆಯಲ್ಲಿ ಅಪ್‌ಲೋಡ್ ಮಾಡುವ ಮೂಲಕ ಸಾರ್ವಜನಿಕವಾಗಿ ವೀಕ್ಷಿಸುವ ಅಧಿಕೃತ ಜಾಲತಾಣವನ್ನು ಸಮಾಜ ಕಲ್ಯಾಣ ಇಲಾಖೆ ಸಚಿವರಾದ ಡಾ.ಹೆಚ್.ಸಿ. ಮಹದೇವಪ್ಪ ಅವರು ಪಶುಸಂಗೋಪನೆ, ರೇಷ್ಮೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ. ವೆಂಕಟೇಶ್ ಹಾಗೂ ಇನ್ನಿತರ ಗಣ್ಯರ ಸಮ್ಮುಖದಲ್ಲಿ ಇಂದು ಚಾಮರಾಜನಗರದ ಜಿಲ್ಲಾ ಪಂಚಾಯತ್ ಕೆಡಿಪಿ ಸಭಾಂಗಣದಲ್ಲಿ ಬಿಡುಗಡೆ ಮಾಡಿದರು.



ವಿದ್ಯಾರ್ಥಿಗಳಿಗೆ ನೀಡುವ ಉಪಾಹಾರ, ಊಟದ ವ್ಯವಸ್ಥೆಯನ್ನು ಸಾರ್ವಜನಿಕರು ಮುಕ್ತವಾಗಿ ವೀಕ್ಷಿಸಲು, ಪರಿಶೀಲಿಸಲು ಹಾಗೂ ಸಲಹೆ ನೀಡುವ ವ್ಯವಸ್ಥೆಗೆ ಚಾಮರಾಜನಗರದಲ್ಲಿ ಚಾಲನೆ ನೀಡಲಾಯಿತು.

ವಿದ್ಯಾರ್ಥಿನಿಲಯಗಳು, ವಸತಿ ಶಾಲೆಗಳಲ್ಲಿ ನೀಡುತ್ತಿರುವ ಬೆಳಗಿನ ಉಪಾಹಾರ, ಮಧ್ಯಾಹ್ನದ ಉಪಾಹಾರ ಹಾಗೂ ರಾತ್ರಿ ಊಟದ ಫೋಟೋಗಳನ್ನು ಅಪ್‌ಲೋಡ್ ಮಾಡಿ ಸಾರ್ವಜನಿಕರ ವೀಕ್ಷಣೆಗೆ ಅನಾವರಣಗೊಳಿಸಲಾಗಿದೆ. ವಿದ್ಯಾರ್ಥಿಗಳಿಗೆ ನೀಡುತ್ತಿರುವ ಸೌಲಭ್ಯಗಳನ್ನು ಪೋಷಕರು ಸೇರಿದಂತೆ ಸಾರ್ವಜನಿಕರು (https://foodswdok.in/cr) ವೀಕ್ಷಣೆ ಮಾಡಲು ಪಾರದರ್ಶಕದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ತಿಂಡಿ ಮತ್ತು ಊಟದ ಗುಣಮಟ್ಟ, ಹಾಸ್ಟೆಲ್ ಮತ್ತು ವಸತಿ ನಿಲಯಗಳ ಶುಚಿತ್ವ, ಬಯೋಮೆಟ್ರಿಕ್ ಹಾಜರಾತಿ ಎಲ್ಲವನ್ನು ಸಾರ್ವಜನಿಕ ವೀಕ್ಷಣೆಗೆ ಮುಕ್ತಗೊಳಿಸಲಾಗಿದೆ. ಸರ್ಕಾರದಿಂದ ನಡೆಸಲಾಗುತ್ತಿರುವ ವಸತಿ ಶಾಲೆಗಳು ಮತ್ತು ವಿದ್ಯಾರ್ಥಿನಿಲಯಗಳಲ್ಲಿ ಉತ್ತಮ ಗುಣಮಟ್ಟದ ಊಟ ಮತ್ತು ವಿದ್ಯಾರ್ಥಿಗಳ ಕಲ್ಯಾಣ ಕಾರ್ಯಕ್ರಮಗಳ ಪಾರದರ್ಶಕತೆ, ಜವಾಬ್ದಾರಿಯನ್ನು ಸಾರ್ವಜನಿಕರಿಗೆ ತಿಳಿಸುವ ನೂತನ ಪ್ರಯತ್ನವಾಗಿದೆ.

ಜಿಲ್ಲೆಯಲ್ಲಿ 22 ವಸತಿ ಶಾಲೆಗಳು ಮತ್ತು 56 ವಿದ್ಯಾರ್ಥಿನಿಲಯಗಳಿವೆ. ಸಂಬಂಧಪಟ್ಟ ವಾರ್ಡನ್‌ಗಳು ಪ್ರತಿನಿತ್ಯ ಊಟ ತಿಂಡಿ ನೀಡುತ್ತಿರುವ ಫೋಟೋಗಳನ್ನು ಅಪ್‌ಲೋಡ್ ಮಾಡುವ ಜವಾಬ್ದಾರಿ ಹೊಂದಿದ್ದಾರೆ. ಪೋಷಕರು, ಪಾಲಕರು ಯಾವುದೇ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ನೀಡುತ್ತಿರುವ ಆಹಾರದ ವಿವರಗಳನ್ನು ನೋಡಬಹುದಾಗಿದೆ.

ಜಾಲತಾಣ ಬಿಡುಗಡೆಗೊಳಿಸಿ ಮಾತನಾಡಿದ ಸಮಾಜ ಕಲ್ಯಾಣ ಇಲಾಖೆಯ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಅವರು, ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯ ಹಾಗೂ ವಸತಿ ನಿಲಯಗಳಲ್ಲಿ ನೀಡುತ್ತಿರುವ ಉಪಾಹಾರ ಊಟದ ವ್ಯವಸ್ಥೆಯನ್ನು ಮುಕ್ತವಾಗಿ ಸಾರ್ವಜನಿಕರು ಜಾಲತಾಣ ಎಕ್ಸ್ ಖಾತೆ ಮೂಲಕ ವೀಕ್ಷಿಸುವ ಪೈಲೆಟ್ ಯೋಜನೆಗೆ ಚಾಮರಾಜನಗರ ಮತ್ತು ಬೀದರ್ ಜಿಲ್ಲೆಗಳನ್ನು ಆಯ್ಕೆ ಮಾಡಿಕೊಂಡಿದ್ದೇವೆ. ಈ ಎರಡು ಜಿಲ್ಲೆಗಳ ಸಫಲತೆ ಯಶಸ್ಸಿನ ಆಧಾರದ ಮೇಲೆ ಇಡೀ ರಾಜ್ಯದ ಉಳಿದ ಜಿಲ್ಲೆಗಳಿಗೂ ಈ ಯೋಜನೆಯನ್ನು ವಿಸ್ತರಿಸುವ ಗುರಿ ಹೊಂದಲಾಗಿದೆ. ಎಂದರು.

ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಎ.ಆರ್.ಕೃಷ್ಣಮೂರ್ತಿ, ಎಚ್.ಎಂ.ಗಣೇಶ್‌ಪ್ರಸಾದ್, ಎಂ.ಆರ್. ಮಂಜುನಾಥ್, ಕರ್ನಾಟಕ ರಾಜ್ಯ ಉಗ್ರಾಣ ನಿಗಮದ ಅಧ್ಯಕ್ಷ ಎಸ್. ಜಯಣ್ಣ, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರಾದ ಡಾ. ಪುಷ್ಪ ಅಮರನಾಥ್, ಕಾವೇರಿ ಜಲಾನಯನ ಯೋಜನೆ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪಿ. ಮರಿಸ್ವಾಮಿ, ಚಾಮರಾಜನಗರ ಮತ್ತು ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಹಮ್ಮದ್ ಅಸ್ಗರ್(ಮುನ್ನ), ಕೆಡಿಪಿ ಸದಸ್ಯರಾದ ಮಹದೇವಣ್ಣ, ಜಿಲ್ಲಾಧಿಕಾರಿ ಶಿಲ್ಪಾನಾಗ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತಾ, ಹೆಚ್ಚುವರಿ ಜಿಲ್ಲಾಧಿಕಾರಿ ಗೀತ ಹುಡೇದ, ಮಲೆ ಮಹದೇಶ್ವರ ವನ್ಯಜೀವ ವಿಭಾಗದ ಅರಣ್ಯ ಸಂರಕ್ಷಣಾಧಿಕಾರಿ ಡಾ. ಸಂತೋಷ್ ಕುಮಾರ್, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರಾದ ಮುನಿರಾಜು, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಜಿಲ್ಲೆಯ 31 ಹಾಡಿ–ಪೋಡುಗಳಿಗೆ ವಿದ್ಯುತ್ ಸಾರ್ಥಕ ಸಾಧನೆ

ಯಳಂದೂರು, ನ.30– ಚಾಮರಾಜನಗರ ಜಿಲ್ಲೆಯಲ್ಲಿ ವಿದ್ಯುತ್ ಕಾಣದ ಗಿರಿಜನರು ವಾಸ ಮಾಡುವ 31 ಹಾಡಿಗಳು –ಪೋಡುಗಳಿಗೆ ವಿದ್ಯುತ್ ಸಂಪರ್ಕ ನೀಡಿರುವುದು ಬಹಳ ಒಳ್ಳೆಯ ಕೆಲಸವಾಗಿದೆ ಎಂದು ಪಶು ಸಂಗೋಪನೆ, ರೇಷ್ಮೆ ಹಾಗೂ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ತಿಳಿಸಿದರು.

ಶನಿವಾರ ತಾಲೂಕಿನ ಬಿಳಿಗಿರಿರಂಗನಬೆಟ್ಟದ ಪುರಾಣಿಪೋಡಿನ ವಿದ್ಯುತ್ ಸಂಪರ್ಕ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಜಿಲ್ಲೆಯ ಕಾಡಿನಲ್ಲಿ ವಾಸ ಮಾಡುವ ಗಿರಿಜನರ 31 ಹಾಡಿ ಹಾಗೂ ಪೋಡುಗಳಿಗೆ ವಿದ್ಯುತ್ ಸಂಪರ್ಕವೇ ಇರಲಿಲ್ಲ. ಒಟ್ಟು 41.5 ಕೋಟಿ ರೂ. ವೆಚ್ಚದಲ್ಲಿ ಇಲ್ಲಿಗೆ ವಿದ್ಯುತ್ ಸಂಪರ್ಕ ನೀಡುವ ಕೆಲಸವಾಗುತ್ತಿದ್ದು 2.500 ಮನೆಗಳಿಗೆ ಇಲ್ಲಿ ವಾಸಿಸುವ ಕುಟುಂಬಗಳಿಗೆ ಇದರಿಂದ ಲಾಭವಾಗಲಿದೆ ಎಂದರು.



ಬಿಳಿಗಿರಿರಂಗನಬೆಟ್ಟದ ಪುರಾಣಿ ಪೋಡಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾಮಗಾರಿಗೆ ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಶನಿವಾರ ಭೂಮಿಪೂಜೆ ನೆರವೇರಿಸಿದರು.

ಅಲ್ಲದೆ ಇಲ್ಲಿಗೆ ರಸ್ತೆಗಳ ಅವಶ್ಯಕತೆ ಇದ್ದು 128 ಕಿ.ಮಿ. ರಸ್ತೆ ನಿರ್ಮಾಣ ಮಾಡಲು ಸರ್ಕಾರ ಅನುಮೋದನೆಯನ್ನು ನೀಡಿದೆ. ಜತೆಗೆ ಜಿಲ್ಲೆಯಲ್ಲಿ ಸೋಲಿಗಾರ ಸಮುದಾಯದ ವಾಸಿಗಳಿಗೆ 3 ಸಾವಿರ ಮನೆಗಳಿಗೆ ಬೇಡಿಕೆ ಇದ್ದು ಸಿದ್ದು ನಿವಾಸ್ ಯೋಜನೆಯಡಿಯಲ್ಲಿ ಒಂದು ಮನೆಗೆ ತಲಾ 5 ಲಕ್ಷ ರೂ. ವೆಚ್ಚದಲ್ಲಿ ಮನೆಗಳನ್ನು ನಿರ್ಮಿಸಲು ಯೋಜನೆಯನ್ನು ರೂಪಿಸಲಾಗಿದೆ ಎಂದರು.

ಶಾಸಕ ಎ.ಆರ್. ಕೃಷ್ಣಮೂರ್ತಿ ಮಾತನಾಡಿ, ಅರಣ್ಯ ಇಲಾಖೆಯಿಂದ ಗಿರಿಜನರನ್ನು ಸ್ಥಳಾಂತರಿಸುವ ಹುನ್ನಾರ ನಡೆಯುತ್ತಿದೆ. ಅರಣ್ಯ ಕಾನೂನು ಈಗ ಜಾರಿಗೆ ಬಂದಿದೆ. ಆದರೆ ಅನಾದಿ ಕಾಲದಿಂದಲೂ ಗಿರಿಜನರು ಕಾಡಿನಲ್ಲೇ ವಾಸವಾಗಿದ್ದಾರೆ. ನಮ್ಮ ತಂದೆ ಬಿ.ರಾಚಯ್ಯರವರ ಕಾಲದಲ್ಲಿ ರಾಜ್ಯದ ಪಶ್ಚಿಮಘಟ್ಟದ ವ್ಯಾಪ್ತಿಯಲ್ಲಿ ಬರುವ ಅರಣ್ಯದಂಚಿನ ಗ್ರಾಮಗಳಲ್ಲಿ ವಾಸಿಸುವ ಗಿರಿಜನರಿಗೆ ಕಂದಾಯ ಭೂಮಿಯನ್ನು ನೀಡಲಾಗಿತ್ತು. ಬುಡಕಟ್ಟು ಜನರನ್ನು ಒಕ್ಕಲೆಬ್ಬಿಸುವ ಕೆಲಸವಾಗಬಾರದು. ನಮ್ಮ ಸರ್ಕಾರ ಗಿರಿಜನರ ಬಹುದಿನದ ಬೇಡಿಕೆಯಾದ ವಿದ್ಯುತ್ ನೀಡಿದೆ. ನಾನು ಇವರಿಗೆ ವಸತಿಯನ್ನು ನೀಡಬೇಕೆಂದು ಸದನದಲ್ಲಿ ಬೇಡಿಕೆ ಇಟ್ಟಿದ್ದು ವಸತಿ ಸಚಿವರಾದ ಜಮೀರ್ ಅಹಮ್ಮದ್ ಇದನ್ನು ನೀಡುವ ಭರವಸೆಯನ್ನು ನೀಡಿದ್ದಾರೆ. ಆದಷ್ಟು ಬೇಗ ಇವರಿಗೆ ಮನೆಗಳನ್ನು ನೀಡಲು ಕ್ರಮ ವಹಿಸಲಾಗುವುದು ಎಂದರು.

ಜಿಲ್ಲಾಧಿಕಾರಿ ಶಿಲ್ಪನಾಗ್ ಮಾತನಾಡಿ, ಪುರಾಣಿ ಪೋಡಿಗೆ ಅಂಡರ್‌ಗ್ರೌಂಡ್ ಕೇಬಲ್ ಮೂಲಕ ವಿದ್ಯುತ್ ನೀಡುವ ಯೋಜನೆ ಇದಾಗಿದೆ. ನಾವು ಅರಣ್ಯ ಇಲಾಖೆಯ ವತಿಯಿಂದ ತಾಂತ್ರಿಕವಾಗಿ ಎಲ್ಲಾ ಮಂಜೂರಾತಿ ನೀಡುವುದು ಕಷ್ಟವಾಗಿದ್ದು ಸರ್ಕಾರದ ಇಲಾಖೆಗಳು ಸಂಬಂಧಪಟ್ಟ ಸಚಿವರು ಹಾಗೂ ಶಾಸಕರ ಕಾಳಜಿಯಿಂದ ಈ ಕೆಲಸ ಬೇಗವಾಗಿದೆ. ಆದಷ್ಟು ಬೇಗ ಸಂಬಂಧಪಟ್ಟ ಗುತ್ತಿಗೆದಾರರು ಈ ಕಾಮಗಾರಿಯನ್ನು ಬೇಗ ಮುಗಿಸಬೇಕು. ಪೋಡುಗಳಿಗೆ ರಸ್ತೆ ನಿರ್ಮಾಣಕ್ಕೂ ಆರ್‌ಡಿಪಿಆರ್‌ಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ರಸ್ತೆ ಕಾಮಗಾರಿಗಳು ಆರಂಭಗೊಳ್ಳಲಿದೆ. ಅಲ್ಲದೆ ಈ ಭಾಗದಲ್ಲಿ ವಾಸಿಸುವ ಜನರಿಗೆ ಮೊಬೈಲ್ ನೆಟ್‌ವರ್ಕ್‌ನ ಸಮಸ್ಯೆ ಇದ್ದು ಬಿಎಸ್‌ಎನ್‌ಎಲ್‌ನ ಟವರ್ ಹಾಕಲೂ ಸಹ ನಾವು ಮನವಿಯನ್ನು ಮಾಡಿದ್ದೇವೆ ಎಂದರು.

ಕಾರ್ಯಕ್ರಮದಲ್ಲಿ ಶಾಸಕರಾದ ಎಚ್.ಎಂ. ಗಣೇಶ್ ಪ್ರಸಾದ್, ಮಂಜುನಾಥ್, ಗ್ರಾಪಂ ಅಧ್ಯಕ್ಷ ಸಿ.ಡಿ. ಮಹದೇವ, ಉಪಾಧ್ಯಕ್ಷೆ ಕಮಲಮ್ಮ, ಸದಸ್ಯರಾದ ಪ್ರದೀಪ್ ಕುಮಾರ್, ಬಸವಣ್ಣ, ಸಾಕಮ್ಮ, ಕಾಡಾ ಅಧ್ಯಕ್ಷ ಮರಿಸ್ವಾಮಿ ಜಿಪಂ ಮಾಜಿ ಉಪಾಧ್ಯಕ್ಷೆ ಕೇತಮ್ಮ, ಸಿಇಓ ಮೋನಾರೌತ್ರ್, ಎಸ್ಪಿ ಕವಿತಾಮ, ಉಪವಿಭಾಗಾಧಿಕಾರಿ ಮಹೇಶ್, ಸೆಸ್ಕ್‌ನ ಇಇ ಸೋಮಶೇಖರ್, ತಬಸ್ಸುಮ್, ಲಿಂಗರಾಜು, ಶಂಕರ್, ಡಿವೈಎಸ್ಪಿ ಧರ್ಮೇಂದ್ರ ಆರ್‌ಎಫ್‌ಓ ನಾಗೇಂದ್ರ ನಾಯಕ, ತಹಸೀಲ್ದಾರ್ ಜಯಪ್ರಕಾಶ್, ತಾಪಂ ಇಓ ಉಮೇಶ್, ಪಿಡಿಓ ಕಾವ್ಯಾ, ಅರ್ಚಕ ಶೇಷಾದ್ರಿ, ಮುಖಂಡರಾದ ಸಿ.ಮಾದೇಗೌಡ, ದಾಸೇಗೌಡ, ವೆಂಕಟೇಶ್ ಅನೇಕರು ಇದ್ದರು.

ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದ ನಗರಸಭಾ ಸದಸ್ಯ ಮಹದೇವಯ್ಯ, ಬೆಂಬಲಿಗರು



ಚಾಮರಾಜನಗರ: ನಗರದ 30ನೇ ವಾರ್ಡ್ ಸದಸ್ಯ ಮಹದೇವಯ್ಯ ಹಾಗೂ ಬೆಂಬಲಿಗರು ಬಿಜೆಪಿ ತೊರೆದು ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರ ಸಮ್ಮುಖದಲ್ಲಿ ಕಾಂಗ್ರೆಸ್ ಸೇರ್ಪಡೆಯಾದರು.

ನಗರದ ಸತ್ತಿ ರಸ್ತೆಯಲ್ಲಿರುವ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಕಾಂಗ್ರೆಸ್ ಸೇರ್ಪಡೆಯಾದವರಿಗೆ ಪುಟ್ಟರಂಗಶೆಟ್ಟಿ ಕಾಂಗ್ರೆಸ್ ಪಕ್ಷದ ಶಲ್ಯ ಹಾಕಿ ಸ್ವಾಗತಿಸಿ ಬರಮಾಡಿಕೊಂಡರು. ಕಾಂಗ್ರೆಸ್ ತತ್ವ, ಸಿದ್ಧಾಂತಗಳನ್ನು ಒಪ್ಪಿ ಪಕ್ಷಕ್ಕೆ ಸೇರ್ಪಡೆಯಾಗುವವರಿಗೆ ಕಾಂಗ್ರೆಸ್‌ನಲ್ಲಿ ಮುಕ್ತ ಅವಕಾಶವಿದೆ. ಪಕ್ಷದಲ್ಲಿ ಕೆಲಸ ಮಾಡಿದರೆ ಅಧಿಕಾರ, ಸ್ಥಾನಮಾನ ಸಿಗುತ್ತದೆ. ಸಾಮಾಜಿಕ ನ್ಯಾಯದಡಿಯಲ್ಲಿ ಪಕ್ಷ ಜವಾಬ್ದಾರಿ ಕೊಡುತ್ತದೆ ಎಂದರು.

ನಗರಸಭಾ ಸದಸ್ಯ ಮಹದೇವಯ್ಯ, ಅರಕಲವಾಡಿ ಗ್ರಾಪಂ ಮಾಜಿ ಅಧ್ಯಕ್ಷ ಅರಕಲವಾಡಿ ಮಹದೇವಯ್ಯ, ಸಿ.ಚನ್ನಬಸವಯ್ಯ ಮಲ್ಲಯ್ಯನಹುಂಡಿ, ಶಿವಕುಮಾರ್ ರಾಮಸಮುದ್ರ, ರಾಮಯ್ಯ, ಯ.ಸಿದ್ದಪ್ಪ, ಲಿಂಗರಾಜು, ಮಹದೇವಸ್ವಾಮಿ, ಶಿವಕುಮಾರ್, ಅರಕಲವಾಡಿ ಕಾಳಯ್ಯ, ಸಿದ್ದರಾಜು ಅರಕಲವಾಡಿ, ಯ.ಮಹದೇವಯ್ಯ, ಮುಖಂಡರಾದ ಮಾದಯ್ಯ, ಹನುಮಯ್ಯ, ಯ.ನಿಂಗಯ್ಯ, ಪ್ರದೀಪ್, ಮಾದೇಶ್, ಕಿರಣ್ ಕುಮಾರ್, ದಿಲೀಪ್ ಕುಮಾರ್, ಲಿಂಗಣ್ಣ ಬಿಜೆಪಿ ತೊರೆದು ಕಾಂಗ್ರೆಸ್ ಸೇರ್ಪಡೆಯಾದರು.

ಈ ಸಂದರ್ಭದಲ್ಲಿ ಚೂಡಾಧ್ಯಕ್ಷ ಮಹಮ್ಮದ್ ಅಸ್ಗರ್, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಚಿಕ್ಕಮಹದೇವು, ಮುಖಂಡ ಮಹೇಶ್ ಕುದುರ್, ಜವರಯ್ಯ, ಎಚ್.ಎಚ್. ನಾಗರಾಜು, ಎಂ.ಶಿವಕುಮಾರ್, ಅರ್.ಎಚ್.ಲಿಂಗರಾಜು, ಸುಂದರ್ ಇತರರು ಹಾಜರಿದ್ದರು.

ಇಂದು ಜೀ಼ ಕನ್ನಡದ ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್ ಗ್ರಾಂಡ್ ಫಿನಾಲೆ

ಚಾಮರಾಜನಗರ: ಮನರಂಜನೆಗೆ ಮತ್ತೊಂದು ಹೆಸರೇ ಜೀ಼ ಕನ್ನಡ. ಜನಪ್ರಿಯ ಧಾರಾವಾಹಿಗಳಿಂದ ಮಾತ್ರವಲ್ಲದೇ ರಿಯಾಲಿಟಿ ಶೋಗಳಿಗೆ ಹೊಸತನದ ಮೆರುಗನ್ನು ನೀಡಿ ಎಲ್ಲಾ ವಯೋಮಿತಿಯ ಪ್ರೇಕ್ಷಕರ ಪ್ರೀತಿಗೆ ಪಾತ್ರವಾಗಿದೆ. ಈ ರಿಯಾಲಿಟಿ ಶೋಗಳಲ್ಲಿ ಒಂದಾದ ಎಲ್ಲರ ಅಚ್ಚುಮೆಚ್ಚಿನ ಡಾನ್ಸ್ ಕರ್ನಾಟಕ ಡಾನ್ಸ್ ಈಗ ಕೊನೆಯ ಹಂತಕ್ಕೆ ತಲುಪಿದೆ. ಡಾನ್ಸ್ ಕರ್ನಾಟಕ ಡಾನ್ಸ್ ಫಿನಾಲೆ ಡಿ.1 ರಂದು ನಗರದ ಡಾ.ಬಿ.ಆರ್.ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯಲಿದ್ದು ಸಾರ್ವಜನಿಕರು ಭಾಗವಹಿಸಬಹುದಾಗಿದೆ.

ಚಿತ್ರರಂಗದ ವಿಸ್ಮಯ ಚಿತ್ರಬ್ರಹ್ಮ
ಪುಟ್ಟಣ್ಣ ಕಣಗಾಲ್

■ಬನ್ನೂರು ರಾಜು,
ಸಾಹಿತಿ-ಪತ್ರಕರ್ತ

ಡಿಸೆಂಬರ್ 1. ಚಿತ್ರಬ್ರಹ್ಮ ಪುಟ್ಟಣ್ಣ ಕಣಗಾಲರ ಜನ್ಮದಿನ. ತನ್ನಿಮಿತ್ತ ಈ ಲೇಖನ.



'ಚಿತ್ರಬ್ರಹ್ಮ ಪುಟ್ಟಣ್ಣ ಕಣಗಾಲ್' ಎಂಬುದು ಕೇವಲ ಒಂದು ಹೆಸರಲ್ಲ. ಸಿನಿಮಾ ಲೋಕದ ಸೀಮಾಪುರುಷ, ಸಿಂಹಪುರುಷರೂ ಹೌದು. ಬೆಳ್ಳಿತೆರೆಯ ತೇರನ್ನೆಳೆದು ಏಕತಾನತೆಯಿಂದ ಅದೇ ರಾಗ ಅದೇ ಹಾಡು ಎಂಬಂತಿದ್ದ ಕನ್ನಡ ಚಿತ್ರರಂಗದ ದಿಕ್ಕು-ದೆಸೆಗಳನ್ನೆಲ್ಲಾ ಬದಲಾಯಿಸಿ ಪ್ರಯೋಗಾತ್ಮಕ ಸ್ಪರ್ಶ ನೀಡಿದ ಚಿತ್ರಬ್ರಹ್ಮ, ತಮ್ಮದೇ ಆದ ಚಿತ್ರ ಪರಂಪರೆ ಸೃಷ್ಟಿಸಿ ನೆಟ್ಟಗೆ ಏನೇನೂ ಇರದಿದ್ದ ಕಾಲದಲ್ಲೇ ಸೃಜನಾತ್ಮಕತೆಯನ್ನು ನೆಟ್ಟಿ ತಾಂತ್ರಿಕವಾಗಿ ಭವ್ಯತೆಯನ್ನು ಬಿತ್ತಿದ ಭವ್ಯಕಲ್ಪ. ಚಲನಚಿತ್ರಗಳನ್ನು ಹೀಗೂ ತೆಗೆಯಬಹುದೆಂಬ ಪರಿಕಲ್ಪನೆ ನೀಡಿ ಇತರೇ ಭಾಷಿಕರಿಗೂ ದಿಕ್ಸೂಚಿಯಾದ ದಿವ್ಯದಿಗ್ದರ್ಶಕ, ಕಲಾವಿದ-ಕಲಾವಿದೆಯರೆಂದರೆ ಹೀಗಿರಬೇಕೆಂದು ಕೆತ್ತಿ ತೋರಿಸಿದ ಕಲಾಶಿಲ್ಪಿ. ಚಿತ್ರ ತೆಗೆಯುತ್ತಾ ತೆಗೆಯುತ್ತಾ ಅದರೊಳಗೇ ತಲ್ಲೀನರಾಗಿ ಚಿತ್ರರಸಿಕರ ಮನೋ ಭೂಮಿಕೆಯನ್ನೇ ವಶಪಡಿಸಿಕೊಳ್ಳುತ್ತಿದ್ದ ಭಾವಶಿಲ್ಪಿ. ಕ್ಯಾಮರಾ ಜೊತೆ ನಿಂತರೆ ಸಾಕು ಫ್ರೇಮ್ ಟು ಫ್ರೇಮ್ ದೃಶ್ಯ ಕಾವ್ಯ ಸೃಷ್ಟಿಸಿ, ಚಿತ್ರಕಾವ್ಯ ಕಟ್ಟುತ್ತಿದ್ದ ಕಾವ್ಯ ಶಿಲ್ಪಿ. ಕಥೆ, ಚಿತ್ರಕಥೆ, ಗೀತೆ, ಅಭಿನಯ, ಛಾಯಾಗ್ರಹಣ, ಶಬ್ದಗ್ರಹಣ, ಸಂಗೀತ, ಹಿನ್ನೆಲೆ, ಮುನ್ನೆಲೆ ಹೀಗೆ ಎಲ್ಲದರಲ್ಲೂ ತಮ್ಮದೇ ಆದ ಸಿನಿಮಾ ಪ್ರಜ್ಞೆಯಿಂದ ಮಹತ್ತರ ಬದಲಾವಣೆ ತಂದು ಕನ್ನಡ ಚಿತ್ರರಂಗವನ್ನು ಕಟ್ಟುವಲ್ಲಿ ಹಗಲಿರುಳು ಶ್ರಮಿಸಿದ ಅದ್ಭುತ ನಿರ್ದೇಶಕ. ಹಾಗೆ ನೋಡಿದರೆ ಇಂದಿನ ಹೊಸತಲೆಮಾರಿನ ಬಹಳಷ್ಟು ಪ್ರಯೋಗಶೀಲ ಮನಸ್ಸುಗಳ ನಿರ್ದೇಶಕರ ಸೃಷ್ಟಿಗೆ ಪುಟ್ಟಣ್ಣನವರೇ ಮೂಲಧಾತು.ಕನಸಿನಲ್ಲೂ ನನಗೆ ಕ್ಯಾಮರಾನೇ ಕಾಣುತ್ತದೆ ಎನ್ನುತ್ತಿದ್ದ ಪುಟ್ಟಣ್ಣ ಸಿನಿಮಾ ಬದುಕಿನಲ್ಲಿ ಅಷ್ಟೊಂದು ಮಗ್ನರಾಗಿದ್ದವರು.ಒಂದು ರೀತಿ ಸಿನಿಮಾದಲ್ಲಿ ಅವರದ್ದು ಧ್ಯಾನಸ್ಥ ಮನಸ್ಸು.ಅದೇ ಅವರ ತಪಸ್ಸು. ಇಂಥ ಚಿತ್ರತಪಸ್ವಿಯಿಂದ ಬೆಳ್ಳಿತೆರೆಯಲ್ಲಿ ಮೂಡಿಬಂದ ಪ್ರತಿಯೊಂದು ಚಿತ್ರಗಳೂ ಕನ್ನಡ ಚಿತ್ರ ಚರಿತ್ರೆಯಲ್ಲಿ ಸುವರ್ಣ ಪುಟಗಳಲ್ಲಿ ದಾಖಲಾಗುವಂಥ ಅಮೂಲ್ಯ ರತ್ನಗಳೇ ಆಗಿ ಹೊಳೆಯುತ್ತಿವೆ.


"ಬೆಳ್ಳಿಮೋಡದ ಅಂಚಿನಿಂದ ಮೂಡಿ ಬಂದಾ ಮಿನುಗುತಾರೆ" ಎನ್ನುತ್ತಲೇ 1967 ರಲ್ಲಿ ಪುಟ್ಟಣ್ಣನ ಮೂಸೆಯಲ್ಲಿ ಮೊಟ್ಟ ಮೊದಲಿಗೆ ಬೆಳ್ಳಿತೆರೆಗೆ ಬಂದು ಇಡೀ ಕನ್ನಡ ನಾಡನ್ನು ಪುಳಕಿತಗೊಳಿಸಿ ನಾಡಿಗೆ 'ಮಿನುಗು ತಾರೆ' ಯನ್ನು ಬಳುವಳಿಯಾಗಿ ನೀಡಿದ 'ಬೆಳ್ಳಿ ಮೋಡ' ಚಿತ್ರ 'ಕನ್ನಡ ನಾಡಿನ ವೀರ ರಮಣಿಯ ಗಂಡು ಭೂಮಿಯ ವೀರನಾರಿಯ ಚರಿತೆಯ ನಾನು ಹಾಡುವೆ...." ಹೀಗೆ ನಾಡಾಭಿಮಾನದ ಕಹಳೆ ಮೊಳಗಿಸುತ್ತಾ "ಹಾವಿನ ದ್ವೇಷ ಹನ್ನೆರಡು ವರುಷ, ನನ್ನ ರೋಷ ನೂರು ವರುಷ...." ಎಂದು ಧೀರ ಕೆಚ್ಚನ್ನು ಪ್ರದರ್ಶಿಸುತ್ತಾ ಎಂಟೆದೆಯ ಯುವಕನ ಸಾರ್ಥಕ ಎನಿಸುವ ಪ್ರೇಮ ಕಥಾನಕವನ್ನು ನಿರೂಪಿಸುತ್ತಾ ಸಾಹಸಸಿಂಹ ವಿಷ್ಣುವರ್ಧನ್, ರೆಬೆಲ್ ಸ್ಟಾರ್ ಅಂಬರೀಶ್ ಅವರಂತಹ ಅಭಿಜಾತ ಕಲಾವಿದರನ್ನು ನಾಡಿಗೆ ನೀಡಿದ 'ನಾಗರಹಾವು' ಚಿತ್ರ. ಹೆಣ್ಣಿನ ಅಸಹಾಯಕತೆಯನ್ನು ದುರುಪಯೋಗಿಸಿಕೊಂಡು ಅವಳನ್ನು ವೇಶ್ಯೆಯನ್ನಾಗಿ ಮಾಡಿದ್ದೂ ಅಲ್ಲದೆ, ಆಕೆಯ ಕರುಳ ಕುಡಿಯನ್ನೂ ಉರಿದು ಮುಕ್ಕುವ ಕರುಣಾಜನಕ ಕಥೆ ಹೇಳುತ್ತಾ ಅಬಲೆಯ ಅಂತರಂಗದ ಭಾವೋತ್ಕರ್ಷ, ಸಂಕಟ, ಒಡಲುರಿಯನ್ನು ಅಭಿವ್ಯಕ್ತಿಸುವ 'ಗೆಜ್ಜೆಪೂಜೆ' ಚಿತ್ರ.ಸಂಗೀತವನ್ನು ದ್ವೇಷಿಸುವ ಗಂಡ, ಸಂಗೀತವನ್ನೇ ದೇಹದ ಉಸಿರಾಗಿಸಿಕೊಂಡ ಹೆಂಡತಿ. ಸಂಗೀತ ಅಥವಾ ಗಂಡನನ್ನು ಆಯ್ಕೆ ಮಾಡಿಕೊಳ್ಳಬೇಕಾದ ಸಂದಿಗ್ಧ ಪರಿಸ್ಥಿತಿಯಲ್ಲಿ ಗಂಡನಿಗೆ ತನ್ನ ತಂಗಿಯನ್ನೇ ಕೊಟ್ಟು ಮದುವೆ ಮಾಡಿ ತಾನು ಸಂಗೀತಕ್ಕೆ ಮುಡಿಪಾಗುವ ಸಂಗೀತ ಸಾಧಕಿಯೊಬ್ಬಳ ಒಳ -ಹೊರಗಿನ ಬದುಕಿನ ಅನಾವರಣದ 'ಉಪಾಸನೆ' ಚಿತ್ರ. ಕರುಳಿನ ಸಂಬಂಧವನ್ನು ಹೃದಯಂಗಮವಾಗಿ ಚಿತ್ರಿಸಿರುವ 'ಕರುಳಿನ ಕರೆ' ಚಿತ್ರ. ಯುದ್ಧದಲ್ಲಿ ತನ್ನ ಪುರುಷತ್ವ ಕಳೆದುಕೊಂಡು ಮರಳಿ ಮನೆಗೆ ಬಂದ ಸೈನಿಕನ ದುರ್ಗತಿ ಒಂದೆಡೆ, ಅವನ ತುಂಬು ಪ್ರಾಯದ ಪತ್ನಿ ಮತ್ತೋರ್ವ ಯುವಕನಲ್ಲಿ ತನ್ನ ಬಿಸಿ ಕಾಮವನ್ನು ತಣಿಸಿಕೊಳ್ಳುವ ಪರಿ ಮತ್ತೊಂದೆಡೆ, ಇಂತಹ ಪಾತ್ರಗಳನ್ನು ಕೇಂದ್ರೀಕೃತಗೊಂಡ ವಿಭಿನ್ನ ನಿರೂಪಣೆಯ 'ಎಡಕಲ್ಲು ಗುಡ್ಡದಮೇಲೆ' ಚಿತ್ರ. "ಈ ಶತಮಾನದ ಮಾದರಿ ಹೆಣ್ಣು, ಸ್ವಾಭಿಮಾನದ ಸಾಹಸಿ ಹೆಣ್ಣು, ಗುಲಾಮಳಿವಳಲ್ಲ, ಸಲಾಮು ಹೊಡೆಯಲ್ಲ..." ಎನ್ನುವ ಮಹಾ ಸ್ವಾಭಿಮಾನಿ ಹೆಣ್ಣೊಬ್ಬಳ ಮೇಲೆ ಪ್ರೇಮದ ಎರಕ ಹೊಯ್ದು ಪ್ರೀತಿಯ ಬೆಳೆ ತೆಗೆವ 'ಶುಭಮಂಗಳ' ಚಿತ್ರ. ಗಿರಿಡ್ಡಿ ಗೋವಿಂದರಾಜು ಅವರ 'ಹಂಗು', ಈಶ್ವರಚಂದ್ರರ 'ಮುನಿ ತಾಯಿ', ವೀಣಾ ಯಲಬುರ್ಗಿ ಅವರ 'ಅತಿಥಿ' ಹೀಗೆ ಮೂರು ಕಥೆಗಾರರ ಮೂರೂ ಕಥೆಗಳನ್ನು ಆಧರಿಸಿ ಒಂದು ವಿಭಿನ್ನ ಚಿತ್ರ ಮಾಡಿರುವ 'ಕಥಾ ಸಂಗಮ' ಚಿತ್ರ. ಸಾಹುಕಾರನ ದಬ್ಬಾಳಿಕೆ ಮತ್ತು ಅತ್ಯಾಚಾರ ಹಾಗೂ ಅನಾಚಾರಗಳ ವಿರುದ್ಧ ಐವರು ಯುವಕರು ಸಿಡಿದೇಳುವ ಕಥಾ ಹಂದರದ 'ಪಡುವಾರಹಳ್ಳಿ ಪಾಂಡವರು' ಚಿತ್ರ. ಮೌಢ್ಯಕ್ಕೆ ಬಲಿಯಾಗುವ ಮೂಗಿಯೊಬ್ಬಳ ಮೂಕವೇದನೆಯನ್ನು ಕರುಳು ಕತ್ತರಿಸುವಂತೆ ಸಾರುವ 'ಧರ್ಮಸೆರೆ' ಚಿತ್ರ. ಪವಿತ್ರಸ್ನೇಹ ಮತ್ತು ಪವಿತ್ರ ಪ್ರೇಮಕ್ಕೊಂದು ಹೊಸ ಭಾಷ್ಯ ಬರೆಯುವ ಪ್ರೀತಿ, ಪ್ರೇಮ, ತ್ಯಾಗಗಳ ಎತ್ತರವನ್ನು ಅಳೆದು ಹೇಳುವ 'ಅಮೃತಘಳಿಗೆ' ಚಿತ್ರ. ಒಲವಿನ ನಿರೀಕ್ಷೆಯಲ್ಲಿಯೇ ಪ್ರೀತಿಸಿದವನ ಪಾದದಲ್ಲಿ ಪ್ರಾಣ ಬಿಡುವ ನಾಯಕಿಯ ಸಮಾಧಿಯಲ್ಲಿ ನಾಯಕ ಧ್ಯಾನಸ್ಥನಾಗಿ ಒಲವನ್ನು ಸಾಕ್ಷಾತ್ಕರಿಸಿಕೊಳ್ಳುವ ಕಥಾನಕದ ಕನ್ನಡದ ಮೇರುಗಿರಿ ಡಾ. ರಾಜಕುಮಾರ್, ಹಿಂದಿಯ ಮೇರು ಪರ್ವ ಡಾ. ಪೃಥ್ವಿರಾಜ್ ಕಪೂರ್, ಅಭಿಜಾತ ಅಭಿನೇತ್ರಿ ಡಾ.ಜಮುನಾ, ಇಂತಹ ಮಹಾ ಪ್ರತಿಭೆಗಳ ಜುಗಲ್‌ಬಂದಿಯ 'ಸಾಕ್ಷಾತ್ಕಾರ' ಚಿತ್ರ. ತ್ಯಾಗಮಯಿ ಹೆಣ್ಣೊಬ್ಬಳ ಸುಸಂಸ್ಕೃತ ಬದುಕಿನ ಮೇಲೆ ಬೆಳಕು ಬೀರುವ ತಾರೆ ಭಾರತಿ ಪ್ರಧಾನ ಭೂಮಿಕೆಯಲ್ಲಿರುವ 'ಋಣ ಮುಕ್ತಳು' ಚಿತ್ರ. ನಾಟಕ ಕಂಪನಿಯಲ್ಲಿ ಬೆಳೆದು ರಂಗನಟಿಯಾಗಿ ಖ್ಯಾತಿಗಳಿಸಿ ನಂತರ ಪ್ರಸಿದ್ಧ ಸಿನಿಮಾ ತಾರೆಯಾಗುವ ಕಲಾವಿದೆಯೊಬ್ಬಳ ಪ್ರೇಮ, ವಿವಾಹ, ವಿಯೋಗ, ಸಾವು-ನೋವುಗಳ ದುರಂತವನ್ನು ಸಾಂಕೇತಿಕವಾಗಿಟ್ಟುಕೊಂಡು ರಂಗಭೂಮಿ ಕಲಾವಿದರ ನೋವು-ನಲಿವು, ಬದುಕು-ಬವಣೆಗಳನ್ನು ತೆರೆದಿಡುವ 'ರಂಗನಾಯಕಿ' ಚಿತ್ರ. ಮಾನಸಿಕವಾಗಿ ಅಸ್ವಸ್ಥಳಾಗಿದ್ದ ಯುವತಿಯೊಬ್ಬಳನ್ನು ಗುಣಪಡಿಸಿದ ಮಾನಸಿಕ ತಜ್ಞ ವೈದ್ಯನೊಬ್ಬ ಅವಳಲ್ಲೇ ಅನುರಕ್ತನಾಗುತ್ತಾನೆ. ಆದರೆ ಅವಳು ಬೇರೊಬ್ಬ ಯುವಕನನ್ನು ಪ್ರೀತಿಸತೊಡಗಿದಾಗ ತಾನೇ ಬುದ್ಧಿ ಸ್ಥಿಮಿತ ಕಳೆದುಕೊಂಡು ಹುಚ್ಚನಾಗುವ ಸೂಕ್ಷ್ಮ ಮನಸ್ಸಿನ ಸಂವೇದನೆಯ 'ಮಾನಸ ಸರೋವರ' ಚಿತ್ರ. ಸಮಾಜದ ನಾನಾ ಬಗೆಯ ವಿಷ ಬಾಣಗಳ ಬಂಧನಕ್ಕೊಳಗಾಗಿ ಮತಿಭ್ರಮಣೆಗೊಳಗಾಗುವ ಹೆಣ್ಣೊಬ್ಬಳ ಬದುಕಿನ ತಾಕಲಾಟ, ತೊಳಲಾಟವನ್ನು ಅಣು ಅಣುವಾಗಿ ತೆರೆದಿಡುವ 'ಶರಪಂಜರ' ಚಿತ್ರ. ಕೆಂಪು ದೀಪದ ಬೆಳಕಿನೊಳಗೆ ಧಗ ಧಗನೆ ಹೊತ್ತಿ ಉರಿಯುವ ಬೆಂಕಿಯಲ್ಲಿ ಸುಟ್ಟು ಕರಕಲಾಗು ವವರ ದುರಂತವನ್ನು ಕಡೆದಿಡುವ ವೇಶ್ಯಾ ಸಮಸ್ಯೆ ಮೇಲೆ ಕ್ಷ-ಕಿರಣ ಬೀರುವ 'ಮಸಣದ ಹೂವು' ಚಿತ್ರ... ಹೀಗೆ ಹೇಳುತ್ತಾ ಹೋದರೆ ಪುಟ್ಟಣ್ಣನವರ ಪ್ರತಿ ಚಿತ್ರಗಳೂ ಒಂದೊಂದು ಮಹಾ ಕಾವ್ಯವಾಗಬಲ್ಲವು. ಅವರು ನಿರ್ದೇಶಿಸಿ ಬೆಳ್ಳಿ ತೆರೆಗಿತ್ತಿರುವ ಇವು ವಿಭಿನ್ನತೆಯಿಂದ, ವಿಶಿಷ್ಟತೆಯಿಂದ, ಬಹು ವೈವಿಧ್ಯತೆಯಿಂದ ಕೂಡಿದ್ದು ಅದರಲ್ಲಿ ಅವರು ಕಥೆಗಾರಿಕೆಯನ್ನು, ಕಲೆಗಾರಿಕೆಯನ್ನು ನಿರೂಪಿಸುವ ನಿಪುಣತೆಯಂತೂ ಅಮೋಘ. ಕ್ಲೈಮ್ಯಾಕ್ಸ್‌ಗಳ ತಂತ್ರಗಾರಿಕೆಯಂತೂ ಅದ್ಭುತ!

ಪುಟ್ಟಣ್ಣನವರು ವಿಶೇಷವಾಗಿ ತಮ್ಮ ಚಿತ್ರದಲ್ಲಿನ ಹಾಡುಗಳಿಗೆ ಆದ್ಯತೆ ನೀಡುತ್ತಿದ್ದರು. ಈ ಚಿತ್ರಗೀತೆ ಹೀಗೆಯೇ ಇರಬೇಕೆಂದರೆ ಅದು ಹೀಗೆಯೇ ಇರಬೇಕು.ಅದರಲ್ಲಿ ಒಂದಕ್ಷರದ ರಾಜಿಗೂ ಅವರು ಒಪ್ಪುತ್ತಿರಲಿಲ್ಲ. ಅದಕ್ಕೇ ಅವರ ಪ್ರತಿಯೊಂದು ಚಿತ್ರಗಳ ಗೀತೆಗಳೂ ನಿತ್ಯಹರಿದ್ವರ್ಣ. ಅವುಗಳನ್ನು ಆಲಿಸಿದರೆ, ದೃಶ್ಯಕಾವ್ಯದಲ್ಲಿ ನೋಡಿದರೆ ಈ ಕ್ಷಣಕ್ಕೂ ರಸರೋಮಾಂಚನ.

ಕನ್ನಡದ ಕೀರ್ತಿಯನ್ನು ಬೆಳ್ಳಿ ತೆರೆಯ ಮೂಲಕ ಹಿಮಾಲಯದೆತ್ತರ ಎತ್ತಿ ಹಿಡಿದ ಇಂಥ ನಿರ್ದೇಶಕ ಸಾರ್ವಭೌಮ ಪುಟ್ಟಣ್ಣ ಕಣಗಾಲರು ಜನಿಸಿದ್ದು 1933 ಡಿಸೆಂಬರ್ 1ರಂದು ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲೂಕಿನ ಕಣಗಾಲು ಗ್ರಾಮದಲ್ಲಿ. ತಂದೆ ಎಸ್.ಡಿ.ರಾಮಸ್ವಾಮಯ್ಯ, ತಾಯಿ ಸುಬ್ಬಮ್ಮ. ಸಾಮಾನ್ಯವಾಗಿ ಬಹುಪಾಲು ಮಹಾನ್ ವ್ಯಕ್ತಿಗಳಂತೆಯೇ ಇವರೂ ಸಹ ಬಡತನದ ಬೆಂಕಿಯಲ್ಲಿ ಉರಿದವರು. ಆದರೆ ಬೂದಿಯಾಗದೆ ಆ ಬೆಂಕಿಯನ್ನೇ ಬೆಳಕು ಮಾಡಿಕೊಂಡು ಅರಳಿದವರು. 'ಬೆಂಕಿಯಲ್ಲಿ ಅರಳಿದ ಹೂವು' ಎಂಬ ಮಾತಿಗೆ ಅನ್ವರ್ಥವಾದವರು ಪುಟ್ಟಣ್ಣ. ಕನ್ನಡ ಮಾತ್ರವಷ್ಟೇ ಅಲ್ಲದೆ ತಮಿಳಿನಲ್ಲಿ ಮೂರು, ತೆಲುಗಿನಲ್ಲಿ ಮೂರು, ಮಲೆಯಾಳಂನಲ್ಲಿ ಆರು, ಹಿಂದಿಯಲ್ಲಿ ಒಂದು ಒಟ್ಟು ಇತರೇ ಭಾಷೆಗಳಲ್ಲಿ ಹದಿಮೂರು ಚಿತ್ರಗಳನ್ನು ನಿರ್ದೇಶಿಸಿ ಪಂಚಭಾಷೆ ನಿರ್ದೇಶಕರೆಂಬ ಕೀರ್ತಿಗೂ ಭಾಜನರಾಗಿದ್ದಾರೆ. ಬೆಳ್ಳಿಮೋಡ (1967), ಮಲ್ಲಮ್ಮನ ಪವಾಡ (1969), ಕಪ್ಪು-ಬಿಳುಪು (1969), ಗೆಜ್ಜೆಪೂಜೆ (1970), ಕರುಳಿನಕರೆ (1970), ಶರಪಂಜರ (1971), ಸಾಕ್ಷಾತ್ಕಾರ (1971), ನಾಗರಹಾವು (1972), ಎಡಕಲ್ಲುಗುಡ್ಡದ ಮೇಲೆ(1973), ಉಪಾಸನೆ(1974), ಶುಭಮಂಗಳ (1975), ಬಿಳಿಹೆಂಡ್ತಿ(1975), ಕಥಾಸಂಗಮ(1976), ಕಾಲೇಜುರಂಗ (1976), ಫಲಿತಾಂಶ (1976), ಪಡುವಾರಹಳ್ಳಿ ಪಾಂಡವರು (1978), ಧರ್ಮಸೆರೆ(1979), ರಂಗನಾಯಕಿ(1981), ಮಾನಸ ಸರೋವರ (1982), ಧರಣಿ ಮಂಡಲ ಮಧ್ಯದೊಳಗೆ(1983), ಅಮೃತಘಳಿಗೆ (1985), ಋಣಮುಕ್ತಳು(1985), ಮಸಣದ ಹೂವು(1985) ಇವು ಪುಟ್ಟಣ್ಣ ನಿರ್ದೇಶಿಸಿದ ಚಿತ್ರಗಳು. 1968ರಲ್ಲಿ 'ಸಾವಿರ ಮೆಟ್ಟಿಲು' ಎಂಬ ಚಿತ್ರವನ್ನು ಇವರು ನಿರ್ದೇಶಿಸಿದ್ದರಾದರೂ ಅದು 38ವರ್ಷಗಳ ಸುದೀರ್ಘ ಕಾಲದ ನಂತರ 2006ರಲ್ಲಿ ತೆರೆಗೆ ಬಂತು. ಪೂಚಿಕಣ್ಣು (ಮಲೆಯಾಳಂ), ಟೀಚರಮ್ಮ (ತಮಿಳು ಮತ್ತು ತೆಲುಗು), ಜಹ್ರಿಲಾ ಇನ್ಸಾನ್ (ಹಿಂದಿ) ಮುಂತಾದ ಇತರೇ ಭಾಷೆಗಳ ಚಿತ್ರಗಳನ್ನೂ ಪುಟ್ಟಣ್ಣ ನಿರ್ದೇಶಿಸಿದ್ದರು.

ಗೆಜ್ಜೆಪೂಜೆ (1969-70) ಮತ್ತು ಶರಪಂಜರ(1971-72) ಚಿತ್ರಗಳು ಭಾರತ ಸರ್ಕಾರದಿಂದ ರಾಷ್ಟ್ರ ಪ್ರಶಸ್ತಿ ಪಡೆದರೆ, ಬೆಳ್ಳಿಮೋಡ(1967-68), ಗೆಜ್ಜೆಪೂಜೆ(1969-70), ಶರಪಂಜರ (1970-71), ನಾಗರಹಾವು (1972-73), ಉಪಾಸನೆ(1974-75), ಕಥಾಸಂಗಮ(1975-76), ರಂಗನಾಯಕಿ(1980-81) ಚಿತ್ರಗಳು ಕರ್ನಾಟಕ ಸರ್ಕಾರದಿಂದ ರಾಜ್ಯ ಪ್ರಶಸ್ತಿಗಳಿಸಿದ್ದವು. ಹಾಗೆಯೇ ಬೆಳ್ಳಿಮೋಡ, ಗೆಜ್ಜೆಪೂಜೆ, ಶರಪಂಜರ, ನಾಗರಹಾವು, ಉಪಾಸನೆ ಚಿತ್ರಗಳಿಗೆ ನಿರ್ದೇಶನದ ಜೊತೆ ಚಿತ್ರಕಥೆ ಬರೆದಿದ್ದ ಪುಟ್ಟಣ್ಣ ಅವರು ವೈಯಕ್ತಿಕವಾಗಿ ಅತ್ಯುತ್ತಮ ಚಿತ್ರಕಥಾ ಕರ್ತೃ ರಾಜ್ಯ ಪ್ರಶಸ್ತಿಗೆ ಭಾಜನರಾಗಿದ್ದರು. 80ರ ದಶಕದಲ್ಲೇ ಇವರ ಸಾಧನೆಯ ಗೌರವಾರ್ಥ ದೆಹಲಿಯಲ್ಲಿ ಪುಟ್ಟಣ್ಣ ಚಿತ್ರಗಳ ಚಿತ್ರೋತ್ಸವ ನಡೆದು ದೇಶದ ಗಮನ ಸೆಳೆದಿತ್ತು. ಇದೊಂದು ದಾಖಲೆ ಕೂಡ. 1982ರಲ್ಲಿ ಕರ್ನಾಟಕ ಸರ್ಕಾರದಿಂದ ಇವರಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಲಾಗಿತ್ತು. ಕರ್ನಾಟಕ ಚಲನಚಿತ್ರ ನಿರ್ದೇಶಕರ ಸಂಘದ ಸ್ಥಾಪಕ ಅಧ್ಯಕ್ಷರೆಂಬ ಗೌರವ ಸಹ ಇವರದ್ದೇ ಆಗಿದೆ. 1979ರಲ್ಲಿ ರಷ್ಯಾದಲ್ಲಿ ನಡೆದ ಅಂತಾರಾಷ್ಟ್ರೀಯ ಚಿತ್ರೋತ್ಸವದಲ್ಲಿ ಪುಟ್ಟಣ್ಣನವರು ಭಾರತವನ್ನು ಪ್ರತಿನಿಧಿಸಿದ್ದರು. ಕರ್ನಾಟಕ ರಾಜ್ಯ ಸರ್ಕಾರ ಇವರ ಹೆಸರಿನಲ್ಲಿ ಒಂದು ಲಕ್ಷ ರೂ. ಮೌಲ್ಯದ ಪ್ರಶಸ್ತಿಯನ್ನು ಸ್ಥಾಪಿಸಿದೆ. ಹಾಗೆಯೇ ಕರ್ನಾಟಕ ರಾಜ್ಯ ಚಲನಚಿತ್ರ ಅಭಿವೃದ್ಧಿ ನಿಗಮವು ಬೆಂಗಳೂರಿನ ಚಿತ್ರಮಂದಿರವೊಂದಕ್ಕೆ 'ಪುಟ್ಟಣ್ಣ ಕಣಗಾಲ್ ಚಿತ್ರಮಂದಿರ' ಎಂದು ಹೆಸರಿಟ್ಟು ಗೌರವಿಸಿದೆ. ಕನ್ನಡ ಚಿತ್ರರಂಗಕ್ಕಷ್ಟೇ ಅಲ್ಲದೆ ಭಾರತೀಯ ಚಿತ್ರರಂಗಕ್ಕೂ ಮಹತ್ತರ ಕೊಡುಗೆ ನೀಡಿದ ಇಂಥ ಮಹಾನ್ ಚಿತ್ರ ನಿರ್ದೇಶಕ ಪುಟ್ಟಣ್ಣ ಕಣಗಾಲರು 1985 ಜೂನ್ 5ರಂದು ಹೃದಯಾಘಾತದಿಂದ ತಮ್ಮ ಇಹಲೋಕಯಾತ್ರೆ ಮುಗಿಸಿದರು.

ವಾರಭವಿಷ್ಯ



1.12.2024 ರಿಂದ 7.12.2024

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ವೃಶ್ಚಿಕ, ಚಂದ್ರ-ವೃಶ್ಚಿಕ, ಧನುಸ್ಸು, ಮಕರ, ಕುಜ-ಕಟಕ, ಬುಧ-ವೃಶ್ಚಿಕ, ಗುರು-ವೃಷಭ, ಶುಕ್ರ-ಮಕರ, ಶನಿ-ಕುಂಭ, ರಾಹು-ಮೀನ ಮತ್ತು ಕೇತು ಕನ್ಯಾ

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)
ವಾರದ ಆದಿಗೆ ವ್ಯಾಪಾರ, ವ್ಯವಹಾರಗಳಲ್ಲಿ ಆರ್ಥಿಕ ಚೇತರಿಕೆ ಕಂಡು ಬರುವುದು. ಹೊಸ ವಾಹನ ಮನೆಗೆ ಬರುವ ಸಂಭವ. ಆಹಾರ, ವಿಹಾರಗಳಿಂದ ಸಂತೋಷದ ವಾತಾವರಣ. ಕೌಟುಂಬಿಕ ಕೆಲಸಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಿರಿ. ತರಾತುರಿಯ ನಿರ್ಧಾರಗಳಿಂದ ಸಂಬಂಧಗಳಲ್ಲಿ ಒಡಕು ಉಂಟಾಗುವುದು. ವಾರದ ಕಡೆಗೆ ಧರ್ಮ ಕ್ಷೇತ್ರಕ್ಕೆ ಸಂಸಾರ ಸಮೇತ ಭೇಟಿಯಿಂದ ಮನೋಹರ್ಷ.
ಶ್ರೀ ಗಣಪತಿ ಉಪಾಸನೆ. ಶುಭ ಸಂಖ್ಯೆ-1.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)
ಪ್ರಮುಖ ವ್ಯವಹಾರಗಳಲ್ಲಿ ಸಹೋದರರ ಸಹಾಯದಿಂದ ಮುನ್ನಡೆಯುತ್ತೀರಿ. ಮನೆಯ ವಾತಾವರಣ ಸಂತೋಷದಿಂದ ಕೂಡಿರುತ್ತದೆ. ನಿಮ್ಮ ಉತ್ತಮ ಚಿಂತನೆಗಳಿಂದ ಸಾಮಾಜಿಕವಾಗಿ ಗೌರವಾದರಗಳಿಗೆ ಪಾತ್ರರಾಗುವಿರಿ. ಸರ್ಕಾರಿ ನೌಕರರು ಹಿರಿಯ ಅಧಿಕಾರಿಗಳ ಜೊತೆ ವಿಧೇಯತೆಯಿಂದ ವರ್ತಿಸಿದರೆ ಒಳ್ಳೆಯದು ಹಾಗೂ ಅಡ್ಡ ದಾರಿಯ ಹಣದಾಸೆಯಿಂದ ತೊಂದರೆಗೆ ಸಿಲುಕುವರು. ಆರೋಗ್ಯವೂ ಅಷ್ಟಕ್ಕಷ್ಟೆ.
ಶ್ರೀ ದೇವಿ ಸ್ತುತಿ. ಶುಭ ಸಂಖ್ಯೆ-5

ಮಿಥುನ (ಕ.ಕಿ.ಕು.ಘ.ಜ.ಛ.ಕೆ.ಕೊ.ಹ)
ಪ್ರತಿಫಲ ಬೇಕೆಂದರೆ ಪ್ರಯತ್ನಶೀಲರಾಗಿ. ಸರ್ಕಾರಿ ನೌಕರರಿಗೆ ಮುಂಬಡ್ತಿಯ ಜೊತೆಗೆ ವರ್ಗವಾಗುವ ಸಂಭವವಿದೆ. ಕಾರ್ಮಿಕ ವರ್ಗದವರಿಗೆ ಸರ್ಕಾರಿ ಸವಲತ್ತುಗಳು ಒದಗುವುದು. ರೇಷ್ಮೆ ಬೆಳೆ ಹಾಗೂ ರೇಷ್ಮೆ ವ್ಯಾಪಾರಿಗಳಿಗೆ ಹೆಚ್ಚಿನ ಲಾಭ ಗಳಿಕೆ ಆಗುವುದು. ದಾಯಾದಿಗಳ ಕಿರುಕುಳ ಹಾಗೂ ವಿರೋಧ ಎದುರಿಸಬೇಕಾಗುವುದು. ಅನಾರೋಗ್ಯದ ಕಾರಣ ವೈದ್ಯರ ಭೇಟಿ.
ಶ್ರೀಮನ್ನಾರಾಯಣ ನಾಮಸ್ತುತಿ. ಶುಭ ಸಂಖ್ಯೆ-8

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)
ನಿಮ್ಮ ಸ್ವಂತ ಬುದ್ಧಿಯಿಂದ ಮತ್ತು ಪ್ರಯತ್ನಗಳಿಂದ ಕಾರ್ಯ ಸಿದ್ಧಿಯಾಗುವುದು. ಕೆಲಸ ಕಾರ್ಯಗಳಲ್ಲಿ ಅನುಕೂಲವಾಗುವುದರಿಂದ ಮನಸಂತೋಷ. ಗುರುಜನರ ಮೂಲಕ ಹಳೆಯ ಸಮಸ್ಯೆಯ ಪರಿಹಾರ. ಅಷ್ಟಮ ಶನಿ ಪ್ರಭಾವವಿರುವ ಕಾರಣ ಮಾತು ಬೆಳ್ಳಿ ಮೌನ ಬಂಗಾರ ಎಂಬಂತೆ ಇರಿ. ಮನೆಯಲ್ಲಿ ಹಿರಿಯರ ಆರೋಗ್ಯ ಕೆಡುವುದರಿಂದ ವ್ಯಾಕುಲತೆ. ಸಂಚಾರಿ ನಿಯಮಪಾಲಿಸಿ ಡ್ರೈವ್ ಮಾಡಿ.
ಶ್ರೀ ಚಾಮುಂಡೇಶ್ವರಿ ಆರಾಧನೆ. ಶುಭ ಸಂಖ್ಯೆ-4

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)
ನಿತ್ಯ ಜೀವನದಲ್ಲಿ ಎದುರಾಗುವ ಎಡರು-ತೊಡರುಗಳು ಗುರುಕೃಪೆಯಿಂದ ಸೂರ್ಯನೆದುರಲಿ ಮಂಜು ಕರಗಿದಂತೆ ಅದೃಶ್ಯವಾಗುವುದು. ಚಿಂತಿಸಿದ ಕಾರ್ಯಸಫಲವಾಗುವುದು. ಆರೋಗ್ಯವನ್ನು ಮರಳಿ ಪಡೆಯುವಿರಿ. ನಿಮ್ಮ ಚಿಂತನೆಗಳು ಹಾಗೂ ಹಣ ಸದ್ವಿನಿಯೋಗವಾಗಲಿದೆ. ಬಂಧುಗಳ ಮೂಲಕ ಸೌಖ್ಯ. ಸ್ವಧರ್ಮಾಚರಣೆಯಿಂದ ಆತ್ಮ ತೃಪ್ತಿ. ವೃಥಾ ತಿರುಗಾಟಗಳನ್ನು ಅವಾಯ್ಡ್ ಮಾಡಿ.
ಶ್ರೀ ಕುಲದೇವತಾ ಪ್ರಾರ್ಥನೆ. ಶುಭ ಸಂಖ್ಯೆ-6

ಕನ್ಯಾ (ಟೊ.ಪ.ಪಿ.ಪು.ಫ.ಣ.ಶ.ಪೆ.ಪೊ)
ವಾರದ ಆದಿಗೆ ಹಣಕಾಸಿನ ವಿಚಾರದಲ್ಲಿ ಗಣನೀಯ ಚೇತರಿಕೆಯನ್ನು ಕಾಣುವಿರಿ. ದೈವಭಕ್ತಿಯಿಂದ ಮಾನಸಿಕ ಸ್ಥಿರತೆಯೂ ಉಂಟಾಗುವುದು. ಹಲವರಿಗೆ ದವಾಖಾನೆಯಿಂದ ಬಿಡುಗಡೆಯಾಗುವುದು. ನೀವು ಮಾಡುವ ಕೆಲಸ ಕಾರ್ಯಗಳಿಗೆ ಚಂದ್ರ ಧೈರ್ಯ ತುಂಬಲಿದ್ದಾನೆ. ಗೋವು ಪಾಲಕರಿಗೆ ಆದಾಯದಲ್ಲಿ ಹೆಚ್ಚಳವಾಗುವುದು. ವಾರಾಂತ್ಯಕ್ಕೆ ಕಿರು ಪ್ರವಾಸಗಳು. ಸೆಲ್ಫಿ ಹುಚ್ಚು ಆಕಸ್ಮಿಕಕ್ಕೆ ಕಾರಣವಾದೀತು.
ಶ್ರೀ ವಿಷ್ಣು ಪೂಜೆ. ಶುಭ ಸಂಖ್ಯೆ-9

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)
ಈ ಸಪ್ತಾಹದಲ್ಲಿ ಗ್ರಹಗತಿಗಳು ಅಷ್ಟು ಅನುಕೂಲವಿಲ್ಲದ ಕಾರಣ ನಾವು ಸರಿಯಿದ್ದರೆ ಅನ್ಯರಿಂದ ನಮಗೆ ತೊಂದರೆ ಇಲ್ಲ ಎಂಬ ತತ್ವವನ್ನು ಅನುಸರಿಸಿದರೆ ಒಳ್ಳೆಯದಾಗುತ್ತದೆ. ಸಮಸ್ಯೆಗಳು ಉಂಟಾದಾಗ ಶ್ರೀಮತಿಯ ಸಲಹೆಗಳೂ ಮಹತ್ವವೆನಿಸುತ್ತದೆ. ಶಾರೀರಿಕ ಬಲಹೀನತೆ ಕಾಡಬಹುದು. ವಾರದ ಕಡೆಗೆ ಸಾಮಾಜಿಕ ಮನ್ನಣೆ. ಉತ್ತಮರ ಸಹವಾಸ, ಮೃಷ್ಟಾನ್ನ ಭೋಜನ. ಸ್ತ್ರೀ ಸೌಖ್ಯ.
ಶ್ರೀ ಜ್ವಾಲಾಮಾಲಿನಿ ತ್ರಿಪುರ ಸುಂದರಿ ದರ್ಶನ. ಶುಭ ಸಂಖ್ಯೆ-3

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯ
ವಾರದಾರಂಭಕ್ಕೆ ನಿಮ್ಮ ರಾಶಿಗೆ ಬರುವ ಚಂದ್ರನಿಂದ ಆರೋಗ್ಯ, ಧನಲಾಭ, ಮನಸ್ಸಿಗೆ ಸಂತೋಷ ತರುವ ಘಟನೆಗಳು. ಬಂಧುಗಳ ಪ್ರೀತಿ-ವಿಶ್ವಾಸಗಳ ವೃದ್ಧಿ. ಪರೋಪಕಾರ ಬುದ್ಧಿಯಿಂದ ಕೀರ್ತಿಗೆ ಭಾಜನರಾಗುವಿರಿ. ಚಿಂತಿಸಿದ ಕಾರ್ಯ ಸಫಲತೆ. ನೂತನ ಬಂಗಾರ, ವಸ್ತ್ರ ಖರೀದಿಯಿಂದ ಮನಸ್ಸಂತೋಷ. ಮಕ್ಕಳ ಚಲನ-ವಲನಗಳ ಮೇಲೆ ನಿಗಾ ಇರಲಿ. ಅಪಕೀರ್ತಿ ತಂದಾರು.
ಶ್ರೀ ಯೋಗಾನರಸಿಂಹ ದರ್ಶನ. ಶುಭ ಸಂಖ್ಯೆ-1

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)
ವಾರದಾರಂಭಕ್ಕೆ ಕೈಗೊಂಡ ಕೆಲಸ ಕಾರ್ಯಗಳು ಮುನ್ನಡೆದರೂ ಸ್ವಂತ ಜನರಲ್ಲಿ ಕಲಹ, ಅಸಮಾಧಾನಗಳು ಮನಃಶಾಂತಿ ಕೆಡಿಸುತ್ತವೆ. ಸಜ್ಜನರ ಆಗ್ರಹಕ್ಕೆ ಗುರಿಯಾಗುವಂತಹ ಕೆಲಸಗಳು ನಡೆದು ಹೋಗುವುದು. ವಾರ ಮಧ್ಯೆ ವಿದ್ಯಾಪ್ರಸಂಗಗಳಲ್ಲಿ ಸಾಧನೆಯ ಗರಿಮೆ ದೊರೆಯುವುದು. ರೈತರಿಗೆ ದ್ವಿಧಾನ್ಯ ಫಸಲು ಸಮೃದ್ಧಿಯಾಗಿ ಬರುವುದು. ವಾರಾಂತ್ಯಕ್ಕೆ ಪಿಕ್‌ನಿಕ್ ಮೂಡ್. ಜಲಾಶಯಗಳ ಹತ್ತಿರ ಹುಡುಗಾಟ ಬೇಡ.
ಶ್ರೀ ರಾಘವೇಂದ್ರ ಉಪಾಸನೆ. ಶುಭ ಸಂಖ್ಯೆ-8

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)
ವಾರದ ಪೂರ್ವಾರ್ಧದಲ್ಲಿ ಮನೆಯಲ್ಲಿ ಸಂತಸದ ವಾತಾವರಣ. ಗೃಹ ನಿರ್ಮಾಣ ಕಾರ್ಯಗಳು ತ್ವರಿತಗತಿಯಲ್ಲಿ ಸಾಗಲಿದೆ. ಮನೆಯಲ್ಲಿ ಧಾರ್ಮಿಕ ಕಾರ್ಯಗಳು ಜರುಗುವುದು. ಬಂಧು ಜನರ ಮೂಲಕ ಸೌಖ್ಯ. ದ್ವಿತೀಯ ಶನಿ ಬುದ್ಧಿ ಚಾಂಚಲ್ಯ, ವ್ಯಾಪಾರದಲ್ಲಿ ನಷ್ಟಗಳು ಉಂಟಾಗುವುದು. ಸ್ವಂತ ಸ್ಥಳ ಬಿಟ್ಟು ದೂರವಾಸ ಮನೆ ಆಳುಗಳನ್ನು ನಂಬದಿರಿ. ವಾಯುವಿಹಾರ ಮಾಡುವಾಗ ಮಾಂಗಲ್ಯ ಸರ ತೆಗೆದಿಡಿ.
ಶ್ರೀ ಶನಿ ಮೂಲ ಮಂತ್ರ ಪಠಿಸಿ. ಶುಭ ಸಂಖ್ಯೆ-2


ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)
ಸಪ್ತಾಹದ ಆದಿಗೆ ಮನೋವಾಂಛಿತ ಕೆಲಸಗಳ ಕಾರ್ಯಗಳು ಸುಗಮವಾಗಿ ಸಾಗುವುದು. ಆರೋಗ್ಯ ಸುಧಾರಿಸುವುದು. ನೆರೆ ಹೊರೆಯವರ ಜೊತೆ ಪ್ರೀತಿ, ವಿಶ್ವಾಸಗಳು ವೃದ್ಧಿಸಲಿದೆ. ಬೃಹತ್ ಉದ್ಯಮಿಗಳಿಗೆ ನೌಕರ ವರ್ಗದವರ ಅಸಹಕಾರದಿಂದ ಆರ್ಥಿಕ ನಷ್ಟ, ಜನ್ಮ ಶನಿಯ ಕಾರಣ ತೇಜೋಹೀನವಾದ ವದನ, ಬಂಧುಗಳಲ್ಲಿ ವೈರತ್ವ, ಪಾಪ ಕಾರ್ಯದಲ್ಲಿ ಆಸಕ್ತಿ. ಆರೋಗ್ಯದ ಕಡೆ ಗಮನ ನೀಡಿ.
ಶ್ರೀ ಹನುಮಾನ್ ಚಾಲೀಸ ಪಠಿಸಿ. ಶುಭ ಸಂಖ್ಯೆ-5

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)
ಎಲೆಕ್ಟ್ರಿಕ್ ವಸ್ತು ವ್ಯಾಪಾರಿಗಳಿಗೆ ಹೇರಳ ಧನಲಾಭ. ಬಂಧು-ಮಿತ್ರರ ಜೊತೆ ವಿಶ್ವಾಸದಿಂದಿರುವುದು. ರಾಜದರ್ಶನದಿಂದ ಭಾಗ್ಯ ವೃದ್ಧಿ. ಸಾರ್ವಜನಿಕ ಜೀವನದಲ್ಲಿ ಗೌರವ ಪ್ರಾಪ್ತಿ. ಕೆಲವೊಮ್ಮೆ ಸೋಮಾರಿತನದಿಂದ ಕಾರ್ಯ ನಾಶ. ಅಕಾಲ ಭೋಜನದಿಂದ ಆರೋಗ್ಯ ಹದಗೆಡುವುದು. ಶತ್ರು ಪೀಡೆ, ಕಳ್ಳಕಾಕರ ಭಯ. ತಪ್ಪು ಮಾಡದೆ ನಿಂದನೆಗೆ ಗುರಿಯಾಗುವಿರಿ.
ಶ್ರೀ ಗುರು ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-4


ಮಕ್ಕಳ ಚಿತ್ರಕಥೆ

'ಚಾಣಕ್ಯ ನೀತಿ'


■ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199




ಮರ್ಯಾದೆ ಮೀರಿದವರನ್ನು ಯಾವತ್ತೂ ನಂಬಬಾರದು.




ಹಸಿದುಕೊಂಡಿರುವ ಸಿಂಹಕ್ಕಿಂತ, ಅತಿ ಆಸೆ ಹೊಂದಿರುವ ಮನುಷ್ಯನೇ ಅತ್ಯಂತ ಅಪಾಯಕಾರಿ




ಸ್ನೇಹಿತರನ್ನು ಹತ್ತಿರ ಇಟ್ಟುಕೊಳ್ಳಿ. ಆದರೆ, ನಿಮ್ಮ ಶತ್ರುಗಳನ್ನು ಇನ್ನೂ ಹತ್ತಿರದಿಂದ ಗಮನಿಸಿ.



ಎಲ್ಲಿ "ಮಾತನಾಡಬೇಕು" ಎಂದು ತಿಳಿದವನಿಗಿಂತ, ಎಲ್ಲಿ "ಮೌನವಾಗಿರಬೇಕು" ಎಂದು ತಿಳಿದವನೇ ನಿಜವಾದ ಬುದ್ಧಿವಂತ.



ಶತ್ರುವಿನೊಂದಿಗೆ ಸ್ನೇಹದಿಂದ ವರ್ತಿಸಬೇಕು.



ದೇಶದ "ಬುದ್ಧಿಜೀವಿ"ಗಳು ಮತ್ತು "ಅಪರಾಧಿ"ಗಳು ತಳಮಳಗೊಂಡಿದ್ದಾರೆಂದರೆ, ಆ ದೇಶದ ಆಡಳಿತ ನಡೆಸುವಾತ ಸರಿದಾರಿಯಲ್ಲಿದ್ದಾನೆಂದು ಅರ್ಥ.

ಮೈಸೂರು ಮಿತ್ರ

ಭಾನುವಾರ 1 ಡಿಸೆಂಬರ್ 2024

ರಾಜ್ಯದ ಎಲ್ಲಾ ಜಂಗಲ್ ಲಾಡ್ಜ್‌ಗಳ ಅಭಿವೃದ್ಧಿಗೆ ಕ್ರಮ

ಜಂಗಲ್ ಲಾಡ್ಜ್ ರೆಸಾರ್ಟ್ ಅಧ್ಯಕ್ಷ, ಶಾಸಕ ಅನಿಲ್



ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ, ಜಂಗಲ್ ರೆಸಾರ್ಟ್ ಅಧ್ಯಕ್ಷ ಅನಿಲ್ ಭೂಮಿ ಪೂಜೆ ನೆರವೇರಿಸಿದರು

ಹೆಚ್.ಡಿ.ಕೋಟೆ, ನ.30– ರಾಜ್ಯದ ಎಲ್ಲಾ ಜಂಗಲ್ ಲಾಡ್ಜ್ ರೆಸಾರ್ಟ್‌ಗಳಲ್ಲಿ ಅಗತ್ಯವಿರುವ ಎಲ್ಲಾ ಕಾಮಗಾರಿಗಳನ್ನು ಹಂತ ಹಂತವಾಗಿ ಕೈಗೆತ್ತಿಕೊಳ್ಳಲಾಗುವುದು ಎಂದು ಜಂಗಲ್ ಲಾಡ್ಜ್ ರೆಸಾರ್ಟ್ ಅಧ್ಯಕ್ಷ, ಶಾಸಕ ಅನಿಲ್ ತಿಳಿಸಿದರು.

ತಾಲೂಕಿನ ಕಾರಾಪುರದಲ್ಲಿರುವ ಕಬಿನಿ ರಿವರ್ ಲಾಡ್ಜ್‌ನಲ್ಲಿ 1.5 ಕೋಟಿ ರೂ. ವೆಚ್ಚದ ರಸ್ತೆ, ಈಜುಕೊಳ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಜಂಗಲ್ ಲಾಡ್ಜ್ ರೆಸಾರ್ಟ್‌ಗೆ ಸಂಬಂಧಿಸಿದ 26 ಸಂಸ್ಥೆಗಳಿದ್ದು, ಎಲ್ಲಾ ಸಂಸ್ಥೆಗಳು ಲಾಭದಾಯಕವಾಗಿ ನಡೆಯುತ್ತಿವೆ. ಆದ್ದರಿಂದ 9 ಕೋಟಿ ರೂ.ಗಳನ್ನು ಮುಖ್ಯಮಂತ್ರಿ ಆರೋಗ್ಯ ಪರಿಹಾರ ನಿಧಿಗೆ ಸಂಸ್ಥೆಯಿಂದ ನೀಡಲು ತೀರ್ಮಾನಿಸಲಾಗಿದ್ದು, ಚೆಕ್ ಹಸ್ತಾಂತರ ಮಾಡುವ ವೇಳೆ ಸಂಸ್ಥೆಯಲ್ಲಿ 600 ಮಂದಿ ಗುತ್ತಿಗೆ ಆಧಾರದಲ್ಲಿ ಕೆಲಸ ನಿರ್ವಹಿಸುತ್ತಿದ್ದು, ಅವರನ್ನು ಖಾಯಂ ಮಾಡಲು ಒತ್ತಾಯಿಸಲಾಗುವುದು ಎಂದರು.

ಗೋಕರ್ಣ, ಮಂಗಳೂರು, ಗದಗ, ನಾಗರಹೊಳೆಯಲ್ಲಿ ಹೊಸದಾಗಿ ಜಾಗ ಖರೀದಿಸಲು ತೀರ್ಮಾನಿಸಲಾಗಿದ್ದು, ನಾಗರಹೊಳೆಯ ವೀರನಹೊಸಹಳ್ಳಿಯಲ್ಲಿ ಜಾಗವನ್ನು ಇಂದೇ ಪರಿಶೀಲಿಸಲಾಗುತ್ತಿದೆ. ಅಲ್ಲದೇ ಎಲ್ಲಾ ನಿಗಮಗಳಿಗಿಂತ ನಮ್ಮ ನಿಗಮ ಹೆಚ್ಚು ಲಾಭದಾಯಕವಾಗಿ ನಡೆಯುತ್ತಿದೆ ಎಂದು ಸಂತಸ ವ್ಯಕ್ತಪಡಿಸಿದ ಅವರು ಉಳಿದ ಎಲ್ಲಾ ರೆಸಾರ್ಟ್‌ಗಳಿಗಿಂತ ಹೆಚ್ಚಿನ ಸೌಲಭ್ಯಗಳು ದೊರೆಯುವ ಕಾಮಗಾರಿಗಳನ್ನು ಮುಂದಿನ ದಿನಗಳಲ್ಲಿ ನಡೆಸಲಾಗುವುದು ಎಂದು ತಿಳಿಸಿದರು.

ವ್ಯವಸ್ಥಾಪಕ ನಿರ್ದೇಶಕ ಪ್ರಶಾಂತ್ ಮಾತನಾಡಿ, ತಾಲೂಕಿನ ಜಂಗಲ್ ಲಾಡ್ಜ್‌ನಲ್ಲಿ ಕಳೆದ 30 ವರ್ಷಗಳಿಂದ ಸರಿಯಾದ ರಸ್ತೆಗಳಿರಲಿಲ್ಲ. ಅಲ್ಲದೇ ಯಾವುದೇ ಹೊಸ ಕಾಮಗಾರಿಗಳು ನಡೆದಿರಲಿಲ್ಲ. ಇದೀಗ 40 ಲಕ್ಷ ವೆಚ್ಚದಲ್ಲಿ ರಸ್ತೆ, 70 ಲಕ್ಷ ವೆಚ್ಚದಲ್ಲಿ ಈಜುಕೊಳ, ಸ್ಥಳೀಯ ಗ್ರಾಮೀಣ ಕ್ರೀಡೆಗಳನ್ನು ಪ್ರೋತ್ಸಾಹಿಸುವ ಸಲುವಾಗಿ ವಿವಿಧ ಆಟಿಕೆಗಳ ಸ್ಥಾಪನೆಗೆ ಮುಂದಾಗಿದ್ದೇವೆ ಎಂದರು.

ನಮ್ಮ ಜಂಗಲ್ ಲಾಡ್ಜ್‌ನಲ್ಲಿ ಸಿರಿ ಧಾನ್ಯಗಳ ಆಹಾರ ತಯಾರಿಸಲು ಅನುಮತಿ ದೊರೆತಿದ್ದು, ಕಳೆದ ಹಲವು ದಿನಗಳಿಂದ ಪ್ರವಾಸಿಗರಿಂದ ಉತ್ತಮ ಸ್ಪಂದನೆ ದೊರೆಯುತ್ತಿದೆ ಎಂದರು.

ಕಬಿನಿ, ಬಂಡೀಪುರ, ದಾಂಡೇಲಿಯಲ್ಲಿ ಅರಣ್ಯ ತರಬೇತಿ ಕೇಂದ್ರ ತೆರೆಯಲು ಸದನದಲ್ಲಿ ಒಪ್ಪಿಗೆ ದೊರತಿದ್ದು, ಶೀಘ್ರ ಕಾಮಗಾರಿ ಆರಂಭಿಸಲಾಗುವುದು ಎಂದರು.

ಜಂಗಲ್ ಲಾಡ್ಜ್ ಮತ್ತು ರೆಸಾರ್ಟ್ ರಾಜ್ಯದ ಲಾಭದಾಯಕ ನಿಗಮಗಳಲ್ಲಿ ಒಂದಾಗಿದೆ. ಈ ರೆಸಾರ್ಟ್‌ನಲ್ಲಿ ಸ್ಥಳೀಯರಿಗೆ ಹೆಚ್ಚಿನ ಉದ್ಯೋಗ ನೀಡಲಾಗುತ್ತಿದೆ. ಶೇ.90 ರಷ್ಟು ಮಂದಿ ಸ್ಥಳೀಯರೇ ಉದ್ಯೋಗ ಮಾಡುತ್ತಿದ್ದು, ಸಂಸ್ಥೆ ಲಾಭಾಂಶದಲ್ಲಿ ಬೆಳೆಯಲು ಇದೂ ಸಹ ಕಾರಣವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಪ್ರಧಾನ ವ್ಯವಸ್ಥಾಪಕ ಯುವರಾಜ್, ಸಹಾಯಕ ವ್ಯವಸ್ಥಾಪಕ ಕಾರ್ತಿಕ್, ಕಾರ್ಯಕಾರಿ ನಿರ್ದೇಶಕಿ ಅನುಷಾ, ಮುಖಂಡರಾದ ಇಬ್ರಾಹಿಂ, ಬಸವರಾಜಪ್ಪ ಶಂಭುಲಿಂಗನಾಯಕ, ವೀರೇಗೌಡ, ಸತೀಶ್‌ಗೌಡ, ಬಾಲಯ್ಯ, ಬಸವರಾಜು, ಪರಶಿವಮೂರ್ತಿ, ರಾಜು ವಿಶ್ವಕರ್ಮ, ಮುಜಾಹಿದ್, ಸುಬ್ರಹ್ಮಣ್ಯ, ಪ್ರದೀಪ್, ವನಸಿರಿ ಶಂಕರ್, ಅಶೋಕ್, ಹೇಮಂತ್, ಮಲ್ಲೇಶ್, ಸಿದ್ದರಾಮು, ಪುಟ್ಟೇಗೌಡ, ಗಿರೀಗೌಡ, ಸ್ಟ್ಯಾನಿ ಬ್ರಿಟ್ಟೋ, ದೇವರಾಜು, ಶೈಲೇಂದ್ರ, ಮಂಜು, ಗುತ್ತಿಗೆದಾರರಾದ ಸ್ವರೂಪ್, ಕಬಿನಿ ರಿವರ್ ಲಾಡ್ಜ್ ಅಸಿಸ್ಟೆಂಟ್ ಮ್ಯಾನೇಜರ್ ಕೃಷ್ಣಪ್ರಸಾದ್, ಸಿಬ್ಬಂದಿಗಳಾದ ಭೀಮಣ್ಣ, ಚೆಲುವರಾಜು, ಕಾರ್ತಿಕ್, ಲೋಕೇಶ್, ಶಿವರಾಜು, ಶಾಂತಕುಮಾರ್, ನಂಜುಂಡಯ್ಯ, ಬಸವರಾಜು, ಕೃಷ್ಣೇಗೌಡ, ಗೋಪಾಲ್, ಗೋವಿಂದ ನಾಯಕ, ಚಂದ್ರೇಗೌಡ, ಸುರೇಶ್, ದೇವರಾಜು, ವಿಜಯಕುಮಾರ್, ರವಿ, ಅನಿಲ್, ಕುಮಾರ್, ಮಹೇಶ್, ಶಂಭುಗೌಡ, ಪ್ರಸನ್ನ, ಪುರೋಹಿತ ಸತೀಶ ಇನ್ನಿತರರಿದ್ದರು.

> ಜಂಗಲ್ ರೆಸಾರ್ಟ್‌ನಲ್ಲಿ ಯಾವುದೇ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿರಲಿಲ್ಲ. ನಾನು ಅಧ್ಯಕ್ಷನಾದ ಮೇಲೆ ವಿವಿಧ ಕಾಮಗಾರಿಗಳಿಗೆ ನನ್ನ ಕ್ಷೇತ್ರದ ಮತದಾರರ ಸಮ್ಮುಖದಲ್ಲಿ ಮೊಟ್ಟ ಮೊದಲ ಬಾರಿಗೆ ಭೂಮಿ ಪೂಜೆ ನೆರವೇರಿಸಿದ್ದೇನೆ. ಇಲ್ಲಿಗೆ ಬರುವ ಪ್ರವಾಸಿಗರಿಗೆ ಮೂಲ ಸೌಲಭ್ಯ ಕಲ್ಪಿಸಲು ಮುಂದಾಗುತ್ತೇನೆ.
> -ಅನಿಲ್, ಜಂಗಲ್ ರೆಸಾರ್ಟ್ ಅಧ್ಯಕ್ಷ.

ಸರ್ಕಾರಿ ನೌಕರರ ಸಂಘಕ್ಕೆ ಡಾ.ದೀಪು ಅಧ್ಯಕ್ಷ



ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಡಾ.ದೀಪು ಅವರನ್ನು ಬೆಂಬಲಿಗರು ಅಭಿನಂದಿಸಿದರು.

ನಂಜನಗೂಡು, ನ.30– ತಾಲೂಕು ಸರ್ಕಾರಿ ನೌಕರರ ಸಂಘದ ನೂತನ ಅಧ್ಯಕ್ಷರಾಗಿ ಶಿಕ್ಷಣ ಇಲಾಖೆಯ ಡಾ. ದೀಪು ಆಯ್ಕೆಯಾಗಿದ್ದಾರೆ.

ತಾಲೂಕು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರ ಚುನಾವಣೆ ಶನಿವಾರ ಸಂಘದ ಕಚೇರಿಯಲ್ಲಿ ನಡೆಯಿತು. ಅಧ್ಯಕ್ಷ ಸ್ಥಾನಕ್ಕೆ ಡಾ.ದೀಪು, ಮಲ್ಲಿಕಾರ್ಜುನ ಸ್ಪರ್ಧಿಸಿದ್ದರು. ನಂತರ ನಡೆದ ಚುನಾವಣೆಯಲ್ಲಿ 15 ಮತಗಳನ್ನು ಪಡೆದು ಡಾ.ದೀಪು ಅಧ್ಯಕ್ಷರಾಗಿ ಆಯ್ಕೆಯಾದರೇ, ಮಲ್ಲಿಕಾರ್ಜುನ್ 14 ಮತಗಳನ್ನು ಪಡೆದು ಪರಾಭವಗೊಂಡರು. ಸಂಘದ 29 ನಿರ್ದೇಶಕರು ಮತ ಚಲಾಯಿಸಿದರು.

ರಾಜ್ಯ ಪರಿಷತ್ ಸ್ಥಾನಕ್ಕೆ ಸ್ಪರ್ಧಿಸಿದ್ದ ದೀಪಕ್ 15 ಮತಗಳನ್ನು ಪಡೆದು ಜಯಶೀಲರಾದರೆ, ಪ್ರತಿಸ್ಪರ್ಧಿ ಸಿದ್ದರಾಜು 14 ಮತ ಪಡೆದು ಪರಾಭವಗೊಂಡರು. 16 ಮತ ಪಡೆದು ಅಂಕನಾಯಕ ಖಜಾಂಚಿ ಯಾದರೆ, ಪ್ರತಿಸ್ಪರ್ಧಿ ಕಲ್ಪನಾ 13 ಮತಗಳನ್ನು ಪಡೆದು ಪರಾಭವ ಗೊಂಡರು. ಚುನಾವಣಾಧಿಕಾರಿಯಾಗಿ ಬಾಲಸುಬ್ರಹ್ಮಣ್ಯ ಕೆಸ್ತೂರ್ ಕಾರ್ಯ ನಿರ್ವಹಿಸಿದರು.

ನೂತನ ಅಧ್ಯಕ್ಷ ಡಾ.ದೀಪು ಮಾತನಾಡಿ, ಎಲ್ಲಾ ಇಲಾಖೆಗಳ ಸರ್ಕಾರಿ ನೌಕರರ ಸಮಸ್ಯೆಗಳನ್ನು ಬಗೆಹರಿಸುವ ಜೊತೆಗೆ ಬಹುದಿನದ ಬೇಡಿಕೆಯಾಗಿರುವ ಎನ್‌ಪಿಎಸ್ ಪಿಂಚಣಿ ಸೌಲಭ್ಯ ಕಲ್ಪಿಸಲು ಹೋರಾಟ ನಡೆಸಲಾಗುವುದು. ಅಲ್ಲದೆ ಸರ್ಕಾರಿ ನೌಕರರ ಸಂಘದ ಭವನ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದರು.

ಈ ವೇಳೆ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಧರ್ಮರತ್ನಾಕರ, ಮಹೇಶ್, ದೈಹಿಕ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ರಾಜೇಂದ್ರ, ಶಿಕ್ಷಕರ ಸಂಘದ ಉಪಾಧ್ಯಕ್ಷ ಸತೀಶ್.ಎಸ್.ದಳವಾಯಿ, ಹನುಮಂತರಾಜು, ರವಿಕುಮಾರ್, ಸಿದ್ದೇಶ್, ಕಾರ್ಮಿಕ ಇಲಾಖೆ ಹರೀಶ್, ರಂಗನಾಥ್, ವೀರಭದ್ರ ಉಪಸ್ಥಿತರಿದ್ದರು.

ಆಟೋ ಚಾಲಕರ ಕನ್ನಡ ಪ್ರೇಮ ಮೆಚ್ಚುವಂತದ್ದು



ತಿರುಮಕೂಡಲು ಪಿಟೀಲು ಚೌಡಯ್ಯ ವೃತ್ತದಲ್ಲಿ ಕನ್ನಡ ರಾಜ್ಯೋತ್ಸವ ನಡೆಯಿತು.

ತಿ.ನರಸೀಪುರ, ನ.30– ಭಾಷೆಗೆ ಬಡತನವಿಲ್ಲ ಬೇಕಿರುವುದು ಹೃದಯ ಶ್ರೀಮಂತಿಕೆ ಎಂಬುದನ್ನು ತೋರಿಸಿಕೊಟ್ಟವರು ಆಟೋ ಚಾಲಕರು. ಇವರ ಕನ್ನಡ ಪ್ರೇಮ ನಿಜಕ್ಕೂ ಮೆಚ್ಚುವಂತದ್ದು. ಕನ್ನಡ ರಾಜ್ಯೋತ್ಸವವನ್ನು ಕೇವಲ ನವೆಂಬರ್‌ನಲ್ಲಿ ಆಚರಿಸುವ ಕನ್ನಡಿಗರಾಗದೇ ವರ್ಷಪೂರ್ತಿ ಕನ್ನಡದ ಹಬ್ಬ ಆಚರಣೆ ಮಾಡಬೇಕಿದೆ ಎಂದು ಸಿಪಿಐ ಧನಂಜಯ ತಿಳಿಸಿದರು.

ಪಟ್ಟಣದ ತಿರುಮಕೂಡಲು ಪಿಟೀಲು ಚೌಡಯ್ಯ ವೃತ್ತದಲ್ಲಿ ತ್ರಿವೇಣಿ ಸಂಗಮ ಆಟೋ ಚಾಲಕರ ಸಂಘದಿಂದ ನಡೆದ 69ನೇ ಕನ್ನಡ ರಾಜ್ಯೋತ್ಸವದಲ್ಲಿ ಮಾತನಾಡಿದ ಅವರು, ತಮ್ಮ ಮಕ್ಕಳಿಗೆ ಪ್ರಾಥಮಿಕ ಹಂತದಲ್ಲೇ ಕನ್ನಡದಲ್ಲಿ ಶಿಕ್ಷಣ ಕೊಡಿಸುವ ಮೂಲಕ ಮಕ್ಕಳಲ್ಲಿ ಕನ್ನಡ ಭಾಷಾ ಪ್ರೇಮ ಮೂಡಿಸಬೇಕು ಎಂದರು.

ಇಂದು ಕರ್ನಾಟಕದಲ್ಲಿ ಕನ್ನಡ ಭಾಷೆ ಬಳಕೆಯಲ್ಲಿದೆ ಎಂದರೆ ಅದಕ್ಕೆ ಆಟೋದವರ ಕೊಡುಗೆ ಬಹಳಷ್ಟಿದೆ. ಐಟಿ, ಬಿಟಿ ಉದ್ಯೋಗಿಗಳು ಕನ್ನಡಿಗರಾದರೂ ಕನ್ನಡ ಮಾತನಾಡಲು ಹಿಂಜರಿಯುತ್ತಾರೆ. ಆದರೆ ಆಟೋದವರು ತಮ್ಮ ಭಾಷೆಗೆ ತಮ್ಮ ತಂದೆ ತಾಯಿಗೆ ನೀಡುವಷ್ಟು ಗೌರವ ನೀಡುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ ಎಂದರು.

ಡಿಕೆಶಿ ಅಭಿಮಾನಿ ಬಳಗದ ಅಧ್ಯಕ್ಷ ಆರ್.ಚೇತನ್ ಮಾತನಾಡಿದರು. ಸಂಘದ ಅಧ್ಯಕ್ಷ ವಿಜಯ್, ಉಪಾಧ್ಯಕ್ಷ ಮಣಿಕಂಠ, ತಾಲೂಕು ಯುವ ಕರವೇ ಅಧ್ಯಕ್ಷ ನವೀನ್ ಕುಮಾರ್, ಚಾಲಕರಾದ ವಿನೋದ, ಮೋಹನ್, ಯೋಗೇಶ್, ನಾಗೇಂದ್ರ ಲೋಕೇಶ, ಯಶ್ವಂತ್, ಉಮೇಶ, ರಾಜೇಶ, ಸತೀಶ್ ಹಾಜರಿದ್ದರು.

ಮೂಲ ಸೌಕರ್ಯಕ್ಕೆ ಆಗ್ರಹಿಸಿ ಪ್ರತಿಭಟನೆ



ರಾಜ್ಯ ಕಬ್ಬು ಬೆಳೆಗಾರರ ಸಂಘದ ಕಾರ್ಯಕರ್ತರು ತಾಪಂ ಇಓಗೆ ಮನವಿ ಸಲ್ಲಿಸಿದರು.

ನಂಜನಗೂಡು, ನ.30– ಗ್ರಾಮೀಣ ಜನರಿಗೆ ಮೂಲ ಸೌಕರ್ಯ ಒದಗಿಸುವಲ್ಲಿ ಗ್ರಾಪಂಗಳು ವಿಫಲವಾಗಿವೆ. ಜಡ್ಡುಗಟ್ಟಿರುವ ಆಡಳಿತ ವ್ಯವಸ್ಥೆಗೆ ಚುರುಕು ಮುಟ್ಟಿಸಬೇಕು ಎಂದು ಒತ್ತಾಯಿಸಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ಕಾರ್ಯಕರ್ತರು ಶನಿವಾರ ನಗರದ ತಾಪಂಗೆ ಮುತ್ತಿಗೆ ಹಾಕಿ ಪ್ರತಿಭಟಿಸಿದರು.

ಕಚೇರಿ ಪ್ರವೇಶ ದ್ವಾರದ ಬಾಗಿಲು ಬಂದ್ ಮಾಡಿ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದ ಪ್ರತಿಭಟನಾಕಾರರು ಕರ್ತವ್ಯದಲ್ಲಿ ನಿರ್ಲಕ್ಷ್ಯ ತೋರುತ್ತಿರುವ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಒತ್ತಾಯಿಸಿದರು.

ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ರಾಜಣ್ಣ ಮಾತನಾಡಿ, ತಾಲೂಕಿನ ಹಳ್ಳಿಗಳಲ್ಲಿ ಚರಂಡಿಗಳು ಹೂಳಿನಿಂದ ತುಂಬಿ ಹೋಗಿದ್ದು, ಸ್ವಚ್ಛತೆ ಇಲ್ಲದಂತಾಗಿದೆ. ಕುಡಿಯುವ ನೀರು, ಬೀದಿ ದೀಪಗಳ ಸಮಸ್ಯೆ ಬಗ್ಗೆ ಅಧಿಕಾರಿಗಳು ಗಮನಹರಿಸುತ್ತಿಲ್ಲ. ಗ್ರಾಪಂ ವ್ಯಾಪ್ತಿಯಲ್ಲಿ ಆಸ್ತಿಗಳಿಗೆ ಇ–ಸ್ವತ್ತು ನೀಡಲು ಜನರನ್ನು ಅಲೆದಾಡಿಸುತ್ತಿದ್ದಾರೆ. ಸರಿಯಾದ ದಾಖಲೆಗಳಿದ್ದರೂ ನಮೂನೆ 9 ಮತ್ತು 11ಎ ನೀಡುತ್ತಿಲ್ಲ. ತಾಲೂಕಿನ ಎಲ್ಲಾ ಪಿಡಿಓಗಳು ನಗರ ಪ್ರದೇಶದಲ್ಲಿ ವಾಸ್ತವ್ಯ ಹೂಡಿದ್ದು, ಕೇಂದ್ರ ಸ್ಥಳದಲ್ಲಿ ಯಾರೊಬ್ಬರೂ ವಾಸವಿಲ್ಲ. ಇದರಿಂದಾಗಿ ನಾಗರಿಕರ ಕುಂದು ಕೊರತೆಗಳು ನಿವಾರಣೆಯಾಗುತ್ತಿಲ್ಲ. ಆದ್ದರಿಂದ ಕೇಂದ್ರ ಸ್ಥಳದಲ್ಲಿ ವಾಸವಿಲ್ಲದ ಸಿಬ್ಬಂದಿಗಳ ವಿರುದ್ಧ ಸರ್ಕಾರ ಕ್ರಮಕ್ಕೆ ಮುಂದಾಗಬೇಕು ಎಂದು ಒತ್ತಾಯಿಸಿದರು.

ಸ್ಥಳಕ್ಕಾಗಮಿಸಿದ ತಾಪಂ ಇಓ ಜೆರಾಲ್ಡ್ ರಾಜೇಶ್ ಮನವಿ ಸ್ವೀಕರಿಸಿ ಮಾತನಾಡಿ, ಸಾರ್ವಜನಿಕರ ಕೆಲಸ ಕಾರ್ಯಗಳಲ್ಲಿ ಅನವಶ್ಯಕ ವಿಳಂಬ ಅಥವಾ ಸಿಬ್ಬಂದಿಗಳ ನಿರ್ಲಕ್ಷ್ಯದ ಬಗ್ಗೆ ದೂರು ನೀಡಿದಲ್ಲಿ ಮುಲಾಜಿಲ್ಲದೆ ಕ್ರಮ ವಹಿಸಲಾಗುವುದು. ಹಾಗೂ ಇ–ಸ್ವತ್ತು ವಿತರಣೆಯಲ್ಲಿ ವಿಳಂಬವಾಗದಂತೆ ಎಚ್ಚರಿಕೆ ವಹಿಸಲಾಗುವುದು ಎಂದು ಭರವಸೆ ನೀಡಿದ ಹಿನ್ನೆಲೆಯಲ್ಲಿ ಪ್ರತಿಭಟನಾಕಾರರು ಧರಣಿ ಕೈಬಿಟ್ಟರು. ಪ್ರತಿಭಟನೆಯಲ್ಲಿ ಕಬ್ಬು ಬೆಳೆಗಾರರ ಸಂಘದ ಜಿಲ್ಲಾಧ್ಯಕ್ಷ ರವಿ, ರಾಜಣ್ಣ ಚಿಕ್ಕಸ್ವಾಮಿ, ಡಾ.ಹನುಮಯ್ಯ, ಮಂಜೇಶ್, ರವಿ, ಮಹೇಶ್, ಸಿದ್ಧರಾಜು, ಗಣೇಶ, ಮಹದೇವಸ್ವಾಮಿ, ಭುಜಂಗಪ್ಪ, ಕುಮಾರ್, ಮರಿಸ್ವಾಮಿ, ದೇವಣ್ಣ ಮತ್ತಿತರರಿದ್ದರು.

ಸಾಹಿತ್ಯ ಸಮ್ಮೇಳನ ಕನ್ನಡದ ಜಾಗೃತಿ ಮೂಡಿಸಲಿ

ಪೂರ್ವಭಾವಿ ಸಭೆಯಲ್ಲಿ ಡಾ.ವೈ.ಡಿ.ರಾಜಣ್ಣ ಅಭಿಪ್ರಾಯ



ಪೂರ್ವಭಾವಿ ಸಭೆಯಲ್ಲಿ ವೈ.ಡಿ.ರಾಜಣ್ಣ ಮಾತನಾಡಿದರು.

ಸರಗೂರು, ನ.30– ಕನ್ನಡ ಸಾಹಿತ್ಯ ಸಮ್ಮೇಳನಗಳು ಕನ್ನಡದ ಪರಂಪರೆ ಹೇಳುತ್ತಲೇ ಕನ್ನಡದಲ್ಲಿ ತಂತ್ರಜ್ಞಾನದ ಜಾಗೃತಿ ಮೂಡಿಸುವ ಕೆಲಸ ಮಾಡಬೇಕು. ಸಮ್ಮೇಳನ ನಡೆಸುವ ತಾಲೂಕು ಮತ್ತು ಜಿಲ್ಲೆಗಳ ಹಿನ್ನೆಲೆ ಬಗ್ಗೆ ಬೆಳಕು ಚೆಲ್ಲುವ ಕಾರ್ಯ ಮಾಡಬೇಕು. ಇದೇ ಕನ್ನಡ ರಾಜ್ಯೋತ್ಸವ ಹಾಗೂ ಕನ್ನಡ ಸಾಹಿತ್ಯ ಸಮ್ಮೇಳನಗಳ ಆಶಯ ಎಂದು ಮೈಸೂರು ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಶನಿವಾರ ಜ.17ರಂದು ಪಟ್ಟಣದಲ್ಲಿ ನಡೆಯುವ ಸಾಹಿತ್ಯ ಸಮ್ಮೇಳನದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಜನಪ್ರತಿನಿಧಿಗಳು, ಶಿಕ್ಷಣ ತಜ್ಞರು, ಸಾಹಿತಿಗಳು, ಕೃಷಿಕರು, ಸಂಘ ಸಂಸ್ಥೆ ಪ್ರಮುಖರು, ಸಂಗೀತ, ರಂಗಭೂಮಿ ಕ್ಷೇತ್ರದ ದಿಗ್ಗಜರು ಹೀಗೆ ಸಮಾಜದ ಎಲ್ಲಾ ಸ್ತರದ ಜನರು ನಾಡು, ಭಾಷೆ ಹೆಸರಲ್ಲಿ ಕಲೆತು ನಾಡಿನ ಏಳಿಗೆಗೆ ಚಿಂತಿಸುವ ಚರ್ಚಿಸುವ ವೇದಿಕೆ ಸಮ್ಮೇಳನದ ವೇದಿಕೆ ಆಗಿರಬೇಕು. ಆ ಕಾರಣಕ್ಕೆ ಇಂದು ವಿವಿಧ ಉಪ ಸಮಿತಿಗಳ ರಚನೆ ಮಾಡಿ ಸಮ್ಮೇಳನದ ಯಶಸ್ಸಿಗೆ ದುಡಿಯಲು ಆಗಮಿಸಿರುವುದು ಶ್ಲಾಘನೀಯ ಎಂದರು.

ಜಿಪಂ ಮಾಜಿ ಸದಸ್ಯ ಪಿ.ರವಿ, ತಾಲೂಕು ಕಸಾಪ ಅಧ್ಯಕ್ಷ ಎಂ.ಕೆಂಡಗಣ್ಣಸ್ವಾಮಿ ಮಾತನಾಡಿದರು. ಸಭೆಯಲ್ಲಿ ಕೋಶಾಧ್ಯಕ್ಷ ಚಿಕ್ಕಣ್ಣ, ಪ್ರಧಾನ ಕಾರ್ಯದರ್ಶಿ ನಿಂಗರಾಜು, ಸಹ ಕಾರ್ಯದರ್ಶಿ ಮಹೇಶ್, ರಘುರಾಂ, ಸರಗೂರು ಹೋಬಳಿ ಅಧ್ಯಕ್ಷ ಎಂ.ಪಿ.ಮಂಜುನಾಥ್, ಕಂದಲಿಕೆ ಹೋಬಳಿ ಅಧ್ಯಕ್ಷ ಶಿವರಾಜು, ಗೌರವ ಸಲಹೆಗಾರ ಭೀಮರಾಜು, ಎಸ್.ಆರ್.ನಾಗರಾಮ್, ಚಂದ್ರು, ಪಪಂ ಉಪಾಧ್ಯಕ್ಷ ಶಿವಕುಮಾರ್, ಸದಸ್ಯರಾದ ಶ್ರೀನಿವಾಸ್, ನೂರಾಳಸ್ವಾಮಿ, ಮಾಜಿ ಅಧ್ಯಕ್ಷ ಶಿವರಾಜು, ಮಾಜಿ ಸದಸ್ಯ ನಾಗರಾಜರಾವ್, ರಮೇಶ್, ಶಿವಣ್ಣ, ಬಸವರಾಜು, ಎಸ್.ಎ.ಸಾಂಬವಮೂರ್ತಿ, ಭಾಸ್ಕರ್, ಎಸ್.ಎನ್.ನಾಗರಾಜು, ಎಸ್.ಎನ್.ಮೋಹನ್ ಕುಮಾರ್, ಎಸ್.ಬಿ.ನಾಗರಾಜು, ಶಿವಶಂಕರನ್, ವಿವೇಕಾನಂದ ಆಸ್ಪತ್ರೆ ಮೇಲ್ವಿಚಾರಕ ಬಂಗಾರಶೆಟ್ಟಿ, ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಪಿ.ಜವರನಾಯಕ, ಮುಖಂಡರಾದ ಗಿರೀಶ್, ಶ್ರೀನಿವಾಸ್ ಮಲ್ಲೇಶ್, ಬೆಟ್ಟಸ್ವಾಮಿ, ವರ್ತಕರ ಸಂಘದ ಅಧ್ಯಕ್ಷ ಶ್ರೀನಿವಾಸ್, ಎಸ್.ಪಿ.ಪ್ರಸಾದ್, ಮಂಜುನಾಥ್, ಬಸವಣ್ಣ, ಶಿಕ್ಷಕರಾದ ಬಂಗಾರಯ್ಯ, ರಾಮೇಗೌಡ, ರವಿಕುಮಾರ್, ಸುಭಾನ್, ಬಿಲ್ಲೇಶ್, ಜಲೀಲ್, ಜೋಗಪ್ಪ, ಎಸ್.ಸಿ.ವೆಂಕಟೇಶ್, ಪ್ರಕಾಶ್, ಚಿನ್ನಣ್ಣ, ಸೋಮಶೇಖರ್ ಇನ್ನಿತರರಿದ್ದರು.

ಇಂದು ಅಭಿವೃದ್ಧಿ ಕಾಮಗಾರಿಗೆ ಚಾಲನೆ

ನಂಜನಗೂಡು, ನ.30– ತಾಲೂಕಿನ ದೇವನೂರು ಗ್ರಾಮದಲ್ಲಿ ಡಿ.1ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಗುರು ಮಲ್ಲೇಶ್ವರ ದಾಸೋಹ ಮಠದ ಯಾತ್ರಿ ನಿವಾಸ ಕಟ್ಟಡ ಹಾಗೂ ದೊಡ್ಡಕವಲಂದೆ–ದೇವನೂರು ಸಂಪರ್ಕ ರಸ್ತೆ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಲಿದ್ದಾರೆ ಎಂದು ಕಾಂಗ್ರೆಸ್ ಮುಖಂಡ ದೇವನೂರು ಮಹದೇವಪ್ಪ ತಿಳಿಸಿದ್ದಾರೆ.

1.5 ಕೋಟಿ ವೆಚ್ಚದ ಗುರು ಮಲ್ಲೇಶ್ವರ ದಾಸೋಹ ಮಠದ ಯಾತ್ರಿ ನಿವಾಸ ಕಟ್ಟಡ ಹಾಗೂ 3.5 ಕೋಟಿ ವೆಚ್ಚದಲ್ಲಿ ದೊಡ್ಡಕವಲಂದೆ–ದೇವನೂರು ಸಂಪರ್ಕ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಿದ್ದಾರೆ. ಈ ವೇಳೆ ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ ಶಾಸಕ ದರ್ಶನ್, ಸಂಸದ ಸುನೀಲ್ ಬೋಸ್, ವಿಧಾನ ಪರಿಷತ್ ಸದಸ್ಯರಾದ ಡಾ.ತಿಮ್ಮಯ್ಯ, ಡಾ.ಯತೀಂದ್ರ ಭಾಗವಹಿಸಲಿದ್ದಾರೆ ಎಂದು ತಿಳಿಸಿದ್ದಾರೆ.

ಚಿರತೆ ದಾಳಿ ಹಸು ಬಲಿ

ಮಲ್ಲುಂಡಿ, ನ.30– ಹಾಡಹಗಲೇ ಚಿರತೆ ದಾಳಿಗೆ ಹಸು ಬಲಿಯಾಗಿ ಮತ್ತೊಂದು ಹಸು ಗಾಯಗೊಂಡಿರುವ ಘಟನೆ ಇಲ್ಲಿಗೆ ಸಮೀಪದ ಯಡಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಮಹದೇವಪ್ಪ ಅವರು ತಮ್ಮ ಜಮೀನಿನಲ್ಲಿ ಹಸುಗಳನ್ನು ಮೇಯಲು ಕಟ್ಟಿ ಹಾಕಿ ಕೆಲಸ ಮಾಡುತ್ತಿದ್ದ ವೇಳೆ ಚಿರತೆ ಏಕಾಏಕಿ ಹಸುಗಳ ಮೇಲೆ ದಾಳಿ ನಡೆಸಿ ಒಂದನ್ನು ಬಲಿ ಪಡೆದು ಅರೆಬರೆ ತಿಂದು ಹಾಕಿ, ಮತ್ತೊಂದು ಹಸು ಮೇಲೆ ದಾಳಿ ನಡೆಸಿ ಗಾಯಗೊಳಿಸಿದೆ. ಈ ವೇಳೆ ಚಿರತೆ ಕಂಡ ರೈತರು ಚೀರಾಡಿದ್ದರಿಂದ ಗಾಬರಿಗೊಂಡ ಚಿರತೆ ಅಲ್ಲಿಂದ ಪರಾರಿಯಾಗಿದೆ.

ಗ್ರಾಮದಲ್ಲಿ ಚಿರತೆ ಹಾವಳಿ ಹೆಚ್ಚಾಗಿದೆ. ರೈತರು ಜಮೀನುಗಳಿಗೆ ತೆರಳಿ ಕೃಷಿ ಚಟುವಟಿಕೆ ಕೈಗೊಳ್ಳಲು ಭಯಗೊಂಡಿದ್ದಾರೆ. ಹೀಗಾಗಿ ಅರಣ್ಯಾಧಿಕಾರಿಗಳು ಬೋನಿಟ್ಟು ಚಿರತೆ ಸೆರೆಗೆ ಮುಂದಾಗಬೇಕು. ಅಲ್ಲದೇ ಹಸು ಕಳೆದುಕೊಂಡ ರೈತನಿಗೆ ಸೂಕ್ತ ಪರಿಹಾರ ಒದಗಿಸಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದರು. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯಾಧಿಕಾರಿಗಳು ಪರಿಶೀಲನೆ ನಡೆಸಿ ಸೂಕ್ತ ಪರಿಹಾರ ಕೊಡಿಸುವ ಭರವಸೆ ನೀಡಿದರು.

ಯುವಕನ ಶವ ರಾಗಿ ಹೊಲದಲ್ಲಿ ಪತ್ತೆ



ಹುಣಸೂರು, ನ.30– ಸಂಬಂಧಿಕರ ಮನೆಗೆ ತೆರಳಿದ್ದ ಯುವಕನ ಶವ ರಾಗಿ ಹೊಲದಲ್ಲಿ ಪತ್ತೆಯಾಗಿದ್ದು, ಪುತ್ರನ ಸಾವಿನ ಬಗ್ಗೆ ಅನುಮಾನ ವ್ಯಕ್ತಪಡಿಸಿ ಮೃತನ ತಂದೆ ಹುಣಸೂರು ಗ್ರಾಮಾಂತರ ಠಾಣೆಗೆ ದೂರು ನೀಡಿದ್ದಾರೆ.

ತಾಲೂಕಿನ ಕಸಬಾ ಹೋಬಳಿ ಗೌರಿಪುರ ಗ್ರಾಮದ ನಿವಾಸಿ ವರದರಾಜು ಅವರ ಪುತ್ರ ಶಶಿಕುಮಾರ್(28) ಸಾವನ್ನಪ್ಪಿದವರು. ಈತ ಶುಕ್ರವಾರ ಸಂಜೆ ಪಿರಿಯಾಪಟ್ಟಣ ತಾಲೂಕಿನ ಮಾಕೋಡು ಗ್ರಾಮದ ಸಂಬಂಧಿಕರ ಮನೆಗೆ ಹೋಗುವುದಾಗಿ ತಿಳಿಸಿ ತನ್ನ ಸ್ಪ್ಲೆಂಡರ್ ಬೈಕ್ (ಕೆಎ–04, ಇಪಿ–2864)ನಲ್ಲಿ ತೆರಳಿದ್ದಾನೆ. ಆದರೆ ಕಟ್ಟೆಮಳಲವಾಡಿ– ಮಾಕೋಡು ರಸ್ತೆಯ ಚಿಟ್ಟೆಕ್ಯಾತನಹಳ್ಳಿ ಸರ್ಕಲ್‌ನಿಂದ 2 ಕಿಮೀ ಮುಂದೆ ರಾಗಿ ಹೊಲದಲ್ಲಿ ಶಶಿಕುಮಾರ್ ಶವ ಪತ್ತೆಯಾಗಿದೆ. ಬೈಕ್ ರಸ್ತೆಯಲ್ಲಿ ಬಿದ್ದಿದ್ದು, ಮೃತನ 2 ಕಾಲು, ತಲೆಗೆ ತೀವ್ರ ಪೆಟ್ಟು ಬಿದ್ದು ಮೃತಪಟ್ಟಿದ್ದಾನೆ. ಶನಿವಾರ ಬೆಳಗ್ಗೆ ಜಮೀನಿಗೆ ಹೋದ ರೈತರು ನೀಡಿದ ಮಾಹಿತಿ ಮೇರೆಗೆ ಸ್ಥಳಕ್ಕೆ ಭೇಟಿ ನೀಡಿದ ಪೊಲೀಸರು ಪರಿಶೀಲನೆ ನಡೆಸಿದರು. ಪುತ್ರನ ಸಾವಿನ ಬಗ್ಗೆ ಅನುಮಾನವಿದ್ದು, ತನಿಖೆ ನಡೆಸಿ ನ್ಯಾಯ ದೊರಕಿಸಿಕೊಡಬೇಕೆಂದು ಮೃತನ ತಂದೆ ವರದರಾಜು ಗ್ರಾಮಾಂತರ ಠಾಣೆಗೆ ದೂರು ನೀಡಿದ್ದಾರೆ.

ಪ್ರಕರಣ ದಾಖಲಿಸಿಕೊಂಡ ಪೊಲೀಸರು ಶವವನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ರವಾನಿಸಿ ಶವದ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಒಪ್ಪಿಸಿದರು. ಸ್ಥಳಕ್ಕೆ ಡಿವೈಎಸ್‌ಪಿ ಗೋಪಾಲಕೃಷ್ಣ, ಇನ್ಸ್‌ಪೆಕ್ಟರ್ ಮುನಿಸ್ವಾಮಿ, ಎಸ್‌ಐ ರಾಮು, ಸಿಬ್ಬಂದಿಗಳು ಭೇಟಿ ನೀಡಿದ್ದರು.

ವಿಜೃಂಭಣೆಯ ಅಯ್ಯಪ್ಪಸ್ವಾಮಿ ಹೂವಿನ ಪಲ್ಲಕ್ಕಿ ಉತ್ಸವ



ಮೂಗೂರಿನಲ್ಲಿ ಶ್ರೀಅಯ್ಯಪ್ಪಸ್ವಾಮಿ ಹೂವಿನ ಪಲ್ಲಕ್ಕಿ ಉತ್ಸವ ವಿಜೃಂಭಣೆಯಿಂದ ನಡೆಯಿತು.

ಚುಂಚನಕಟ್ಟೆ ಜಲಪಾತೋತ್ಸವಕ್ಕೆ ಚಾಲನೆ



ಚುಂಚನಕಟ್ಟೆ ಧನುಷ್ಕೋಟಿ ಜಲಪಾತೋತ್ಸವಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಶನಿವಾರ ಚಾಲನೆ ನೀಡಿದರು.

ಚುಂಚನಕಟ್ಟೆ, ನ.30(ಎಂಕೆ)– ಜಿಲ್ಲಾಡಳಿತ, ಜಿಪಂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಪ್ರವಾಸೋದ್ಯಮ ಇಲಾಖೆ ಸಂಯುಕ್ತಾಶ್ರಯದಲ್ಲಿ ಆಯೋಜಿಸಿರುವ ಎರಡು ದಿನಗಳ ಚುಂಚನಕಟ್ಟೆ ಧನುಷ್ಕೋಟಿ ಜಲಪಾತೋತ್ಸವಕ್ಕೆ ಜಿಲ್ಲಾ ಉಸ್ತುವಾರಿ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ನಮ್ಮ ನಾಡು ನುಡಿ, ಆಚಾರ–ವಿಚಾರ ಹಾಗೂ ಸಂಸ್ಕೃತಿ ಉಳಿಸಿ–ಬೆಳೆಸಲು ಇಂತಹ ಉತ್ಸವಗಳನ್ನು ಆಚರಣೆ ಮಾಡಲಾಗುತ್ತದೆ. ಎರಡು ದಿನಗಳ ಚುಂಚನಕಟ್ಟೆ ಧನುಷ್ಕೋಟಿ ಜಲಪಾತೋತ್ಸವಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸುವಂತೆ ಕೋರಿದರು.

ಪಶು ಸಂಗೋಪನೆ ಹಾಗೂ ರೇಷ್ಮೆ ಇಲಾಖೆ ಸಚಿವ ಕೆ.ವೆಂಕಟೇಶ್ ಮಾತನಾಡಿ, ಈ ವರ್ಷ ಉತ್ತಮ ಮಳೆಯಾಗಿ ಕೆರೆ–ಕಟ್ಟೆ, ಡ್ಯಾಂಗಳು ತುಂಬಿವೆ. ಜನರು ಸಮೃದ್ಧಿಯಿಂದ ಜೀವನ ನಡೆಸಲು ಸಾಧ್ಯವಾಗಿದೆ. ನಾವು ಗಗನಚುಕ್ಕಿ ಭರಚುಕ್ಕಿ ಜಲಪಾತೋತ್ಸವ ಮಾಡಿದೆವು. ಇಂದು ಚುಂಚನಕಟ್ಟೆಯಲ್ಲಿ ಹಮ್ಮಿಕೊಳ್ಳಲಾಗಿದೆ. ಇಂತಹ ಉತ್ಸವಗಳ ಮೂಲಕ ಜನರಿಗೆ ಉತ್ತಮ ಮನರಂಜನೆ ನೀಡಲಾಗುತ್ತದೆ. ಸಾರ್ವಜನಿಕರು ಈ ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳಿ ಎಂದು ಸಲಹೆ ನೀಡಿದರು.

ಶಾಸಕ ಡಿ.ರವಿಶಂಕರ್ ಮಾತನಾಡಿ, ಈ ಭಾಗದ ರೈತರ ಜೀವನಾಡಿಯಾಗಿರುವ ಶ್ರೀರಾಮ ಸಕ್ಕರೆ ಕಾರ್ಖಾನೆಯನ್ನು ನೋಂದಣಿ ಮಾಡಿಸಿ ಮುಂದಿನ ಜನವರಿಯಿಂದ ಪ್ರಾರಂಭಿಸಲಾಗುವುದು. ಕಪ್ಪಡಿಯ ಸೇತುವೆಯನ್ನು 25 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗುವುದು ಎಂದರು.

ಸಾಲಿಗ್ರಾಮ ಹೊಸ ತಾಲೂಕು ಆಗಿದೆ. ಆದರೆ ತಾಲೂಕಿನಲ್ಲಿ ಮಿನಿ ವಿಧಾನ ಸೌಧವಿಲ್ಲ. ತಾಲೂಕು ಕಚೇರಿ ನಿರ್ಮಾಣ ಸಂಬಂಧ ಕಂದಾಯ ಸಚಿವರು ಮುಂದಿನ ಬಜೆಟ್‌ನಲ್ಲಿ ಸೇರಿಸಲಾಗುವುದು ಎಂದು ಭರವಸೆ ನೀಡಿದ್ದಾರೆ. ಅದೇ ರೀತಿ ತಾಲೂಕು ಮಟ್ಟದಲ್ಲಿ 100 ಹಾಸಿಗೆಗಳ ಆಸ್ಪತ್ರೆ ನಿರ್ಮಾಣ ಮಾಡಲಾಗುವುದು ಎಂದರು.

ಶಾಸಕ ಕೆ.ಹರೀಶ್ ಗೌಡ, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ಜಿಪಂ ಸಿಇಓ ಕೆ.ಎಂ.ಗಾಯತ್ರಿ, ಎಸ್‌ಪಿ ವಿಷ್ಣುವರ್ಧನ್, ಕುಪ್ಪ ಗ್ರಾಪಂ ಅಧ್ಯಕ್ಷೆ ಸವಿತಾ ಶ್ರೀನಿವಾಸ್, ಉಪಾಧ್ಯಕ್ಷೆ ಗೀತಾ ಕಾಂತರಾಜ್ ಮತ್ತಿತರರಿದ್ದರು.

> ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕೆ.ಆರ್.ನಗರ ಕ್ಷೇತ್ರದ ಮೇಲೆ ಹೆಚ್ಚು ಪ್ರೀತಿ. ಇಲ್ಲಿನ ಶ್ರೀರಾಮ ಸಕ್ಕರೆ ಕಾರ್ಖಾನೆಯನ್ನು ಖಾಸಗಿ ಅವರಿಗೆ ವಹಿಸಿ ಉತ್ತಮವಾಗಿ ನಡೆಸುವ ಉದ್ದೇಶವನ್ನು ಸರ್ಕಾರ ಹೊಂದಿದೆ.
> - ಡಾ.ಹೆಚ್.ಸಿ.ಮಹದೇವಪ್ಪ, ಜಿಲ್ಲಾ ಉಸ್ತುವಾರಿ ಸಚಿವ

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರರನ್ನು ಟೀಕಿಸುತ್ತಿರುವ

ಬಸನಗೌಡ ಪಾಟೀಲ್ ಯತ್ನಾಳ್‌ರನ್ನು ಪಕ್ಷದಿಂದ ಉಚ್ಚಾಟಿಸಿ

ವಿಧಾನ ಪರಿಷತ್ ಮಾಜಿ ಸದಸ್ಯ ಸಿ.ರಮೇಶ್ ಒತ್ತಾಯ



ಸಭೆಯಲ್ಲಿ ವಿಧಾನ ಪರಿಷತ್ ಮಾಜಿ ಸದಸ್ಯ ಸಿ.ರಮೇಶ್ ಮಾತನಾಡಿದರು.

ತಿ.ನರಸೀಪುರ, ನ.30– ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಬಗ್ಗೆ ಹಾದಿ ಬೀದಿಯಲ್ಲಿ ನಿಂತು ಹೇಳಿಕೆ ನೀಡಿ ಮುಜುಗರ ಉಂಟು ಮಾಡುತ್ತಿರುವ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರನ್ನು ಹೈಕಮಾಂಡ್ ಕೂಡಲೇ ಪಕ್ಷದಿಂದ ಉಚ್ಚಾಟಿಸಬೇಕು ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಸಿ.ರಮೇಶ್ ಒತ್ತಾಯಿಸಿದರು.

ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ನಡೆದ ಬಿಜೆಪಿ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ಯತ್ನಾಳ್ ಅವರು ಪಕ್ಷದ ಹಿರಿಯ ನಾಯಕರ ಬಗ್ಗೆ ಹಗುರವಾಗಿ ಮಾತನಾಡುವ ಮೂಲಕ ಸಣ್ಣತನ ಪ್ರದರ್ಶಿಸಿದ್ದಾರೆ. ನಾನು ಪ್ರಧಾನಿ ಮೋದಿ ಅವರ ಶಿಷ್ಯ ಎಂದು ಹೇಳಿಕೊಳ್ಳುವ ಯತ್ನಾಳ್, ಮೋದಿ ಅವರ ನೇಮಕಾತಿ ಬಗ್ಗೆ ಟೀಕೆ ಮಾಡುತ್ತಾರೆ. ಮೋದಿಯವರು ಮನೆಯಲ್ಲಿದ್ದ ವಿಜಯೇಂದ್ರರನ್ನು ಕರೆತಂದು ರಾಜ್ಯಾಧ್ಯಕ್ಷರನ್ನಾಗಿ ಮಾಡಿದ್ದಾರಾ? ಯತ್ನಾಳ್‌ಗೆ ತಲೆಯಲ್ಲಿ ಬುದ್ಧಿ ಇಲ್ಲವಾ, ವಿಜಯೇಂದ್ರ ಕೆಳ ಹಂತದಿಂದ ಪಕ್ಷ ಸಂಘಟಿಸಿ ಬೆಳೆಯುತ್ತಿರುವ ಯುವ ರಾಜಕಾರಣಿ. ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಸೇರಿದಂತೆ ಅನೇಕ ಜವಾಬ್ದಾರಿ ವಹಿಸಿಕೊಂಡು ಕಾಂಗ್ರೆಸ್ ಭದ್ರಕೋಟೆಯಾಗಿದ್ದ ಕೆ.ಆರ್.ಪೇಟೆ ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ಬಿಜೆಪಿಗೆ ಗೆಲುವು ತಂದು ಕೊಟ್ಟಿದ್ದಾರೆ. ಹಾಗಾಗಿ ಮೋದಿಯವರು ನೇಮಕ ಮಾಡಿದ ರಾಜ್ಯಾಧ್ಯಕ್ಷರ ಆಯ್ಕೆಯನ್ನು ಪಕ್ಷದ ಎಲ್ಲರೂ ಗೌರವಿಸಬೇಕಿದೆ. ಆದರೆ ಯತ್ನಾಳ್ ಅವರಿವರ ಮಾತು ಕೇಳಿ ಪಕ್ಷದ ನಾಯಕರ ವಿರುದ್ಧವೇ ಹೇಳಿಕೆ ಕೊಡುವ ಕೀಳು ಮಟ್ಟಕ್ಕೆ ಇಳಿದಿರುವುದು ಖಂಡನೀಯ ಎಂದು ಕಿಡಿಕಾರಿದರು.

ರಾಜ್ಯದಲ್ಲಿ ಬಿಜೆಪಿ ಅಸ್ತಿತ್ವಕ್ಕೆ ಬರಲು ಮಾಜಿ ಸಿಎಂ ಯಡಿಯೂರಪ್ಪ ಕಾರಣ. ಯಡಿಯೂರಪ್ಪ ಹಾಗೂ ರಾಜ್ಯಾಧ್ಯಕ್ಷ ವಿಜಯೇಂದ್ರ ವಿರುದ್ಧ ಯತ್ನಾಳ್ ಹೇಳಿಕೆಗಳಿಂದ ಪಕ್ಷದ ಕಾರ್ಯಕರ್ತರು ಮುಜುಗರ ಅನುಭವಿಸುವಂತಾಗಿದೆ. ಹೀಗಾಗಿ ಯತ್ನಾಳ್ ವಿಜಯೇಂದ್ರರ ಕ್ಷಮೆ ಕೇಳಬೇಕು. ಪಕ್ಷದ ಹೈಕಮಾಂಡ್ ಇವರನ್ನು ಪಕ್ಷದಿಂದ ವಜಾ ಮಾಡಬೇಕು. ಇಲ್ಲದಿದ್ದರೇ ಬಸನಗೌಡ ಪಾಟೀಲ್ ಯತ್ನಾಳ್ ವಜಾಕ್ಕೆ ಆಗ್ರಹಿಸಿ ಬೆಂಗಳೂರು ಜಾಥಾ ನಡೆಸಬೇಕಾಗುತ್ತದೆ. ಅಗತ್ಯ ಬಿದ್ದರೆ ದೆಹಲಿಗೆ ತೆರಳಿ ಮೋದಿ ಅವರಿಗೆ ಮನವಿ ಸಲ್ಲಿಸಲಾಗುತ್ತದೆ ಎಂದರು.

ಗ್ರಾಪಂ ಸದಸ್ಯ ಆಗದವರು ಸಂಸದರಾಗಿದ್ದಾರೆ: ರಾಜ್ಯ ರಾಜಕಾರಣದಲ್ಲಿ ಏನು ಬೇಕಾದರೂ ನಡೆಯಬಹುದು. ಗ್ರಾಪಂ ಸದಸ್ಯ ಆಗದವರು ಪಾರ್ಲಿಮೆಂಟ್ ಮೆಂಬರ್ ಆಗುತ್ತಾರೆ ಎಂದು ಪರೋಕ್ಷವಾಗಿ ಸಂಸದ ಸುನೀಲ್ ಬೋಸ್ ಬಗ್ಗೆ ವ್ಯಂಗ್ಯವಾಡಿದರು.

ವಿಜಯೇಂದ್ರ ಅಭಿಮಾನಿ ಬಳಗದ ರಾಜ್ಯ ಉಪಾಧ್ಯಕ್ಷ ಮಂಜುನಾಥ್ ಮಾತನಾಡಿದರು. ಯುವ ಮುಖಂಡರಾದ ಕುಮಾರ್ ಗೌಡ, ಅಡುಗೆಪ್ರಭು, ಮೂರ್ತಿ, ನಂದೀಶ್, ನಂದ, ಪ್ರಭು, ವಿಜಯಕುಮಾರ್, ಸೋಮು, ಶಿವು, ಡಾಲಿ, ತುಂಬಲ ನಂದೀಶ್, ಶಂಕರ, ಮಹದೇವ, ಕೆ.ಸಿ.ಮಂಜುನಾಥ್, ಮಹೇಂದ್ರ ಕುಳ್ಳ ಮಹದೇವ್ ಮತ್ತಿತರರಿದ್ದರು.

> ಬಿಜೆಪಿ ಮತ್ತು ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ, ರಾಜ್ಯಾಧ್ಯಕ್ಷ ವಿಜಯೇಂದ್ರ ಬಗ್ಗೆ ಮಾತನಾಡುವ ಯತ್ನಾಳ್ ಮೊದಲೆಲ್ಲಿದ್ದರು ಎಂಬುದನ್ನು ನೆನಪು ಮಾಡಿಕೊಳ್ಳಲಿ. ಯತ್ನಾಳ್ ಅವರನ್ನು ಪಕ್ಷಕ್ಕೆ ಸೇರಿಸಿಕೊಳ್ಳಲು ಮುಂದಾದಾಗ ಸದಾನಂದಗೌಡ, ಪ್ರಹ್ಲಾದ್ ಜೋಷಿ ಸೇರಿದಂತೆ ಅನೇಕ ನಾಯಕರು ಒಪ್ಪಲಿಲ್ಲ. ಅವರೆಲ್ಲರ ಮನವೊಲಿಸಿ ಯಡಿಯೂರಪ್ಪ ಪಕ್ಷಕ್ಕೆ ಸೇರ್ಪಡೆ ಮಾಡಿ ಅವರನ್ನು ಚುನಾವಣೆಯಲ್ಲಿ ಗೆಲ್ಲಿಸಿಕೊಂಡರು. ಇದೀಗ ಯಡಿಯೂರಪ್ಪ, ವಿಜಯೇಂದ್ರ ಅವರ ಬಗ್ಗೆ ಮಾತನಾಡುತ್ತಿದ್ದಾರೆ. ಇದು ಹೀಗೆ ಮುಂದುವರೆದರೆ ಯತ್ನಾಳ್ ಮುಖಕ್ಕೆ ಮಸಿ ಬಳಿದು ಪ್ರತಿಭಟನೆ ಮಾಡಲಾಗುತ್ತದೆ.
> -ಹೆಳವರಹುಂಡಿ ಮಹೇಶ್, ಬಿ.ವೈ.ವಿಜಯೇಂದ್ರ ಅಭಿಮಾನಿ ಬಳಗದ ರಾಜ್ಯಾಧ್ಯಕ್ಷ.

ಮೈಸೂರನ್ನು ಬೃಹತ್ ನಗರಪಾಲಿಕೆ ಮಾಡಲು ಪ್ರಾಮಾಣಿಕ ಪ್ರಯತ್ನ

ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಭರವಸೆ



ಮೈಸೂರಿನ ವಿಜಯನಗರ ಮೂರನೇ ಹಂತದ 'ಸಿ' ಬ್ಲಾಕ್ ಉದ್ಯಾನವನದ ಆವರಣದಲ್ಲಿ ವಾರ್ಡ್ ನಂಬರ್ 8 ಅಭಿವೃದ್ಧಿ ಮತ್ತು ನಿರ್ವಹಣಾ ಸಮಿತಿ ವತಿಯಿಂದ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಸಮಾರಂಭವನ್ನು ಶಾಸಕ ಜಿ.ಟಿ.ದೇವೇಗೌಡ ಉದ್ಘಾಟಿಸಿದರು. ರಾಜೀವ್ ನಗರ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ಎಸ್.ಬಾಲಸುಬ್ರಹ್ಮಣ್ಯಂ, ಸಮಿತಿ ಅಧ್ಯಕ್ಷ ಎಸ್.ಮಂಜಪ್ಪ, ಕಾರ್ಯದರ್ಶಿ ಚೈತನ್ಯಕುಮಾರ್, ಖಜಾಂಚಿ ಟಿ.ಟಿ.ರಮೇಶ್, ಸಂಘಟನಾ ಕಾರ್ಯದರ್ಶಿ ಡಾ.ಮೋಹನ್‌ಕುಮಾರ್ ಇನ್ನಿತರರು ಇದ್ದರು.

ಮೈಸೂರು, ನ.30– ನಗರದ ಹೊರ ವಲಯದ ಸ್ಥಳೀಯ ಸಂಸ್ಥೆಗಳು, ಗ್ರಾಪಂಗಳನ್ನು ಸೇರಿಸಿಕೊಂಡು ಬೃಹತ್ ನಗರ ಪಾಲಿಕೆಯನ್ನಾಗಿ ಮಾಡಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಭರವಸೆ ನೀಡಿದರು.

ವಿಜಯನಗರ ಮೂರನೇ ಹಂತದ 'ಸಿ' ಬ್ಲಾಕ್ ಉದ್ಯಾನವನದ ಆವರಣದಲ್ಲಿ ವಾರ್ಡ್ ನಂಬರ್ 8 ಅಭಿವೃದ್ಧಿ ಮತ್ತು ನಿರ್ವಹಣಾ ಸಮಿತಿ ವತಿಯಿಂದ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ಚಾಮುಂಡೇಶ್ವರಿ ಕ್ಷೇತ್ರ ದೊಡ್ಡದಾದ ಮತ್ತು ವಿಶಾಲವಾಗಿದೆ. ಯಾವುದೇ ಕಡೆ ನಿಂತು ನೋಡಿದರೂ 50 ಕಿ.ಮೀ ತನಕ ವಿಸ್ತರಿಸಿಕೊಂಡಿದೆ. ಹೀಗಾಗಿ, ಅಭಿವೃದ್ಧಿಪಡಿಸುವುದು ದೊಡ್ಡ ಸವಾಲಾಗಿದೆ ಎಂದರು. ಮುಡಾದವರು ಪ್ಲಾನ್‌ಗೆ ಅನುಮೋದನೆ ನೀಡಿ, ಎಲ್ಲಾ ರೀತಿಯ ಶುಲ್ಕಗಳನ್ನು ಕಟ್ಟಿಸಿಕೊಂಡರೂ ಯಾವುದೇ ಅಭಿವೃದ್ಧಿ ಪಡಿಸಿಲ್ಲ. ವಿಜಯನಗರ ಮೂರನೇ ಹಂತ ನಗರಪಾಲಿಕೆಗೆ ಅಧಿಕೃತವಾಗಿ ಹಸ್ತಾಂತರವಾಗದೆ ಇದ್ದರೂ ಹೇಗೋ ಅನುಸರಿಸಿಕೊಂಡು ಮೂಲಸೌಕರ್ಯ ಕಲ್ಪಿಸಲಾಗುತ್ತಿದೆ ಎಂದರು.

ಕುಡಿಯುವ ನೀರನ್ನು ಒದಗಿಸಲು 650 ಕೋಟಿ ರೂ. ವೆಚ್ಚದಲ್ಲಿ ಹಳೆಯ ಉಂಡುವಾಡಿ ಯೋಜನೆ ಆರಂಭಿಸಲಾಗಿದ್ದು, 2025ರ ಅಂತ್ಯಕ್ಕೆ ಪ್ರತಿಯೊಂದು ಮನೆಗೂ ನೀರು ಕೊಡುವ ಗುರಿ ಹೊಂದಲಾಗಿದೆ. ಉದ್ಯಾನವನವನ್ನು ಅಭಿವೃದ್ಧಿಪಡಿಸುವ ಜತೆಗೆ ಚರಂಡಿ, ಒಳಚರಂಡಿ ಸೌಲಭ್ಯವನ್ನು ಕಲ್ಪಿಸಲಾಗುತ್ತಿದೆ ಎಂದರು.

ವಿಜಯನಗರ ನಾಲ್ಕನೇ ಹಂತವನ್ನು ಬೋಗಾದಿ ಪಟ್ಟಣ ಪಂಚಾಯಿತಿಗೆ ಸೇರಿಸಿದಂತೆ ಅನೇಕ ಬಡಾವಣೆಗಳನ್ನು ಬೇರೆ ಬೇರೆ ಪಟ್ಟಣ ಪಂಚಾಯಿತಿಗೆ ಸೇರಿಸಲಾಗಿದೆ. ಪಾರ್ಕ್ ಅಭಿವೃದ್ಧಿ ಮಾಡುವುದರ ಜತೆಗೆ ಸ್ವಚ್ಛತೆಗೆ ಒತ್ತು ನೀಡಲಾಗಿದೆ. ಮನೆ ಶುದ್ಧವಾಗಿದ್ದರೆ ಬೀದಿ ಶುದ್ಧವಾಗಿರುತ್ತದೆ. ಹಾಗಾಗಿ, ಕಸ ಸಂಗ್ರಹಣೆಗೂ ಬೇಕಾದ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದರು.

ಅದ್ದೂರಿ ಮದುವೆ ಮಾಡಲು ಜಮೀನು ಮಾರಾಟ ಮಾಡುತ್ತಿದ್ದಾರೆ. ಭೂಮಿಯನ್ನು ಮಾರಾಟ ಮಾಡದೆ ಉಳಿಸಿಕೊಳ್ಳಬೇಕು. ಇಲ್ಲದಿದ್ದರೆ ಮುಂದೆ ಕಷ್ಟವಾಗಲಿದೆ ಎಂದು ಸಲಹೆ ನೀಡಿದರು. ನಾವೆಲ್ಲರೂ ಕನ್ನಡಿಗರೇ ಆಗಿದ್ದೇವೆ. ಬೇರೆ ಬೇರೆ ರಾಜ್ಯಗಳಲ್ಲಿ ಗಟ್ಟಿ ಧ್ವನಿಯಿಂದ ಮಾತೃ ಭಾಷೆಗೆ ಪ್ರಾತಿನಿಧ್ಯ ಕೊಡುತ್ತಾರೆ. ಆದರೆ, ಕನ್ನಡಿಗರು ಸಹೃದಯಿಗರು, ವಿಶಾಲ ಮನೋಭಾವ ಹೊಂದಿದವರು. ಮಹಾರಾಷ್ಟ್ರ ಭಾಗದಲ್ಲಿ ಮರಾಠಿ, ತಮಿಳುನಾಡು ಭಾಗದಲ್ಲಿ ನೆಲೆಸಿರುವವರು ತಮಿಳು ಮಾತನಾಡುತ್ತಾರೆ. ಆಂಧ್ರಭಾಗದಲ್ಲಿ ತೆಲುಗು ಮಾತನಾಡುತ್ತಾರೆ. ಹಾಗಾಗಿ, ಕರ್ನಾಟಕದಲ್ಲಿ ನೆಲೆಸಿರುವವರಿಗೆ ಕನ್ನಡ ಕಲಿಸುವ ಮತ್ತು ಮಾತನಾಡುವ ಕೆಲಸ ಮಾಡಬೇಕು. ನಾವು ಅವರಿಗೆ ಕನ್ನಡ ಕಲಿಸುವ ಬದಲಿಗೆ ಅವರ ಭಾಷೆಯಲ್ಲೇ ಮಾತನಾಡುತ್ತೇವೆ ಎಂದು ಹೇಳಿದರು.

ಆಂಗ್ಲ ಭಾಷೆಯ ವ್ಯಾಮೋಹದಿಂದ ಕನ್ನಡವನ್ನು ಮರೆಯುತ್ತೇವೆ. ಪ್ರೀತಿ ಬಹಳ ಮುಖ್ಯ. ಪರಸ್ಪರ ಪ್ರೀತಿಯಿಂದ ಒಂದಾಗಿ ಸಾಗಬೇಕು. ಕನ್ನಡದಲ್ಲೇ ವ್ಯವಹಾರ ಮಾಡಬೇಕು. ಶಿಕ್ಷಣದ ಜತೆಗೆ ಮೈಸೂರಿನ ಮಹಾರಾಜರು ಕೊಟ್ಟಿರುವ ಕೊಡುಗೆಗಳನ್ನು ತಿಳಿಸಬೇಕು. ಕಲೆ, ಸಂಸ್ಕೃತಿ, ಸಾಹಿತ್ಯವನ್ನು ಕಲಿಸಬೇಕು. ಶಿಕ್ಷಣದ ಜತೆಗೆ ಮಾನವೀಯ ಮೌಲ್ಯಗಳನ್ನು ಹೊಂದುವಂತೆ ಮಾಡಬೇಕು ಎಂದು ಸಲಹೆ ನೀಡಿದರು.

ಹರಿದು ಹಂಚಿ ಹೋಗಿರುವ ಪ್ರದೇಶವನ್ನು ಒಂದುಗೂಡಿಸಿ ಕರ್ನಾಟಕ ಏಕೀಕರಣ ಮಾಡಲಾಗಿದೆ. ಆಲೂರು ವೆಂಕಟರಾಯರು, ಕುವೆಂಪು, ಬಿಎಂಶ್ರೀ, ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರ ಶ್ರಮ ಅಪಾರವಾಗಿದೆ. ನಾವು ಹಿರಿಯರ ಆಶಯದಂತೆ ಕನ್ನಡತನವನ್ನು ಉಳಿಸಿಕೊಳ್ಳಬೇಕು ಎಂದರು.

ರಾಜೀವ್ ನಗರ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ಎಸ್.ಬಾಲಸುಬ್ರಹ್ಮಣ್ಯಂ ಕನ್ನಡ ನಾಡುನುಡಿಯ ಕುರಿತು ಮುಖ್ಯಭಾಷಣ ಮಾಡಿದರು. ಅಧ್ಯಕ್ಷತೆಯನ್ನು ವಾರ್ಡ್ ನಂಬರ್ 8 ಅಭಿವೃದ್ಧಿ ಮತ್ತು ನಿರ್ವಹಣಾ ಸಮಿತಿ ಅಧ್ಯಕ್ಷ ಎಸ್.ಮಂಜಪ್ಪ ವಹಿಸಿದ್ದರು. ಕಾರ್ಯದರ್ಶಿ ಚೈತನ್ಯಕುಮಾರ್, ಖಜಾಂಚಿ ಟಿ.ಟಿ.ರಮೇಶ್, ಸಂಘಟನಾ ಕಾರ್ಯದರ್ಶಿ ಡಾ.ಮೋಹನ್‌ಕುಮಾರ್, ನಿರ್ದೇಶಕರಾದ ಡಾ.ಮಹದೇವಯ್ಯ, ಡಾ.ಬಿ.ಪಿ.ಪರಶಿವಮೂರ್ತಿ, ಕೆ.ಸಿ.ಜವರೇಗೌಡ, ಕೆ.ನಂಜುಂಡಯ್ಯ, ಶಿವಕುಮಾರ್, ಆರ್.ಎನ್.ಶ್ರೀನಿವಾಸಮೂರ್ತಿ, ಸುವರ್ಣರೆಡ್ಡಿ, ವಿಜಯಕುಮಾರಿ, ಲತಾ, ತಂಗಮ್ಮ ಹಾಜರಿದ್ದರು. ಇದೇ ವೇಳೆ ವಿವಿಧ ಕ್ಷೇತ್ರಗಳ ಸಾಧಕರನ್ನು ಸನ್ಮಾನಿಸಲಾಯಿತು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಅಮರನ್(ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಜಲಂಧರ(ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ವಿಕ್ಕಿ ವಿದ್ಯಾ ಕಾ ವೋ ವಾಲಾ ವಿಡಿಯೋ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಜಲಂಧರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ಮೆಕ್ಯಾನಿಕ್ ರಾಕಿ (ತೆ)	4 ಪ್ರದರ್ಶನಗಳು
ಸಂಗಂ	
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ಲಿಡೋ	
ಲಕ್ಕಿ ಭಾಸ್ಕರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಬಘೀರ (ಕ)	4 ಪ್ರದರ್ಶನಗಳು
ಪ್ರಭಾ	
ಬಘೀರಾ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕಂಗುವಾ (3ಡಿ) (ತ): ಬೆ.10ಕ್ಕೆ, ಮ.1ಕ್ಕೆ, ರಾ.7.15ಕ್ಕೆ, ಅಮರನ್ (ತ): ಸಂ.4ಕ್ಕೆ, ಆನಂದ್ ಶ್ರೀಬಾಲ (ಮ): ರಾ.10.20ಕ್ಕೆ
ಸ್ಕ್ರೀನ್ 2	ಅಮರನ್ (ತ): ಬೆ.9.40ಕ್ಕೆ, ಮ.1ಕ್ಕೆ, ಬಘೀರ (ಕ): ಸಂ.4.15ಕ್ಕೆ, ಗ್ಲಾಡಿಯೇಟರ್ 2 (ಇಂ): ರಾ.7.20ಕ್ಕೆ, ರಾ.10.20ಕ್ಕೆ
ಸ್ಕ್ರೀನ್ 3	ದಿ ಸಬರ್‌ಮತಿ ರಿಪೋರ್ಟ್ (ಹಿಂ): ಬೆ.10.35ಕ್ಕೆ, ರಾ.7.15ಕ್ಕೆ, ಬಘೀರ (ಕ): ಮ.1.10ಕ್ಕೆ, ಲಕ್ಕಿ ಭಾಸ್ಕರ್ (ಮ): ಸಂ.4.15ಕ್ಕೆ, ಮಟ್ಕಾ (ತೆ): ರಾ.9.55ಕ್ಕೆ
ಸ್ಕ್ರೀನ್ 4	ಭೈರತಿ ರಣಗಲ್ (ಕ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಬಘೀರ (ಕ): ಬೆ.10ಕ್ಕೆ, ಮ.3.55ಕ್ಕೆ, ಕಂಗುವಾ (ಕ): ಮ.1ಕ್ಕೆ, ಕಂಗುವಾ (ತ): ಸಂ.6.55ಕ್ಕೆ, ಅಮರನ್ (ತ): ರಾ.9.50ಕ್ಕೆ.
ಸ್ಕ್ರೀನ್ 2	ಅಮರನ್ (ಕ): ಬೆ.10.30ಕ್ಕೆ, ಭೈರತಿ ರಣಗಲ್ (ಕ): ಮ.1.45ಕ್ಕೆ, ಸಂ.4.25ಕ್ಕೆ, ರಾ.7.05ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಭೈರತಿ ರಣಗಲ್ (ಕ): ಬೆ.10ಕ್ಕೆ, ಸಂ.6.30ಕ್ಕೆ, ಅಮರನ್ (ಕ): ಮ.12.40ಕ್ಕೆ, ಕಂಗುವಾ (3ಡಿ)(ತ): ಮ.3.55ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಕಂಗುವಾ (ತ): ಬೆ.10.30ಕ್ಕೆ, ಸಂ.5.20ಕ್ಕೆ, ಅಮರನ್ (ತ): ಮ.2.10ಕ್ಕೆ, ಅಮರನ್ (ಕ): ರಾ.8.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಗಡಿನಾಡು ಕನ್ನಡಿಗ ಪ್ರಶಸ್ತಿ ಪ್ರದಾನ



ಹೆಚ್.ಡಿ.ಕೋಟೆ ತಾಲೂಕಿನ ಡಿ.ಬಿ.ಕುಪ್ಪೆಯ ಚೈತನ್ಯ ಭಾರತಿ ಎಜುಕೇಶನಲ್ ಅಂಡ್ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಕರ್ನಾಟಕ ಸಂಭ್ರಮ ಕನ್ನಡ ರಾಜ್ಯೋತ್ಸವ ಪ್ರಯುಕ್ತ ಗಡಿನಾಡು ಕನ್ನಡಿಗ ಪ್ರಶಸ್ತಿಯನ್ನು ಸಮಾಜ ಸೇವಕ ಪ್ರದೀಪ್ ಕೃಷ್ಣೇಗೌಡ ಅವರಿಗೆ ಪ್ರದಾನ ಮಾಡಲಾಯಿತು. ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಸೋಮಣ್ಣ, ಯಶೋದ ರಾಜಣ್ಣ, ಟ್ರಸ್ಟ್‌ನ ಅಧ್ಯಕ್ಷೆ ನಂದಿನಿ ಉಪಸ್ಥಿತರಿದ್ದರು.

ರೋಹಿಣಿ ಸಿಂಧೂರಿ ವಿರುದ್ಧ ಕ್ರಮ ಕೈಗೊಳ್ಳದಿದ್ದರೆ ಕೋರ್ಟ್ ಮೊರೆ

ಮಾಜಿ ಸಚಿವ ಸಾ.ರಾ.ಮಹೇಶ್ ಎಚ್ಚರಿಕೆ



ಮೈಸೂರಿನ ರಮಾವಿಲಾಸ ರಸ್ತೆಯ ತಮ್ಮ ಕಚೇರಿಯಲ್ಲಿ ಶನಿವಾರ ಮಾಜಿ ಸಚಿವ ಸಾ.ರಾ.ಮಹೇಶ್ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು.

ಮೈಸೂರು, ನ.30(ಬಿಎಲ್‌ಯು)– ಮೈಸೂರು ಜಿಲ್ಲಾಧಿಕಾರಿಯಾಗಿದ್ದ ರೋಹಿಣಿ ಸಿಂಧೂರಿ ವಿರುದ್ಧದ ಭ್ರಷ್ಟಾಚಾರ ಪ್ರಕರಣಗಳ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳದಿದ್ದರೆ ನ್ಯಾಯಾಲಯದ ಮೊರೆ ಹೋಗಿ ಆಕೆಯನ್ನು ಬೆಂಬಲಿಸುತ್ತಿರುವವರನ್ನು ಕೋರ್ಟ್ ಕಟಕಟೆಯಲ್ಲಿ ನಿಲ್ಲಿಸುವೆ ಎಂದು ಮಾಜಿ ಸಚಿವ ಸಾ.ರಾ.ಮಹೇಶ್ ಎಚ್ಚರಿಸಿದ್ದಾರೆ.

ನಗರದ ರಮಾವಿಲಾಸ ರಸ್ತೆಯ ತಮ್ಮ ಕಚೇರಿಯಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರೋಹಿಣಿ ಸಿಂಧೂರಿಗೆ ಶಿಕ್ಷೆ ಆಗಬೇಕೆಂದು ನಾನು ಬಯಸುವುದಿಲ್ಲ. ಆದರೆ ಅವರ ವಿರುದ್ಧ ನಾನು ಮಾಡಿರುವ ಭ್ರಷ್ಟಾಚಾರ ಆರೋಪ ಸಾಬೀತು ಆಗಬೇಕು. ಈ ನಿಟ್ಟಿನಲ್ಲಿ ನಿಷ್ಪಕ್ಷಪಾತ ತನಿಖೆಯಾಗಿ ಸತ್ಯಾಸತ್ಯತೆ ಬಹಿರಂಗಗೊಳ್ಳಬೇಕು ಎಂದು ಆಗ್ರಹಿಸಿದರು.

ಆದರೆ ರೋಹಿಣಿ ಸಿಂಧೂರಿ ಪರ ಐಎಎಸ್ ಅಧಿಕಾರಿಗಳ ತಂಡ ಲಾಬಿ ಮಾಡುತ್ತಿದೆ. ಕಾಂಗ್ರೆಸ್ ಸರ್ಕಾರ ಕೂಡ ಅವರ ಬೆಂಬಲವಾಗಿ ನಿಂತಿದೆ ಎಂದು ಆರೋಪಿಸಿದ ಸಾ.ರಾ.ಮಹೇಶ್, ಇವರೆಲ್ಲಾ ಸೇರಿ ತನಿಖೆಯ ದಿಕ್ಕು ತಪ್ಪಿಸುತ್ತಿದ್ದಾರೆ ಎಂದು ಆರೋಪಿಸಿದರು.

ಒಬ್ಬ ಸಚಿವರ ಮನೆ ನವೀಕರಣಕ್ಕೆ ಐದು ಲಕ್ಷಕ್ಕೆ ಮಿತಿಗೊಳಿಸಲಾಗಿದೆ. ಆದರೆ ಮೈಸೂರು ಜಿಲ್ಲಾಧಿಕಾರಿಗಳ ಅಧಿಕೃತ ನಿವಾಸವನ್ನು ರೋಹಿಣಿ ಸಿಂಧೂರಿ 16.35 ಲಕ್ಷದಲ್ಲಿ ನವೀಕರಣಗೊಳಿಸಿದ್ದಾರೆ. 6 ರೂಪಾಯಿ ಬಟ್ಟೆ ಬ್ಯಾಗ್‌ನ್ನು 48 ಕೋಟಿಗೆ ಖರೀದಿಸಿದ್ದು, ಅದು ಉಗ್ರಾಣದಲ್ಲಿ ಕೊಳೆಯುತ್ತಿದೆ. ತಿರುಪತಿಯಲ್ಲಿ ಕರ್ನಾಟಕ ಭವನ ನಿರ್ಮಾಣಕ್ಕೆ 4 ಜಿ ವಿನಾಯಿತಿಯಲ್ಲಿ 10 ಕೋಟಿ ಬಿಡುಗಡೆ ಮಾಡಿದ್ದರು ಎಂದು ಆಪಾದಿಸಿದರು.

ರೋಹಿಣಿ ಸಿಂಧೂರಿ ಅವರ ಭ್ರಷ್ಟಾಚಾರ ಪ್ರಕರಣದ ಬಗ್ಗೆ ಮೇ.5 2022ರಲ್ಲಿ ಸರ್ಕಾರ ಸಮಿತಿ ರಚನೆ ಮಾಡಿ ಜಯರಾಮ್ ಅವರನ್ನು ತನಿಖಾಧಿಕಾರಿಯಾಗಿ ನೇಮಕ ಮಾಡಿತ್ತು. ಆದರೆ ಜಯರಾಮ್ ಅವರನ್ನು ತನಿಖಾಧಿಕಾರಿ ಸ್ಥಾನದಿಂದ ತೆರವು ಮಾಡಿ ರವಿಕುಮಾರ್ ಅವರನ್ನು ನೇಮಕ ಮಾಡಿದರು. ಹಿಂದಿನ ರಾಜ್ಯದ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್, ಹಾಲಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ರೋಹಿಣಿ ಸಿಂಧೂರಿ ಅವರನ್ನು ಪ್ರಕರಣದಿಂದ ಪಾರು ಮಾಡಲು ಮುಂದಾಗಿದ್ದಾರೆ. ಈ ಮೂಲಕ ಐಎಎಸ್ ತಂಡ ರೋಹಿಣಿ ಸಿಂಧೂರಿ ಬೆಂಬಲವಾಗಿ ನಿಂತಿದೆ ಎಂದು ದೂರಿದರು.

ಹಿಂದಿನ ಸರ್ಕಾರದ ಎಲ್ಲಾ ಹಗರಣಗಳನ್ನು ತನಿಖೆ ಮಾಡಿಸಿ ಕ್ರಮ ಕೈಗೊಳ್ಳುವುದಾಗಿ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಹೇಳುತ್ತಾರೆ. ಹಾಗಾದರೆ ನಾನು ಇಷ್ಟೆಲ್ಲಾ ಸಾಕ್ಷ್ಯಾಧಾರ ಕೊಟ್ಟರೂ ರೋಹಿಣಿ ಸಿಂಧೂರಿ ವಿರುದ್ಧ ಇನ್ನು ಏಕೆ ಕ್ರಮ ಕೈಗೊಂಡಿಲ್ಲ ಎಂದು ಪ್ರಶ್ನಿಸಿದರು.

ಈಗಲಾದರೂ ರೋಹಿಣಿ ಸಿಂಧೂರಿ ವಿರುದ್ಧ ಕ್ರಮ ಕೈಗೊಳ್ಳದಿದ್ದರೆ ಪ್ರಕರಣ ಮುಚ್ಚಿಹಾಕಲು ಯತ್ನಿಸಿರುವ ಎಲ್ಲರನ್ನು ನ್ಯಾಯಾಲಯದ ಕಟಕಟೆಯಲ್ಲಿ ನಿಲ್ಲಿಸುವೆ ಎಂದು ಸಾ.ರಾ.ಮಹೇಶ್ ಎಚ್ಚರಿಸಿದರು.

ಮಾಜಿ ಮೇಯರ್ ಆರ್.ಲಿಂಗಪ್ಪ, ಮಾಜಿ ಕಾರ್ಪೋರೇಟರ್ ಎಸ್ ಬಿಎಂ ಮಂಜು, ಭಾಗ್ಯ, ಶ್ರೀಧರ್, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ದ್ವಾರಕೀಶ್, ಜೆಡಿಎಸ್ ಚಾಮರಾಜ ಕ್ಷೇತ್ರದ ಅಧ್ಯಕ್ಷ ಮಂಜುನಾಥ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಜಿಟಿಡಿ ಜೊತೆಗಿನ ಭಿನ್ನಾಭಿಪ್ರಾಯ ಪರಿಹರಿಸಿಕೊಳ್ಳುತ್ತೇವೆ

ಜೆಡಿಎಸ್ ಒಂದು ಕುಟುಂಬ ಇದ್ದ ಹಾಗೆ. ಜಿ.ಟಿ.ದೇವೇಗೌಡರ ಜೊತೆ ಇರುವ ಸಣ್ಣಪುಟ್ಟ ಭಿನ್ನಾಭಿಪ್ರಾಯ ಪರಿಹರಿಸಿಕೊಳ್ಳುತ್ತೇವೆ ಎಂದು ಮಾಜಿ ಸಚಿವ ಸಾ.ರಾ.ಮಹೇಶ್ ತಿಳಿಸಿದರು.

ಈಗಲೂ ಹೇಳುತ್ತೇನೆ, ಜಿ.ಟಿ.ದೇವೇಗೌಡರೆ, ನಮ್ಮ ನಾಯಕರು. ಮೊನ್ನೆ ಅವರ ಹುಟ್ಟುಹಬ್ಬದ ಸಂದರ್ಭದಲ್ಲಿ ಫೋನ್ ಮೂಲಕ ಶುಭಾಶಯ ಕೋರಿದ್ದೇನೆ ಎಂದು ತಿಳಿಸಿದರು.

ನಾಳೆ ನಡೆಯುವ ಜೆಡಿಎಸ್ ನಾಯಕರ ಸಭೆಗೆ ಜಿ.ಟಿ.ದೇವೇಗೌಡರನ್ನು ಆಹ್ವಾನಿಸಿದ್ದೀರಾ ಎಂಬ ಪ್ರಶ್ನೆಗೆ, ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಬಿಟ್ಟರೆ ಜಿ.ಟಿ.ದೇವೇಗೌಡರು ಪಕ್ಷದಲ್ಲಿ ಉನ್ನತ ಸ್ಥಾನದಲ್ಲಿದ್ದಾರೆ. ಕೋರ್ ಕಮಿಟಿ ಅಧ್ಯಕ್ಷರಾಗಿರುವ ಅವರೇ ನಮ್ಮನ್ನು ಕರೆಯಬೇಕು ಎಂದು ಸಾರಾ.ಮಹೇಶ್ ಸ್ಪಷ್ಟಪಡಿಸಿದರು.

ಮಂಡ್ಯದ ಆದಿಚುಂಚನಗಿರಿ ವಿಶ್ವವಿದ್ಯಾನಿಲಯದ ನಿರ್ದೇಶಕ

ಡಾ.ಶೋಭಿತ್ ರಂಗಪ್ಪ ಅವರಿಗೆ ರಾಷ್ಟ್ರೀಯ ಮನ್ನಣೆ




ಡಾ.ಶೋಭಿತ್ ರಂಗಪ್ಪ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು, ನ.30–ಬಯೋಟೆಕ್ ರಿಸರ್ಚ್ ಸೊಸೈಟಿ ಆಫ್ ಇಂಡಿಯಾದಿಂದ ಆಣ್ವಿಕ ಮತ್ತು ವ್ಯವಸ್ಥಿತ ಜೀವಶಾಸ್ತ್ರದಲ್ಲಿ ಅವರ ಅತ್ಯುತ್ತಮ ಕೊಡುಗೆಗಾಗಿ 2023 ನೇ ಸಾಲಿನ SBS-MKU ಜೀನೋಮಿಕ್ಸ್ ಪ್ರಶಸ್ತಿಯನ್ನು ಆದಿಚುಂಚನಗಿರಿ ವಿಶ್ವವಿದ್ಯಾಲಯದ ನಿರ್ದೇಶಕ ಡಾ ಶೋಭಿತ್ ರಂಗಪ್ಪ ಅವರಿಗೆ ಪ್ರದಾನ ಮಾಡಲಾಯಿತು.

ಈ ಪ್ರಶಸ್ತಿಯು ನಗದು ಬಹುಮಾನ, ಸ್ಮರಣಿಕೆ ಮತ್ತು ಪ್ರಮಾಣಪತ್ರವನ್ನು ಹೊಂದಿರುತ್ತದೆ. ಈ ಪ್ರಶಸ್ತಿ ಪ್ರದಾನ ಸಮಾರಂಭ ಇತ್ತೀಚೆಗೆ ಪುಣೆಯ ಡಿ.ವೈ.ಪಾಟೀಲ್ ಬಯೋಟೆಕ್ನಾಲಜಿ ಮತ್ತು ಬಯೋಇನ್ಫರ್ಮ್ಯಾಟಿಕ್ಸ್ ಸಂಸ್ಥೆಯಲ್ಲಿ ನಡೆಯಿತು.

ನವದೆಹಲಿಯ ಏಮ್ಸ್‌ನ ನಿವೃತ್ತ ಪ್ರಾಧ್ಯಾಪಕ ಪ್ರೊ.ಟಿ.ಪಿ.ಸಿಂಗ್ ಮತ್ತು ಇತರೆ ಪ್ರಸಿದ್ಧ ವಿಜ್ಞಾನಿಗಳ ಸಮ್ಮುಖದಲ್ಲಿ ಈ ಪ್ರಶಸ್ತಿಯನ್ನು ನೀಡಲಾಯಿತು. ಡಾ.ಶೋಭಿತ್ ಅವರು ಮಂಡ್ಯ ಜಿಲ್ಲೆಯ ಆದಿಚುಂಚನಗಿರಿ ವಿಶ್ವವಿದ್ಯಾಲಯದ ಕ್ಯಾನ್ಸರ್ ಸಂಶೋಧನಾ ಸಂಸ್ಥೆಯ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಶೋಭಿತ್ ಅವರು ಸುಮಾರು 100 ಸಂಶೋಧನಾ ಪ್ರಬಂಧಗಳನ್ನು ಮತ್ತು 8 ಪೇಟೆಂಟ್‌ಗಳನ್ನು ಕ್ಯಾನ್ಸರ್ ಸಂಶೋಧನೆಯಲ್ಲಿ ಪ್ರಕಟಿಸಿದ್ದಾರೆ.

3 ದಶಕ ಕಾರ್ಯ ನಿರ್ವಹಿಸಿದ ಪೌರ ಕಾರ್ಮಿಕ ರಂಗ ಅವರಿಗೆ ಬೀಳ್ಕೊಡುಗೆ



ಆರ್.ರಂಗ ಅವರನ್ನು ಪಾಲಿಕೆ ಆರೋಗ್ಯಾಧಿಕಾರಿ ಡಾ. ವೆಂಕಟೇಶ್ ನೇತೃತ್ವದಲ್ಲಿ ಆತ್ಮೀಯವಾಗಿ ಬೀಳ್ಕೊಟ್ಟರು.

ಮೈಸೂರು, ನ.30–ಮೈಸೂರು ನಗರ ಪಾಲಿಕೆಯಲ್ಲಿ ಮೂವತ್ತು ವರ್ಷಗಳ ಕಾಲ ಕಾರ್ಯ ನಿರ್ವಹಿಸಿದ್ದ ಆರ್.ರಂಗ ಅವರು ಇಂದು ನಿವೃತ್ತರಾಗಿದ್ದು, ಪಾಲಿಕೆ ಆರೋಗ್ಯಾಧಿಕಾರಿ ಡಾ. ವೆಂಕಟೇಶ್ ನೇತೃತ್ವದಲ್ಲಿ ಅವರನ್ನು ಪಾಲಿಕೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಆತ್ಮೀಯವಾಗಿ ಬೀಳ್ಕೊಟ್ಟರು.

ಮೂರು ದಶಕಗಳ ಕಾಲ ಕಾರ್ಯ ನಿರ್ವಹಿಸಿರುವ ಅವರನ್ನು, ಕುಟುಂಬದವರಾದ ಕುಪ್ಪಮ್ಮ, ಸುರೇಶ್, ಅಶ್ವಿನಿ, ಸುಧಾ, ಗಣೇಶ್, ಶೋಭಾ, ಪೆರುಮಾಳ್, ನಗರ ಪಾಲಿಕೆ ಖಾಯಂ ಹಾಗೂ ಗುತ್ತಿಗೆ ಪೌರ ಕಾರ್ಮಿಕರ ಮಹಾ ಸಂಘದ ಅಧ್ಯಕ್ಷ ಆರ್.ಹರೀಶ್, ಉಪಾಧ್ಯಕ್ಷ ಅರುಣ್ ಕುಮಾರ್, ಮಹಾ ಪ್ರಧಾನ ಕಾರ್ಯದರ್ಶಿ ಸಿ.ಆರ್.ರಾಚಯ್ಯ, ಕಾರ್ಯದರ್ಶಿ ಜಯರಾಮು, ಮಹಾ ಕಾರ್ಯದರ್ಶಿ ಶಂಕರಪ್ಪ, ಕಾರ್ಯಾಧ್ಯಕ್ಷ ಸ್ವಾಮಿ, ಉನ್ನತ ಸಮಿತಿ ಅಧ್ಯಕ್ಷ ಆರ್ಮುಗಂ, ಉನ್ನತ ಸಮಿತಿ ಕಾರ್ಯದರ್ಶಿ ಯತಿರಾಜ್, ಜಂಟಿ ಕಾರ್ಯದರ್ಶಿಗಳಾದ ಲೋಕೇಶ್, ಸಿ.ಪಿ.ರಾಜೇಶ್, ಮುಖಂಡರಾದ ಶಂಕರ್ ಬಾಬು, ಕಮಲ್ ನಾಥನ್ ಅಭಿನಂದಿಸಿ ಸನ್ಮಾನಿಸಿದರು.

ಮುಕ್ತ ವಿವಿ ಅಕ್ರಮಗಳ ಬಗ್ಗೆ ಮೈಸೂರಲ್ಲಿ ಪತ್ರ ಚಳುವಳಿ

ಪಾಲಿಕೆ ಎದುರಿನ ಅಂಚೆಪೆಟ್ಟಿಗೆ ಮೂಲಕ ಸಿಎಂಗೆ ಪತ್ರ ರವಾನೆ



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಅನವಶ್ಯಕವಾಗಿ ನೇಮಕಾತಿ ನಡೆಯುತ್ತಿದ್ದು, ಸರ್ಕಾರ ಮಧ್ಯ ಪ್ರವೇಶಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ವಹಿಸುವಂತೆ ಆಗ್ರಹಿಸಿ ದೇವರಾಜ ಅರಸು ಪ್ರತಿಷ್ಠಾಪನ ಸಮಿತಿ ವತಿಯಿಂದ ಮೈಸೂರು ಮಹಾನಗರ ಪಾಲಿಕೆ ಮುಂಭಾಗವಿರುವ ಅಂಚೆ ಪೆಟ್ಟಿಗೆ ಬಳಿ ಮುಖ್ಯಮಂತ್ರಿಗೆ ಪತ್ರ ರವಾನಿಸುವ ಮೂಲಕ ಪತ್ರ ಚಳುವಳಿ ನಡೆಸಿದರು.

ಮೈಸೂರು, ನ.30(ಜಿಎ)–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಅನವಶ್ಯಕವಾಗಿ ನೇಮಕಾತಿಗಳು ನಡೆಯುತ್ತಿದ್ದು, ಸರ್ಕಾರ ಮಧ್ಯ ಪ್ರವೇಶಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ವಹಿಸುವಂತೆ ದೇವರಾಜ ಅರಸು ಪ್ರತಿಷ್ಠಾಪನ ಸಮಿತಿ ವತಿಯಿಂದ ಮೈಸೂರು ಮಹಾನಗರ ಪಾಲಿಕೆ ಮುಂಭಾಗವಿರುವ ಅಂಚೆ ಪೆಟ್ಟಿಗೆ ಬಳಿ ಮುಖ್ಯಮಂತ್ರಿಗೆ ಪತ್ರ ರವಾನಿಸುವ ಮೂಲಕ ಪತ್ರ ಚಳುವಳಿ ನಡೆಸಿದರು.

ಈ ವೇಳೆ ಸಮಿತಿ ಅಧ್ಯಕ್ಷ ಜಾಕೀರ್ ಹುಸೇನ್ ಮಾತನಾಡಿ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಸಚಿವರಾಗಿ ನೇಮಕಗೊಂಡಿರುವ ಪ್ರೊ.ಕೆ.ಬಿ.ಪ್ರವೀಣ್ ಈ ಹಿಂದೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪರೀಕ್ಷಾಂಗ ಕುಲಸಚಿವರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಶಿಕ್ಷಣ ಶಾಸ್ತ್ರ ಕೋರ್ಸಿನ ಪ್ರಥಮ ಸೆಮಿಸ್ಟರ್ ಪರೀಕ್ಷೆಯ ಪ್ರಶ್ನೆ ಪತ್ರಿಕೆಯನ್ನು ಸಿದ್ಧಪಡಿಸುವ ವೇಳೆ ಕರ್ತವ್ಯ ಲೋಪವೆಸಗಿದ್ದರು. ಈ ಹಿನ್ನೆಲೆಯಲ್ಲಿ ಎರಡು ವರ್ಷಗಳ ಕಾಲ ವಿಶ್ವವಿದ್ಯಾನಿಲಯದ ಎಲ್ಲಾ ಪರೀಕ್ಷಾ ಕಾರ್ಯಗಳಿಂದ ಹೊರಗಿಡಲಾಗಿತ್ತು ಹಾಗೂ 20 ಸಾವಿರ ರೂ. ದಂಡವನ್ನು ವಿಧಿಸಲಾಗಿತ್ತು. ತದನಂತರ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪರೀಕ್ಷಾಂಗ ಕುಲಸಚಿವರಾಗಿದ್ದಾಗಲೂ ಕೂಡ ಈ ಹಿಂದೆ ನಡೆದ ಪರೀಕ್ಷೆಯೊಂದರಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದ್ದು ಅವರ ವಿರುದ್ಧ ದೂರು ದಾಖಲಾಗಿ ಎಫ್‌ಐಆರ್ ಆಗಿದ್ದರೂ ಕೂಡ ಕಚೇರಿಯಲ್ಲಿ ಯಾವುದೇ ಕ್ರಮ ವಹಿಸಿಲ್ಲ. ಇಂತಹ ಕರ್ತವ್ಯ ಲೋಪ ಆಪಾದನೆಯಲ್ಲಿ ಸಿಲುಕಿದ್ದ ವ್ಯಕ್ತಿಯನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ನಿಲಯದ ಕುಲಸಚಿವರನ್ನಾಗಿ ಮರು ನೇಮಕ ಮಾಡಲಾಗಿದೆ ಎಂದು ಕಿಡಿಕಾರಿದರು.

ದೇವರಾಜ ಅರಸು ಪ್ರತಿಷ್ಠಾಪನ ಸಮಿತಿ ಈ ಹಿಂದೆ ಕುಲಸಚಿವರಾಗಿದ್ದ ಪ್ರೊ.ಕೆ.ಎಲ್.ಎಂ.ಮೂರ್ತಿ 400ಕ್ಕೂ ಅಧಿಕ ಅನವಶ್ಯಕ ನೇಮಕಾತಿಗಳನ್ನು ಮಾಡಿದ್ದರ ವಿರುದ್ಧ ಹೋರಾಟ ನಡೆಸಿ ರಾಜ್ಯದ ಮುಖ್ಯಮಂತ್ರಿಗಳು, ರಾಜ್ಯಪಾಲರು ಹಾಗೂ ಉನ್ನತ ಶಿಕ್ಷಣ ಸಚಿವ ಗಮನಕ್ಕೆ ತಂದು ವರ್ಗಾವಣೆ ಮಾಡಲಾಗಿತ್ತು. ಈ ಮೂಲಕ ನಮ್ಮ ಹೋರಾಟಕ್ಕೆ ಜಯವಾಗಿತ್ತು. ಈಗ ಮತ್ತೆ ಕರ್ನಾಟಕ ರಾಜ್ಯ ಮುಕ್ತ ವಿವಿಗೆ ಕುಲಸಚಿವರಾಗಿ ನೇಮಕಗೊಂಡ ಪ್ರೊ.ಕೆ.ಬಿ.ಪ್ರವೀಣ್ ಈ ಹಿಂದಿನ ಚಾಳಿಯನ್ನು ಮುಂದುವರಿಸಿ ಮತ್ತೆ 45ಕ್ಕಿಂತ ಹೆಚ್ಚು ಜನರನ್ನು ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳನ್ನು ಪ್ರಾದೇಶಿಕ ಕೇಂದ್ರಗಳನ್ನು ಒಳಗೊಂಡಂತೆ ನೇಮಕ ಮಾಡಿದ್ದು ಇದರ ಅವಶ್ಯಕತೆ ಇದೆಯೇ ಎಂದು ಪ್ರಶ್ನಿಸಿದರು.

ಈ ರೀತಿಯ ಅನವಶ್ಯಕ ನೇಮಕಾತಿಯಿಂದ ಮುಕ್ತ ವಿವಿಯನ್ನು ಮುಕ್ತಾಯಗೊಳಿಸುವ ಪ್ರಕ್ರಿಯೆಗಳು ಮತ್ತೆ ಆರಂಭವಾಗಿವೆ. ಇದಕ್ಕೆ ಕಡಿವಾಣ ಹಾಕಿ ಮುಕ್ತ ವಿವಿಯನ್ನು ಇಂತಹ ಭ್ರಷ್ಟರಿಂದ ಉಳಿಸಬೇಕಿದೆ. ಆದ್ದರಿಂದ ಈ ಕೂಡಲೇ ಉನ್ನತ ಶಿಕ್ಷಣ ಸಚಿವರು, ಮುಖ್ಯಮಂತ್ರಿಗಳು, ಕುಲಾಧಿಪತಿಗಳಾದ ರಾಜ್ಯಪಾಲರು ಮಧ್ಯಪ್ರವೇಶಿಸಿ ಸೂಕ್ತ ತನಿಖೆ ನಡೆಸಿ, ತಪ್ಪಿತಸ್ಥರನ್ನು ಶಿಕ್ಷಿಸಿ ತಪ್ಪು ಹಾದಿಯಲ್ಲಿ ಸಾಗುತ್ತಿರುವ ಮುಕ್ತ ವಿವಿಯನ್ನು ಸರಿದಾರಿಗೆ ತಂದು ವಿದ್ಯಾರ್ಥಿಗಳಿಗೆ ಮುಕ್ತ ಶಿಕ್ಷಣವನ್ನು ನೀಡುವಂತಾಗಲು ಸಹಕರಿಸಬೇಕೆಂದು ಒತ್ತಾಯಿಸಿದರು.

ಬೇಡಿಕೆಗಳು : ಐಎಎಸ್ ಅಥವಾ ಕೆಎಎಸ್ ಮಾಡಿರುವವರನ್ನು ಕುಲಸಚಿವರನ್ನಾಗಿ ನೇಮಿಸಬೇಕು. ಅನಗತ್ಯ ಕಟ್ಟಡಗಳ ನಿರ್ಮಾಣಗಳಿಗೆ ಕಡಿವಾಣ ಹಾಕಬೇಕು. ಅನಗತ್ಯವಾಗಿ ಹೆಚ್ಚುವರಿಯಾಗಿ ನೇಮಕ ಮಾಡಿರುವ ನೇಮಕಾತಿಗಳನ್ನು ಈ ಕೂಡಲೇ ರದ್ದುಗೊಳಿಸಬೇಕು. ಸರ್ಕಾರದ ಯಾವುದೇ ಅನುಮತಿ ಪಡೆಯದೆ ನೇಮಕಾತಿ ಮಾಡಿರುವ ಕುಲಪತಿ ಹಾಗೂ ಕುಲಸಚಿವರನ್ನು ಈ ಕೂಡಲೇ ವರ್ಗಾವಣೆ ಅಥವಾ ಅಮಾನತ್ತು ಮಾಡಬೇಕು. ಅನಗತ್ಯವಾಗಿ ನೇಮಕಾತಿಯಲ್ಲಿ ಹಣ ಪಡೆದು ನೇಮಕಾತಿ ಮಾಡಿರುವ ಕುರಿತು ತನಿಖೆ ನಡೆಸಿ ನೇಮಕಾತಿ ರದ್ದು ಪಡಿಸಿ ಅವರ ಹಣವನ್ನು ಹಿಂದಿರುಗಿಸಬೇಕು ಎಂದು ಆಗ್ರಹಿಸಿದರು.

ಈ ವೇಳೆ ರಾಜ್ಯ ಪ್ರಧಾನ ಸಂಚಾಲಕ ಡೈರಿ ವೆಂಕಟೇಶ್, ಪ್ರಶಾಂತ್ ಆರ್ಯ, ರದ್ದಿವುಲ್ಲಾ ಖಾನ್, ಅನಿಷಾ ರಾವ್, ಮೋಹನ್ ಕುಮಾರ್, ಸದಾನಂದ್, ದರ್ಶನ್ ಮತ್ತಿತರರು ಉಪಸ್ಥಿತರಿದ್ದರು.

ತುಂಡು ಜಾಗ ಮಂಜೂರಿಗೆ ಮುಡಾದಿಂದ ಅರ್ಜಿ ಆಹ್ವಾನ

ಮೈಸೂರು, ನ.30(ಪಿಎಂ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ (ಮುಡಾ) ರಚಿತವಾದ ಬಡಾವಣೆಗಳಲ್ಲಿನ ತುಂಡುಜಾಗ ಮಂಜೂರು ಮಾಡಲು ಪ್ರಾಧಿಕಾರದಿಂದ ಅರ್ಜಿ ಆಹ್ವಾನಿಸಲಾಗಿದೆ. ಮುಡಾದಿಂದ ರಚಿಸಲಾದ ಬಡಾವಣೆಗಳಲ್ಲಿ ತುಂಡು ಭೂಮಿ ಅಥವಾ ಉಳಿದಿರುವ ಭೂಮಿಯನ್ನು ವಿಲೇವಾರಿ ಮಾಡುವ ಸಂಬಂಧ ಸರ್ಕಾರವು ಮಾರ್ಗಸೂಚಿಗಳನ್ನು ತಿಳಿಸಿದೆ. ಅದರಂತೆ ಪ್ರಾಧಿಕಾರದಿಂದ ರಚಿತವಾದ ಬಡಾವಣೆಗಳಲ್ಲಿ ಮಂಜೂರಾತಿ ಪಡೆದಿರುವ ಸಾರ್ವಜನಿಕರು ತಮ್ಮ ನಿವೇಶನ, ಮನೆಗಳಿಗೆ ಹೊಂದಿಕೊಂಡಂತೆ ತುಂಡುಜಾಗ ಲಭ್ಯವಿದ್ದಲ್ಲಿ ಅಂತಹ ತುಂಡುಜಾಗವನ್ನು ಮಂಜೂರು ಮಾಡುವ ಸಂಬಂಧ ಮುಡಾಗೆ ಈ ಪ್ರಕಟಣೆ (ಪ್ರಕಟಣೆ ದಿನಾಂಕ ನ.30) ಹೊರಡಿಸಿದ 15 ದಿನಗಳೊಳಗೆ ಅರ್ಜಿ ಸಲ್ಲಿಸಬಹುದು. ನಂತರ ಸರ್ಕಾರದ ಮಾರ್ಗಸೂಚಿಯಂತೆ ನಿಯಮಾನುಸಾರ ಪರಿಶೀಲಿಸಿ ಕ್ರಮ ವಹಿಸಲಾಗುವುದು ಎಂದು ಮುಡಾ ಪ್ರಕಟಣೆ ತಿಳಿಸಿದೆ.

100ನೇ ವರ್ಷದ ಜನ್ಮದಿನದ ನೆನಪುಗಳು



ಲೇಟ್ ಡಾ॥ ಸಿ. ಚೆನ್ನಕೇಶವಯ್ಯ

ಎಂ.ಬಿ.ಬಿ.ಎಸ್., ಡಿ.ಟಿ.ಸಿ.ಡಿ

ಜನ್ಮ ದಿನಾಂಕ: 01.02.1924 ತ್ಯಜಿಸಿದ ದಿನಾಂಕ: 28.02.1985

ನೀವು ನೀಡಿರುವ ಮಾರ್ಗದರ್ಶನದಲ್ಲಿ ನಾವು ನಡೆಯುತ್ತಿದ್ದೇವೆ.
ನಿಮ್ಮ ಆಶೀರ್ವಚನ ನಮಗೆ ಪೂರಕವಾಗಿದೆ

"ಶ್ರೀ ಸ್ವಾಮಿ ವಿವೇಕಾನಂದರ ಘೋಷವಾಕ್ಯ"

"Arise, Awake & Stop Not till the Goal is Reached"

ಇವು ನಮಗೆ ನೀವು ನೀಡಿದ ಪೂರಕವಾಕ್ಯಗಳು
ಸದಾ ನಮ್ಮ ನೆನಪಿನಲ್ಲಿದೆ ನಿಮ್ಮಂತೆಯೇ

ನಿಮ್ಮ ಪ್ರಥಮ ಪುತ್ರಿ ಸಿ. ಮಂಜುಳ, ಅಳಿಯ ವಿ. ಪ್ರಸಾದ್

ಅಭಿನಂದನೆಗಳು



ಶ್ರೀಮಾನ್ ಆರ್. ರಂಗರವರು

ಮೈಸೂರು ಮಹಾನಗರಪಾಲಿಕೆಯಲ್ಲಿ ಪೌರಕಾರ್ಮಿಕನಾಗಿ
30 ವರ್ಷ ಕಾಲ ಸೇವೆ ಸಲ್ಲಿಸಿ ಇಂದು ನಿವೃತ್ತಿಯಾಗಿರುತ್ತಾರೆ.

ಇವರಿಗೆ ಅಭಿನಂದನೆಗಳನ್ನು ಸಲ್ಲಿಸುವವರು ಪತ್ನಿ ಕುಪ್ಪಮ್ಮ,
ಮಗ ಸುರೇಶ್, ಸೊಸೆ ಅಶ್ವಿನಿ, ಮಗಳು ಸುಧಾ,
ಅಳಿಯ ಗಣೇಶ್, ಮಗಳು ಶೋಭಾ, ಅಳಿಯ ಪೆರುಮಾಳ್,
ಮೊಮ್ಮಕ್ಕಳು ಮತ್ತು ಕುಟುಂಬವರ್ಗ ಹಾಗೂ
ಮೈಸೂರು ಮಹಾನಗರಪಾಲಿಕೆ ಖಾಯಂ ಹಾಗೂ ಗುತ್ತಿಗೆ ಪೌರಕಾರ್ಮಿಕರ ಮಹಾ ಸಂಘ

Mobile: 9880524249 / 7022362616



ಶುಭಕೋರುವವರು : ಮೈಸೂರು ಬಿ. ಗಣೇಶ್ ಅಣ್ಣರವರ ಅಭಿಮಾನಿಗಳು